ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಟೀಮ್ ಇಂಡಿಯಾ ಸಂಘಟಿತ ಆಟಕ್ಕೆ ಒಲಿದ ಚಾಂಪಿಯನ್ಸ್ ಟ್ರೋಫಿ
## ಫೈನಲ್ ಪಂದ್ಯದಲ್ಲಿ ಅಬ್ಬರಿಸಿದ ಹಿಟ್ ಮ್ಯಾನ್ (76) ಪಂದ್ಯ ಶ್ರೇಷ್ಠ
## ಸ್ಪಿನ್ ಚತುರ್ಥರ ಮೋಡಿಗೆ ಕಿವಿ ಪಡೆ ಕಂಗಾಲು, ಕಪ್ ಕನಸು ಭಗ್ನ
## 3ನೇ ಬಾರಿ ಟ್ರೋಫಿ ಗೆದ್ದು ಆಸೀಸ್ ದಾಖಲೆ ಸರಿಗಟ್ಟಿದ ಭಾರತ

ನ್ಯೂಜಿಲೆಂಡ್ **251/7**

ಇಂಡಿಯಾ **253/8**

# ಚಾಂಪಿಯನ್ಸ್!

**ದುಬೈ:** ಕೋಟ್ಯಂತರ ಭಾರತೀಯ ಕ್ರಿಕೆಟ್ ಪ್ರೇಮಿಗಳ ಕನಸು, ಪ್ರಾರ್ಥನೆ ನಿಜವಾಗಿದೆ. ಭಾರತ ತಂಡ 9ನೇ ಆವೃತ್ತಿಯ ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಮುಡಿಗೇರಿಸಿಕೊಳ್ಳುವ ಮೂಲಕ ತನ್ನ ಅಜೇಯ ಅಭಿಯಾನವನ್ನು ಭರ್ಜರಿಯಾಗಿ ಮುಗಿಸಿದೆ. ಸೆಮಿ ಫೈನಲ್‌ನಲ್ಲೂ ಭಾರತದ ಎದುರು ಸೋತಿದ್ದ ಬಲಿಷ್ಠ ನ್ಯೂಜಿಲೆಂಡ್ ತಂಡ ಟೀಮ್ ಇಂಡಿಯಾದ ಸ್ಪಿನ್ ಜಾದೂಗೆ ಮತ್ತೊಮ್ಮೆ ತಲೆ ಬಾಗಿ ಫೈನಲ್‌ನಲ್ಲಿ 4 ವಿಕೆಟ್‌ಗಳಿಂದ ಸೋಲೊಪ್ಪಿಕೊಂಡಿತು. ಚಾಂಪಿಯನ್ಸ್ ಟ್ರೋಫಿ ಫೈನಲ್‌ವರೆಗೂ ಯಾವ ಪಂದ್ಯವನ್ನೂ ಸೋಲದೆ ಸಾಗಿ ಬಂದ ರೋಹಿತ್ ಪಡೆ, ನಿರ್ಣಾಯಕ ಪಂದ್ಯದಲ್ಲೂ ಸಂಘಟಿತ ಆಟವನ್ನು ಪ್ರದರ್ಶಿಸಿ, ಕಿವೀಸ್ ತಂಡವನ್ನು ಮಣಿಸುವ ಮೂಲಕ ಮೂರನೇ ಬಾರಿಗೆ ಚಾಂಪಿಯನ್ಸ್ ಟ್ರೋಫಿ ಕಪ್ ಎತ್ತಿ ಹಿಡಿದಿದೆ. ಇದರೊಂದಿಗೆ ಈ ಹಿಂದೆ ಸತತ ಎರಡು ಬಾರಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಫೈನಲ್‌ನಲ್ಲಿ ಸೋತ ಬೇಸರವನ್ನು

ಮರೆಸಿದೆ. ಜತೆಗೆ 25 ವರ್ಷಗಳ ಹಿಂದೆ ನೈರೋಬಿಯಲ್ಲಿ ನಡೆದ ಕಿವೀಸ್ ಎದುರಿನ ಫೈನಲ್ ಪಂದ್ಯದಲ್ಲಿ ಸೋಲಿಗೆ ಸೇಡು ತೀರಿಸಿಕೊಂಡಿದೆ. ದುಬೈಯ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಮೊದಲು ಬ್ಯಾಟಿಂಗ್ ನಡೆಸಿದ ನ್ಯೂಜಿಲೆಂಡ್ ನಿಗದಿತ 50 ಓವರ್‌ಗಳಲ್ಲಿ 251 ರನ್‌ಗಳನ್ನು ಪೇರಿಸಿತು. ಪಂದ್ಯ ಉಳಿಸಿಕೊಳ್ಳಲು ಕೊನೆಯವರೆಗೂ ಹೋರಾಡಿದ ಕಿವೀಸ್ ತಂಡ, ಭಾರತದ ಬೌಲರ್‌ಗಳು ಮತ್ತು ಬ್ಯಾಟರ್‌ಗಳ ಸಂಘಟಿತ ಹೋರಾಟಕ್ಕೆ ಮಣಿಯಬೇಕಾಯಿತು. ಟೂರ್ನಿಯಲ್ಲಿ ಕಳಪೆ ಬ್ಯಾಟಿಂಗ್ ಪ್ರದರ್ಶಿಸಿ ಟೀಕೆ ಗುರಿಯಾಗಿದ್ದ ರೋಹಿತ್ ನಿರ್ಣಾಯಕ ಪಂದ್ಯದಲ್ಲಿ 76 ರನ್ (83 ಬಾಲ್) ಬಾರಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಲ್ಲದೆ ಅರ್ಹವಾಗಿಯೇ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ವಿವರಪುಟ → 12

ಕರ್ನಾಟಕ ಸರ್ಕಾರ
**ಕಾರ್ಮಿಕ ಇಲಾಖೆ**
**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

**ಸಂಚಾರಿ ಆರೋಗ್ಯ ಘಟಕ**
**ವಾಹನಗಳ ಚಾಲನಾ ಕಾರ್ಯಕ್ರಮ**

**ದಿನಾಂಕ:** 10.03.2025, ಸೋಮವಾರ, **ಸಮಯ:** ಬೆಳಿಗ್ಗೆ 10.00 ಗಂಟೆಗೆ
**ಸ್ಥಳ :** ವಿಧಾನಸೌಧ ಪೂರ್ವ ದ್ವಾರ, ಬೆಂಗಳೂರು

ಮಾನ್ಯ ಕಾರ್ಮಿಕ ಇಲಾಖೆ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರಾದ **ಶ್ರೀ ಸಂತೋಷ್ ಎಸ್. ಲಾಡ್** ರವರು ಇಲಾಖಾ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿರುವುದು.

**ಸರ್ವರಿಗೂ ಆದರದ ಸ್ವಾಗತ**

**ಡಾ|| ಶಾಲಿನಿ ರಜನೀಶ್,** ಭಾ. ಆ. ಸೇ
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ

**ಡಾ|| ಎನ್ .ವಿ. ಪ್ರಸಾದ್,** ಭಾ. ಆ. ಸೇ
ಸರ್ಕಾರದ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ

**ಶ್ರೀಮತಿ ಭಾರತಿ. ಡಿ,** ಭಾ.ಆ.ಸೇ.
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

**ಡಾ|| ಎಚ್.ಎನ್. ಗೋಪಾಲಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕಾರ್ಮಿಕ ಇಲಾಖೆ

**ಮಂಡಳಿಯ ಕಳೆದ ಎರಡು ವರ್ಷದ ಪ್ರಮುಖ ಸಾಧನೆಗಳು**

- **5.08 ಲಕ್ಷ** ಕಟ್ಟಡ ಕಾರ್ಮಿಕರನ್ನು ಫಲಾನುಭವಿಗಳಾಗಿ ನೋಂದಾಯಿಸಲಾಗಿರುತ್ತದೆ
- **32.05 ಲಕ್ಷ ಫಲಾನುಭವಿಗಳು** ಮಂಡಳಿಯ ವಿವಿಧ ಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ
- ನೋಂದಾಯಿತ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳಡಿ **ರೂ. 1744 ಕೋಟಿ** ಮೊತ್ತದ ಸಹಾಯಧನವನ್ನು ವಿತರಿಸಲಾಗಿರುತ್ತದೆ
- **ರೂ. 2241 ಕೋಟಿ** ಸುಂಕ ಸಂಗ್ರಹಿಸಲಾಗಿರುತ್ತದೆ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

**"ಶ್ರಮ ಮೇವ ಜಯತೆ"**

## ಸಮಾಚಾರ ಸಣ್ಣದಲ್ಲ

### ಕಕ್ಷಿದಾರರು ಸಂಧಾನದಿಂದ ವ್ಯಾಜ್ಯ ಬಗೆಹರಿಸಿಕೊಳ್ಳಿ

**ರಾಯಬಾಗ:** ಕಕ್ಷಿದಾರರು ತಮ್ಮ ತಮ್ಮಲ್ಲಿರುವ ವ್ಯಾಜ್ಯಗಳನ್ನು ಸಂಧಾನದ ಮೂಲಕ ಬಗೆ ಹರಿಸಿಕೊಂಡು ನೆಮ್ಮದಿಯಿಂದ ಜೀವನ ನಡೆಸಬೇಕೆಂದು ಹಿರಿಯ ದಿವಾಣಿ ನ್ಯಾಯಾಧೀಶ ಜಗದೀಶ ಬಿಸಿರೊಟ್ಟಿ ಹೇಳಿದರು. ಪಟ್ಟಣದ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಬೃಹತ್ ಲೋಕ ಅದಾಲತ್‌ನಲ್ಲಿ ಮಾತನಾಡಿದ ಅವರು ಈ ದಿನ ಒಟ್ಟು 1952 ವಿವಿಧ ಪ್ರಕರಣಗಳನ್ನು ಲೋಕ ಅದಾಲತ್ತದಲ್ಲಿ ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಲಾಗಿದೆ. ಜೊತೆಗೆ ಎರಡು ವೈವಾಹಿಕ ಜೋಡಿಗಳನ್ನು ಒಂದುಗೂಡಿಸಿ ಕಳುಹಿಸಲಾಗಿದೆ ಎಂದರು. ಇದೇ ಸಂದರ್ಭದಲ್ಲಿ ಕಾನೂನು ಸೇವಾ ಪ್ರಾಧಿಕಾರದಿಂದ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ನ್ಯಾಯಾಧೀಶರು ಚಾಲನೆ ನೀಡಿದರು. ಪ್ರಧಾನ ದಿವಾಣಿ ನ್ಯಾಯಾಧೀಶೆ ಪ್ರಿಯಾ, ವಕೀಲರ ಸಂಘದ ಅಧ್ಯಕ್ಷ ಪಿ.ಎಮ್.ದರೂರ, ಸ.ಸ.ಅಭಿಯೋಜಕರಾದ ಮಹಾವೀರ ಗಂಡವ್ವಗೋಳ, ಹಣಮಂತ ಅಚನಟ್ಟಿ, ಎಸ್.ಬಿ.ಬಿರಾದಾರ ಪಾಟೀಲ, ಬಿ.ಕೆ.ಶಿಂಗಾಡೆ, ಯು.ಎನ್.ಉಮ್ರಾಣಿ, ಎ.ಬಿ.ಮಂಗಸೂಳಿ, ಎಸ್.ಕೆ.ರೆಂಟೆ, ಜಿ.ಎಸ್.ಪವಾರ, ಬಿ..ಬಿ.ಈಟಿ, ಎನ್.ಎಸ್.ಒಡೆಯರ, ಅಜಿತಖಿಚಡೆ, ಬಿ.ಆರ್.ಪಡಲಾಳೆ ಉಪಸ್ಥಿತರಿದ್ದರು.

### ಸರಕಾರದ ಯೋಜನೆ ಸದುಪಯೋಗವಾಗಲಿ

**ಕಾಗಾವಾಡ:** ಮಹಿಳಾ ಸಬಲೀಕರಣಕ್ಕಾಗಿ ಸರಕಾರ ಸಾಕಷ್ಟು ಯೋಜನೆಗಳನ್ನು ರೂಪಿಸಿದ್ದು, ಮಹಿಳೆಯರು ಅವುಗಳ ಸದುಪಯೋಗ ಪಡೆದು, ಆರ್ಥಿಕವಾಗಿ ಸಬಲರಾಗಬೇಕು. ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಬೇಕೆಂದು ತಾ.ಪಂ. ಎಓ ವೀರಣ್ಣ ವಾಲಿ ತಿಳಿಸಿದ್ದಾರೆ. ಅವರು, ಶನಿವಾರ ಮಾ.8 ರಂದು ತಾಲೂಕಿನ ಮಂಗಸೂಳಿ ಗ್ರಾಮ ಪಂಚಾಯತ ಸಭಾಭವನದಲ್ಲಿ ತಾಲೂಕಾಡಳಿತ ಮತ್ತು ಗ್ರಾಮ ಪಂಚಾಯತಿ ನೇತೃತ್ವದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡುತ್ತಿದ್ದರು. ಕಾರ್ಯಕ್ರಮದಲ್ಲಿ ಮನರೇಗಾ ಯೋಜನೆಯಡಿ 100 ದಿನ ಕೂಲಿ ಪೂರೈಸಿದ ಕೂಲಿಕಾರರಿಗೆ, ಉತ್ಕೃತ್ತಮ ಅಂಗನವಾಡಿ ಶಿಕ್ಷಕಿಯರಿಗೆ, ಆಶಾ ಕಾರ್ಯಕರ್ತೆಯರಿಗೆ ಗ್ರಾಮ ಕಾಯಕ ಮಿತ್ರ, ಎಂಬಿಕೆ, ಪಶುಸಕಿ, ಕೃಷಿಸಕಿ ಹಾಗೂ ಸ್ವ-ಸಹಾಯ ಸಂಘದ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ ಅಧ್ಯಕ್ಷರು, ಉಪಾಧ್ಯಕ್ಷರು, ಮಾಜಿ ಗ್ರಾ.ಪಂ. ಅಧ್ಯಕ್ಷರು, ಮಹಿಳಾ ಸಂಘದ ಪದಾಧಿಕಾರಿಗಳು, ಗ್ರಾಮ ಪಂಚಾಯತ ಸಿಬ್ಬಂದಿಗಳು, ನರೇಗಾ ಕೂಲಿಕಾರರು ಹಾಜರಿದ್ದರು.

### ಸಾಧಕ ಮಹಿಳೆಯರನ್ನು ಪ್ರೋತ್ಸಾಹಿಸಿ

**ರಾಮದುರ್ಗ:** ಮಹಿಳಾ ದಿನಾಚರಣೆ ಹೆಸರಿಗಷ್ಟೇ ಮಾಡಿದರೆ ಸಾಲದು, ಸಾಧನೆ ಮಾಡಿದ ಮಹಿಳೆಯರನ್ನು ಗುರುತಿಸಿ, ಅವರನ್ನು ಸತ್ಕರಿಸಿ ಪ್ರೋತ್ಸಾಹ ನೀಡಿದಲ್ಲಿ ಸಮಾಜದಲ್ಲಿರುವ ಮಹಿಳೆಯರಿಗೆ ಗೌರವ ನೀಡಿದಂತಾಗುತ್ತದೆ ಎಂದು ಪ್ರೊ.ಎಂ.ಬಿ.ಹೊಳಿಮಠ ಹೇಳಿದರು. ಜೆಸಿಐ ರಾಮದುರ್ಗಘಟಕದ ನೇತೃತ್ವದಲ್ಲಿ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ವಸತಿ ನಿಲಯದಲ್ಲಿ ಏರ್ಪಡಿಸಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಮಹಿಳಾ ದಿನಾಚರಣೆ ಮಾಡುತ್ತಿರುವ ಅರ್ಥವನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಂಡಲ್ಲಿ ದಿನಾಚರಣೆ ಆಚರಣೆಗೆ ಮಹತ್ವ ದೊರೆಯುತ್ತದೆ ಎಂದು ಮಹಿಳಾ ದಿನಾಚರಣೆ ಹಿನ್ನಲೆಯನ್ನು ಪರಿಚಯಿಸಿದರು. ಇದೇ ಸಂದರ್ಭಧಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಎಸ್.ಎಂ.ವಾಲಿ, ಚರ್ಮರೋಗ ತಜ್ಞೆ ಡಾ.ಭಾಗ್ಯಶ್ರೀ ಅಂಕದವರ, ನಿಲಯ ಪಾಲಕಿಯರಾದಎಸ್.ಆರ್.ತೋಳಗಟ್ಟಿ, ಭಾರತಿಗೌಡರ, ಆಶಾ ಕಾರ್ಯಕರ್ತೆ ವಿಜಯಲಕ್ಷ್ಮೀ ಶೆಟ್ಟರಅವರನ್ನು ಸಂಸ್ಥೆಯಿಂದ ಗೌರವಿಸಲಾಯಿತು. ಜೆಸಿಐ ರಾಮದುರ್ಗ ಘಟಕದ ನಿಕಟಪೂರ್ವ ಅಧ್ಯಕ್ಷರುಗಳು, ಸದಸ್ಯರು, ವಿದ್ಯಾರ್ಥಿನಿಯರು ಸೇರಿದಂತೆ ಇತರರಿದ್ದರು. ಅಧ್ಯಕ್ಷತೆ ವಹಿಸಿ, ಜೆಸಿಐ ರಾಮದುರ್ಗ ಘಟಕದ ಅಧ್ಯಕ್ಷ ಶಂಕರ ಜಿರಂಕಳಿ ಮಾತನಾಡಿದರು.

### ಅಗಲಿದ ಜೀವ

#### ನೀಲಕಂಠೆಪ್ಪ ಬಡಿಗೇರ

**ಬೈಲಹೊಂಗಲ:** ತಾಲೂಕಿನ ಸಂಪಗಾಂವ ಗ್ರಾಮದ ನಿವಾಸಿ ನೀಲಕಂಠೆಪ್ಪ ಸೋಮಪ್ಪ ಬಡಿಗೇರ(80) ರವಿವಾರ ನಿಧನರಾದರು. ಮೃತರಿಗೆ ಪತ್ನಿ, ಹಾಗೂ ಅಪಾರ ಬಂಧು ಬಳಗ ಇದ್ದಾರೆ.

{ಡಾ.ಎಂ.ಬಿ.ಪಾಟೀಲ } ಸಚಿವ

ರೈತರ ತಾವು ಬೆಳೆದ ಬೆಳೆಗಳಿಗೆ ತಾವೇ ಬೆಲೆ ನಿರ್ಧರಿಸುವ ಮಟ್ಟಕ್ಕೆ ಬೆಳೆಯಬೇಕು ಎಂಬುದು ಸಹಕಾರಿ ಭೀಷ್ಮ ಕೆ.ಎಚ್. ಪಾಟೀಲರ ಕನಸು ಹಾಗೂ ಆಶಯವಾಗಿತ್ತು. ನೂರಾರು ಜವಳಿ ಗಿರಣಿ ಆರಂಭಿಸಿ ಜವಳಿ ಉದ್ಯಮದಲ್ಲಿ ಕರ್ನಾಟಕ ಮ್ಯಾಂಚೆಸ್ಟರ್ ಆಗುವ ಬಯಕೆಯನ್ನು ಅವರು ಹೊಂದಿದ್ದರು.

---

ಸಂಕೋನಟ್ಟಿ ಗ್ರಾಮದಲ್ಲಿ ಶಿವಾನುಭವಗೋಷ್ಠಿಯಲ್ಲಿ ಮೋಟಗಿಮಠದ ಪ್ರಭು ಚನ್ನಬಸವ ಸ್ವಾಮೀಜಿ

# ಸಂಸ್ಕಾರ, ಸಂಸ್ಕೃತಿ, ಆದರ್ಶ ಬದುಕಿಗೆ ಅಡಿಪಾಯ

**ಅಥಣಿ:** ಅಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ, ಸಾವಿನಿಂದ ಸಾವಿಲ್ಲದೆಡೆಗೆ ಮುನ್ನಡೆಯುವ ಗುರಿ ನಮ್ಮದಾಗಬೇಕು. ಮನುಷ್ಯ ಸ್ವಾರ್ಥಕ್ಕಾಗಿ ಆದರ್ಶ ಮೌಲ್ಯಗಳನ್ನು ಬಲಿ ಕೊಡಬಾರದು. ನಮ್ಮ ಆದರ್ಶದ ಬದುಕಿಗೆ ಸಂಸ್ಕಾರ ಮತ್ತು ಸಂಸ್ಕೃತಿ ಅಡಿಪಾಯವಿದ್ದಂತೆ. ನಮ್ಮ ಆದರ್ಶದ ಬದುಕು ಮುಂದಿನ ಜನಾಂಗಕ್ಕೆ ಮಾದರಿಯಾಗಬೇಕು ಎಂದು ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ನುಡಿದರು.

ಅವರು ರವಿವಾರ ತಾಲೂಕಿನ ಸಂಕೋನಟ್ಟಿ ಗ್ರಾಮದ ನಂದೀಶವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಿವಾನುಭವ ಗೋಷ್ಠಿಯ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು. ನಮ್ಮ ಬದುಕು ಇನ್ನೊಬ್ಬರಿಗೆ ಮಾದರಿಯಾಗಬೇಕೆ ವಿನಃ ಇನ್ನೊಬ್ಬರಿಗೆ ಮಾರಕವಾಗಬಾರದು. ಸಂಸಾರದ ವ್ಯಾಮೋಹದಲ್ಲಿ ಅತಿಯಾದ ಸ್ವಾರ್ಥ ಮನೋಭಾವದಿಂದ ಜೀವನದ ಮೌಲ್ಯಗಳನ್ನು ಮರೆಯಬಾರದು. ಸಾಕು ಎನ್ನುವವನೇ ಸಾಹುಕಾರ, ಬೇಕು ಎನ್ನುವವನೇ ಬಡವ ಎಂಬುದನ್ನ ಅರಿತುಕೊಳ್ಳಬೇಕು. ಉದಾತ್ತ ಜೀವನ ಮೌಲ್ಯಗಳನ್ನು ಸಂಪಾದಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವುದೇ ನಿಜವಾದ ಧರ್ಮ. ನಮ್ಮ ಬದುಕನ್ನು ಸುಂದರ, ಶುದ್ಧಗೊಳಿಸುವುದೇ ಧರ್ಮದ ಗುರಿಯಾಗಿದೆ ಎಂದು ಹೇಳಿದ ಅವರು ನಂದೀಶ ಟೋಪಗಿ ಮಾಸ್ತರ ಆದರ್ಶ ಶಿಕ್ಷಕರಾಗಿ, ಇಂಚಗೇರಿ ಸಂಪ್ರದಾಯದ ಶರಣರಾಗಿ ಅನೇಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ಮಾರ್ಗದರ್ಶನದಲ್ಲಿ ರಾಜಶೇಖರ ಟೋಪಗಿ ಅವರು ಕೂಡ ಅನೇಕ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ತಮ್ಮ ಸೇವೆ ಸಲ್ಲಿಸುವುದರ ಜೊತೆಗೆ ತಂದೆಯವರ ಸ್ಮರಣಾರ್ಥ ಪ್ರತಿ ವರ್ಷ ಧರ್ಮ ಸಭೆಯ ಚಿಂತನ ಘೋಷ್ಠಿಗಳನ್ನು ನಡೆಸಿಕೊಂಡು ಬರುತ್ತಿರುವುದು ಒಳ್ಳೆಯ ಬೆಳವಣಿಗೆ. ಅವರ ಸಾಮಾಜಿಕ ಮತ್ತು ಧಾರ್ಮಿಕ ಸೇವೆಗಳು ನಿರಂತರವಾಗಿ ಜರುಗಲಿ ಎಂದು ಶುಭ ಹಾರೈಸಿದರು.

ಶಿವಾನುಭವ ಗೋಷ್ಠಿಯಲ್ಲಿ ಮೋಟಗಿಮಠದ ಪ್ರಭು ಚನ್ನಬಸವ ಸ್ವಾಮೀಜಿ ಮಾತನಾಡಿದರು.

> ಇಂದಿನ ಒತ್ತಡದ ಬದುಕಿನಲ್ಲಿ ಆರೋಗ್ಯದ ಜೊತೆಗೆ ಆಧ್ಯಾತ್ಮದ ಬದುಕು ಅಗತ್ಯವಿದೆ. ಮಕ್ಕಳಿಗೆ ಶಿಕ್ಷಣ ಜೊತೆಗೆ ಸಂಸ್ಕಾರವನ್ನು, ಮಾನವೀಯ ಮೌಲ್ಯಗಳನ್ನ ಕಲಿಸಿ ಕೊಡಬೇಕಾದ ಅಗತ್ಯವಿದೆ. ನಂದೀಶ ಮಾಸ್ತರ್ ಅವರ ಬದುಕು ಎಲ್ಲರಿಗೂ ಪ್ರೇರಣೆಯಾಗಬೇಕು.
>
> ಡಾ.ಮಹಾಂತಪ್ರಭು ಸ್ವಾಮೀಜಿ, ಶೇಗುಣಸಿಯ ವಿರಕ್ತಮಠ

ಶೇಗುಣಸಿಯ ವಿರಕ್ತಮಠದ ಡಾ. ಮಹಾಂತ ಪ್ರಭು ಸ್ವಾಮೀಜಿ ಮಾತನಾಡಿ ಸಮಾಜಮುಖಿ ಸೇವೆಗಳನ್ನು ಮಾಡುವ ಮೂಲಕ ನಮ್ಮ ಬದುಕನ್ನ ಸುಂದರ ಮಾಡಿಕೊಳ್ಳಬೇಕು. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬಂತೆ ನಮ್ಮ ಗುರು ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದಾಗ ನಮ್ಮ ಬದುಕು ಶ್ರೇಷ್ಠವಾಗುತ್ತದೆ ಎಂದರು.

ಖ್ಯಾತ ಸಾಹಿತಿ ಡಾ.ವ್ಹಿ. ಎಸ್ ಮಾಳಿ ಮಾತನಾಡಿ, ನಾವು ಬದುಕಿನಲ್ಲಿ ದೀರ್ಘಕಾಲ ಬದುಕುತ್ತೇನೆಂದು ಸಂಪತ್ತು ಗಳಿಸಬೇಕು, ಒಂದಿಲ್ಲ ಒಂದು ದಿನ ಸಾಯುತ್ತೇನೆ ಎಂದು ಅರಿತು ಸಮಾಜಮುಖಿ ಸೇವೆಗಳನ್ನು ಮಾಡಬೇಕು. ಪುಣ್ಯದ ಕರ್ಮಗಳನ್ನು ಮಾಡಿ ಪುಣ್ಯಾತ್ಮರನ್ನು ಸ್ಮರಿಸುವುದು ಪುಣ್ಯಸ್ಮರಣೆಯ ಕಾರ್ಯವಾಗಿದೆ. ನಂದೀಶ ಟೋಪಗಿ ಶಿಕ್ಷಕರು ನಮ್ಮೆಲ್ಲರಿಗೆ ಆದರ್ಶಪ್ರಾಯರು. ಅವರ ಸ್ಮರಣೆಯಲ್ಲಿ ಈ ನಂದೀಶವನದಲ್ಲಿ ಆಧ್ಯಾತ್ಮ ಚಿಂತನ ಘೋಷ್ಠಿಗಳು ನಡೆಯುತ್ತಿರುವುದು ಅವಿಸ್ಮರಣೀಯ ಕಾರ್ಯವಾಗಿದೆ ಎಂದು ಹೇಳಿದರು.

ಭೂಕೈಲಾಸ ಆಶ್ರಮದ ಮಹಾದೇವ ಮಹಾರಾಜರು, ತೇವರಟ್ಟಿಯ ವಿಠ್ಠಲ ಮಹಾರಾಜರು, ಲಕ್ಕಣ್ಣ ಮಹಾರಾಜರು, ಅಪ್ಪಾಸಾಬ ಮಹಾರಾಜರು ಮಾತನಾಡಿದರು. ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ಶ್ಯಾಮ ಪೂಜಾರಿ, ದಿಗ್ವಿಜಯಸಿಂಗ್ ಪವಾರದೇಸಾಯಿ, ಶ್ರೀಶೈಲ ನಾರಗೊಂಡ, ಮಹಾವೀರ ಪಡನಾಡ, ರಮೇಶಗೌಡ ಪಾಟೀಲ, ಧರೆಪ್ಪ ಟಕ್ಕಣ್ಣವರ, ವಿಜಯ ಅಡಹಳ್ಳಿ, ಮುರುಗೇಶ ಕುಮಟಳ್ಳಿ, ರಾಜಶೇಖರ ಟೋಪಗಿ, ವಿಜಯ ಹುದ್ದಾರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

---

## ಶಿಕ್ಷಣದ ಜತೆಜತೆಗೆ ಸಂಸ್ಕಾರ ಅಗತ್ಯ

**ರಾಮದುರ್ಗ:** ಪ್ರಸಕ್ತ ಸನ್ನಿವೇಶದಲ್ಲಿ ಹೆಣ್ಣು ಹೆತ್ತ ತಂದೆ-ತಾಯಿಂದಿರು ಮಕ್ಕಳ ನಡುವಳಿಕೆಗಳ ಬಗ್ಗೆ ಗಮನ ಹರಿಸದೇ ಇರುವುದರಿಂದ ಇಂದು ಹದಿಹರೆಯದ ಹೆಣ್ಣು ಮಕ್ಕಳು ದಾರಿ ತಪ್ಪುತ್ತಿದ್ದಾರೆ ಎಂದು ಉದ್ಯಮಿ ಹಾಗೂ ನ್ಯಾಯವಾದಿ ಜಮುನಾ ಪಟ್ಟಣ ವಿಷಾಧ ವ್ಯಕ್ತಪಡಿಸಿದರು.

ಪಟ್ಟಣದ ಬ್ಯಾಂಕ್ ಆಫ್ ಬರೋಡಾ ರಾಮದುರ್ಗ ಶಾಖೆಯ ನೇತ್ರತ್ವದಲ್ಲಿ ಶುಕ್ರವಾರ ಸಂಜೆ ಜರುಗಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಮಕ್ಕಳಿಗೆ ಉನ್ನತ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕೊಡುವುದು ಅತೀ ಅವಶ್ಯಕ. ಪ್ರತಿಯೊಂದು ಕ್ಷೇತ್ರದಲ್ಲಿ ಇಂದು ಮಹಿಳೆ ಅಬಲೆಯಲ್ಲ ಸಬಲೆ ಎಂಬುದನ್ನು ಸಾಬೀತು ಪಡಿಸಿದ್ದಾಳೆ. ಸಾಧನೆ ಮಾಡಬೇಕಾದರೆ ಸತತ ಪ್ರಯತ್ನ ಮತ್ತು ಶ್ರದ್ಧೆ ಅಗತ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಶಿವಕ್ಕ ಮಾದರ, ಸಾಮಾಜಿಕ ವಲಯ ಅರಣ್ಯಾಧಿಕಾರಿ ದಾನಮ್ಮ ಗುಂಜಗಾವಿ, ಸಮಾಜ ಕಲ್ಯಾಣ ಇಲಾಖೆಯ ಅಧೀಕ್ಷಕಿ ಎಸ್.ಎಂ. ವಾಲಿ, ದಂತ ವೈದ್ಯೆ ತಜೀನ ಸಹೇರ, ಗೃಹಿಣಿ ಅರ್ಚನಾ ಬಿರಾದಾರ ಮಾತನಾಡಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ನ್ಯಾಯವಾದಿ ಜಮುನಾ ಪಟ್ಟಣ ಮಾತನಾಡಿದರು.

> ಸಾಧನೆ ಮಾಡಲು ಮಹಾ ಪುರುಷರೆ ಆಗಬೇಕೆಂದಿಲ್ಲ. ಮನೆಯ ಒಬ್ಬ ಸಾಮಾನ್ಯ ಗೃಹಿಣಿಯಾಗಿದ್ದರೆ ಸಾಕು. ಯಾವುದೇ ಸಂದರ್ಭದಲ್ಲಿ ಧೃತಿಗೆಡದೆ, ತನ್ನ ತನವನ್ನು ಬಿಟ್ಟುಕೊಡದೆ ಮುನ್ನಡೆಯುತ್ತಿರಬೇಕು.
>
> ಸವಿತಾ ಮುನ್ಯಾಳ, ಪಿಎಸ್ಐ

ಇದೇ ವೇಳೆ ಶಿಕ್ಷಣ, ಸಮಾಜ ಕಲ್ಯಾಣ ಇಲಾಖೆ, ಪೊಲೀಸ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಸಿಬ್ಬಂದಿಗಳನ್ನು ಬ್ಯಾಂಕ್ ಆಫ್ ಬರೋಡಾ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಅಲ್ಕಾ ಧೂತ, ಪ್ರಿಯಾ ಸರದೇಶಪಾಂಡೆ, ಆರ್. ಮಂಜುಳಾ, ದಾನಮ್ಮ ಗೋಕಾವಿ, ಶಿವಲೀಲಾ ಬಾಗೇವಾಡಿ, ರಾಜಶ್ರೀ ಬಟಕುರ್ಕಿ, ರಾಣಿ ಪಾಟೀಲ ಸೇರಿದಂತೆ ಅನೇಕರು ಇದ್ದರು. ಶಾಖಾ ವ್ಯವಸ್ಥಾಪಕ ಹನಮಂತ್ರಾಯ ಬಿರಾದಾರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವುಡಿಮುಡಿ ಶಿವಕುಮಾರ ಕಾರ್ಯಕ್ರಮ ನಿರೂಪಿಸಿದರು. ರಾಜೇಶ್ವರಿ ಮ್ಯಾಗೇರಿ ವಂದಿಸಿದರು.

## ಅದಾಲತ್: 517 ಪ್ರಕರಣ ಇತ್ಯರ್ಥ

6 ವರ್ಷಗಳಿಂದ ಬೇರೆಯಾಗಿದ್ದ ಜೋಡಿಯು ಲೋಕ ಅದಾಲತ್‌ನಲ್ಲಿ ನ್ಯಾಯಾಧೀಶರ ಸಮ್ಮುಖದಲ್ಲಿ ದಾಂಪತ್ಯಕ್ಕೆ ಕಾಲಿಟ್ಟರು.

**ಬೈಲಹೊಂಗಲ:** ಪರ, ವಿರೋಧ ಇಬ್ಬರೂ ಧನಾತ್ಮಕವಾಗಿ ಮುನ್ನಡೆದರೆ ಯಾವ ವ್ಯಾಜ್ಯಗಳು ಮುಂದುವರಿಯುವುದಿಲ್ಲ. ಲೋಕ ಅದಾಲತ್ ಜನ ಸಾಮಾನ್ಯರಿಗೆ ಕಡಿಮೆ ಖರ್ಚಿನಲ್ಲಿ ತ್ವರಿತವಾಗಿ ಮತ್ತು ಸೌಹಾರ್ದಯುತವಾಗಿ ನ್ಯಾಯವನ್ನು ಒದಗಿಸಿ ಕೊಡುತ್ತದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶ ರವಿ ಚವ್ಹಾಣ ಹೇಳಿದರು.

ಅವರು ಶನಿವಾರ ಪಟ್ಟಣದ ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ ನಲ್ಲಿ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಮಾತನಾಡಿ, ಕೆಲವೊಂದು ಪ್ರಕರಣಗಳನ್ನು ರಾಜಿ ಮಾಡಿಕೊಳ್ಳಲು ಕಾನೂನಡಿ ಅವಕಾಶ ಕಲ್ಪಿಸಿದೆ.ಇದನ್ನು ಕಕ್ಷಿದಾರರು ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ಪ್ರಧಾನ ದಿವಾಣಿ ನ್ಯಾಯಾಧೀಶ ಬಸವರಾಜ ನಾಯಕ ಮಾತನಾಡಿ, ಹಣಕಾಸು, ಅಸ್ತಿವಿವಾದ, ಅಪಘಾತ, ಸಣ್ಣಪುಟ್ಟ ಇತರೆ ಪ್ರಕರಣಗಳು ಬಹುದಿನಗಳಿಂದ ಇತ್ಯರ್ಥವಾಗದೆ ಉಳಿದ ಸುಮಾರು 517 ಪ್ರಕರಣಗಳನ್ನು ಉಭಯ ಪಕ್ಷಗಾರರು ನ್ಯಾಯವಾದಿಗಳ ಸಮ್ಮುಖದಲ್ಲಿ ಇತ್ಯರ್ಥಗೊಳಿಸಿ ಅಪಘಾತ ಮತ್ತು ಪರಿಹಾರವಾಗಿ ಕಕ್ಷಿದಾರರಿಗೆ ರು. 17043197 ನೀಡಲು ಆದೇಶ ಮಾಡಲಾಗಿದೆ ಎಂದರು.

ಸುಮಾರು 6 ವರ್ಷಗಳಿಂದ ಬೇರೆಯಾಗಿ ವಿಚ್ಛೆದನಕ್ಕೆ ಅರ್ಜಿ ಹಾಕಿದ್ದ ಒಂದು ಜೋಡಿ ದಂಪತಿ ನ್ಯಾಯಾಧೀಶರ ಸಮ್ಮುಖದಲ್ಲಿ ಮರು ದಾಂಪತ್ಯಕ್ಕೆ ಕಾಲಿಟ್ಟರು. ಮಧ್ಯಸ್ಥಿಕೆದಾರರಾಗಿ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಂ ಆರ್ ಮೇಳವಂಕಿ ಕಾರ್ಯನಿರ್ವಹಿಸಿದರು. ವಕೀಲರಾದ ಕೆ ಎಸ್ ಕುಲಕರ್ಣಿ, ಎಂ ಆರ್ ಸೋಮಣ್ಣವರ, ಎಸ್ ವ್ಹಿ ಹಿರೇಮಠ, ಎಂ ಎಂ ಮಲ್ಲೇಶನವರ, ಎಂ ಎಂ ಅಬ್ಬಾಯಿ,ಕಾನೂನು ಸೇವಾ ಸಮಿತಿ ಸಂಚಾಲಕ ಉಮೇಶ ಕಾರಜೋಳ, ವಕೀಲರು ಇದ್ದರು.

---

## ಸಂಸ್ಕೃತಿಯ ತಾಯಿ ಬೇರು ಜಾನಪದ

ಜಾನಪದ ಸಂಸ್ಕೃತಿಯಲ್ಲಿ ಗಣ್ಯರು, ವಿದ್ಯಾರ್ಥಿನಿಯರು ಪೇಟಾ ಸಂಸ್ಕೃತಿ ಪ್ರದರ್ಶಿಸಿದರು.

**ಬೈಲಹೊಂಗಲ:** ಪ್ರಾಚೀನ ಪರಂಪರೆ ಬಿಂಬಿಸಿ ನಾಡಿನ ಮಹಿಮೆಯನ್ನು ಗೌರವಿಸುವ ಜಾನಪದ ನಾಡಿನ ಸಂಸ್ಕೃತಿಯ ತಾಯಿ ಬೇರಾಗಿದ್ದು ಯಾವತ್ತೂ ಅಜರಾಮರವಾಗಿ ಉಳಿಯಬೇಕೆಂದು ರಂಗಭೂಮಿ ಕಲಾವಿದ, ಎಪಿಎಂಸಿ ಮಾಜಿ ಅಧ್ಯಕ್ಷ ಭರಮಣ್ಣ ಸತ್ಯಣ್ಣವರ ಹೇಳಿದರು.

ಅವರು ಪಟ್ಟಣದ ಹೊಸೂರ ರಸ್ತೆಯಲ್ಲಿನ ಕಾಲೇಜು ಶಿಕ್ಷಣ ಇಲಾಖೆಯ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಮತ್ತು ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಶುಕ್ರವಾರ ಕಾಲೇಜು ಪ್ರಾಂಗಣದಲ್ಲಿ ಜರುಗಿದ ಜಾನಪದ ಉತ್ಸವ 2025, ನಮ್ಮ ಸಂಸ್ಕೃತಿ -ನಮ್ಮ ಹೆಮ್ಮೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜಾನಪದ ಕಲೆಯನ್ನು ಉಳಿಸುವಲ್ಲಿ ಹಲವಾರು ರಂಗಕರ್ಮಿಗಳು, ವಿದ್ವಾಂಸರು ಶ್ರಮಿಸಿದ್ದು ಇಂತಹ ಭವ್ಯ ಸಂಸ್ಕೃತಿ ಸದಾ ನಮ್ಮೊಂದಿಗೆ ಉಸಿರಾಗಿರಬೇಕೆಂದರು.

ಮುಖ್ಯ ಅತಿಥಿಗಳಾದ ಚಿತ್ರನಟಿ, ರಂಗಕರ್ಮಿ ಡಾ. ಪಂಕಜ ಟಿ.ಪಿ. ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಬಿ.ಕೆ.ಮದವಾಲ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಮಾಜಿ ಜಿಲ್ಲಾಧ್ಯಕ್ಷ ಮೋಹನ ಪಾಟೀಲ, ಕಜಾಪ ತಾಲೂಕಾಧ್ಯಕ್ಷ ಚಂದ್ರಶೇಖರ ಕೊಪ್ಪದ, ಕೋಶ್ಯಾಧ್ಯಕ್ಷ ಮಹಾಬಳೇಶ್ವರ ವಾಲಿ, ಜಾನಪದ ಕಲಾ ಮೇಳ ಸಂಚಾಲಕ ಎಂ.ವಾಯ್ .ಹಿತಾರಗೌಡರ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಹಸನ್ ಗೊರವನಕೊಳ್ಳ, ಸದಸ್ಯರಾದ ಜಯಶ್ರೀ ಮತ್ತಿಕೊಪ್ಪ, ಆನಂದ ವಾಲಿ, ಸಂಗಪ್ಪ ಕಾದ್ರೊಳ್ಳಿ, ರಂಗ ಪ್ರೋತ್ಸಾಹಕ ಶಂಕರಗೌಡಾ ಪಾಟೀಲ, ಕಜಾಪ ತಾಲೂಕಾ ವಕ್ತಾರ ಮಹಾಂತೇಶ ರಾಜಗೋಳಿ, ನಾಗೇಶ ಬಸರಕೋಡ ವೇದಿಕೆ ಮೇಲಿದ್ದರು. ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರು, ಉಪನ್ಯಾಸಕಿಯರು, ಸಹಸ್ರ ಸಂಖ್ಯೆಯಲ್ಲಿ ವಿದ್ಯಾಥಿನಿಯರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ಉಪನ್ಯಾಸಕ ಎಂ.ವಾಯ್.ಹಿತಾರಗೌಡರ ಸ್ವಾಗತಿಸಿದರು. ಉಪನ್ಯಾಸಕಿ ಶಿವಲೀಲಾ ಮುಕುಂದ ನಿರೂಪಿಸಿದರು. ಉಪನ್ಯಾಸಕಿ ಐಶ್ವರ್ಯಲಕ್ಷ್ಮೀ ಔರಸಂಗ ವಂದಿಸಿದರು. ಇದಕ್ಕೂ ಮೊದಲು ಪಟ್ಟಣದ ಬಸ್ ನಿಲ್ದಾಣದಿಂದ ಮಹಿಳಾ ಕಾಲೇಜುವರೆಗೆ ಕುಂಭ ಹೊತ್ತು ಚಕ್ಕಡಿ, ಟ್ರ್ಯಾಕ್ಟರ, ಎತ್ತುಗಳ ಮೆರವಣಿಗೆಯೊಂದಿಗೆ ವಿದ್ಯಾರ್ಥಿನಿಯರು ನಾಡಿನ ಕಲಾ ಸಂಸ್ಕ್ರತಿಯನ್ನು ದಾರಿಯುದ್ದಕ್ಕೂ ಬಿಂಬಿಸಿದರು. ಉಪನ್ಯಾಸಕ, ಉಪನ್ಯಾಸಕಿಯರು, ವಿದ್ಯಾರ್ಥಿನಿಯರು ಪೇಟಾ ತೊಟ್ಟು ಸಂಭ್ರಮಿಸಿದರು. ಜನಪದ ಸಂಸ್ಕೃತಿ ಬಿಂಬಿಸುವ ಹಳ್ಳಿಯ ಹಲವಾರು ರೂಪಕಗಳನ್ನು ವಿದ್ಯಾರ್ಥಿನಿಯರು ತಯಾರಿಸಿ ಪ್ರದರ್ಶಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ಮಹಿಳೆ ಅಬಲೆಯಲ್ಲ, ಸಬಲೆ: ಸಂಧ್ಯಾ ಪಾಟೀಲ

**ಮೂಡಲಗಿ:** ತೊಟ್ಟಿಲು ತೂಗುವ ಕೈ ಜಗತ್ತನ್ನೇ ತೂಗಬಲ್ಲದು ಎನ್ನುವ ಹಾಗೆ ಮಹಿಳೆ ಮನೆ ನೋಡಿಕೊಳ್ಳುವುದರ ಜೊತೆಗೆ ಎಲ್ಲ ರಂಗದಲ್ಲಿ ಸಾಧನೆ ಮಾಡುತ್ತಿದ್ದಾರೆ. ನಮ್ಮ ಚೈತನ್ಯ ಶಾಲೆಯಲ್ಲಿ ಶೇ.80 ರಷ್ಟು ಮಹಿಳೆಯರು ಸೇವೆಸಲ್ಲಿಸುತ್ತಿರುವುದು ನಮಗೆ ಹೆಮ್ಮೆಯ ವಿಷಯ ಎಂದು ಶಾಲೆಯ ಪ್ರಧಾನ ಗುರುಮಾತೆ ಸಂಧ್ಯಾ ಪಾಟೀಲ ಹೇಳಿದರು.

ಅವರು ಪಟ್ಟಣದ ಚೈತನ್ಯ ಆಶ್ರಮ ವಸತಿ ಶಾಲೆಯಲ್ಲಿ ಹಮ್ಮಿಕೊಂಡಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳೆ ಅಬಲೆಯಲ್ಲ ಮಹಿಳೆ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಹಿಳೆ ಎಲ್ಲ ರಂಗದಲ್ಲಿ ಸಾಧನೆ ಮಾಡಿದ್ದಾಳೆ. ಮೊದಲ ಪ್ರಧಾನಿ ಇಂದಿರಾಗಾಂಧಿಯವರಿಂದ ಹಿಡಿದು ಈಗಿನ ರಾಷ್ಟ್ರಪತಿ ದ್ರೌಪದಿ ಮುರ್ಮುರವರೆಗೆ ಮಹಿಳೆ ಕಾರ್ಯನಿರ್ವಹಿಸುತ್ತಿದ್ದಾರೆ. ಕಾರ್ಯಕ್ರಮದಲ್ಲಿ ಶಾಲೆಯಲ್ಲಿರುವ ಎಲ್ಲ ಮಹಿಳಾ ಶಿಕ್ಷಕಿಯರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ, ಆಡಳಿತಾಧಿಕಾರಿ, ಆಂಗ್ಲ ಮಾಧ್ಯಮದ ಪ್ರಧಾನ ಗುರು ಕೆ.ಎಸ್.ಹುಬ್ಬಳ್ಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಪಟ್ಟಣದ ಚೈತನ್ಯ ಶಾಲೆಯಲ್ಲಿ ಜರುಗಿದ ಮಹಿಳಾ ದಿನಾಚರಣೆಯಲ್ಲಿ ಶಾಲೆಯಲ್ಲಿರುವ ಎಲ್ಲ ಮಹಿಳಾ ಶಿಕ್ಷಕಿಯರಿಗೆ ಗೌರವ ಸಮರ್ಪಣೆ ಮಾಡಲಾಯಿತು.

## ಗೋಧಿ ಬೆಳೆಯ ಕ್ಷೇತ್ರೋತ್ಸವ, ತರಬೇತಿ ಕಾರ್ಯಕ್ರಮ

**ಯರಗಟ್ಟಿ:** ತಾಲೂಕಿನ ಸೋಪ್ಪಡ್ಲ ಗ್ರಾಮದ ರೈತ ರವೀಂದ್ರ ಕುರುಬಗಟ್ಟಿ ಇವರ ಹೊಲದಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡ, ಕೃಷಿ ಇಲಾಖೆ ಸವದತ್ತಿ, ಟಿಎಸ್‌ಪಿ ಯೋಜನೆಯ ಅಡಿಯಲ್ಲಿ ಗೋಧಿ ಬೆಳೆಯ ಕ್ಷೇತ್ರೋತ್ಸವ ಹಾಗೂ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಕೃವಿವಿ ವಿಸ್ತರಣಾ ನಿರ್ದೇಶಕ ಡಾ. ಆರ್. ಬಸವರಾಜಪ್ಪ ಮಾತನಾಡಿದ ಅವರು ಗೋಧಿ ಬೆಳೆಯು ಒಂದು ಪ್ರಮುಖ ಹಿಂಗಾರಿ ಬೆಳೆ. ಇದರ ಸಾಗುವಳಿ ಹೆಚ್ಚಾಗಿ ಉತ್ತರ ಕರ್ನಾಟಕ ಪ್ರದೇಶ. ನಮ್ಮ ರಾಜ್ಯದಲ್ಲಿ 2.67 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು, ಸರಿ ಸುಮಾರು 1.47 ಲಕ್ಷ ಟನ್ ಗೋಧಿ ಉತ್ಪಾದನೆಯಾಗುತ್ತಿದೆ.

ಶೇಕಡಾ 60 ರಷ್ಟು ಮಳೆಯಾಶ್ರಿತದಲ್ಲಿ ಹಾಗೂ ಶೇಕಡಾ 40 ರಷ್ಟು ನೀರಾವರಿ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಮೂರು ತಳಿಗಳಾದ ಚಪಾತಿ, ರವೆ ಹಾಗೂ ಕಪಲಿ (ಜವೆಗೋಧಿ) ತಳಿಗಳನ್ನು ಕರ್ನಾಟಕದಲ್ಲಿ ಬೆಳೆಯುತ್ತಿರುವುದರಿಂದ ಕರ್ನಾಟಕವು ಗೋಧಿ ಬೇಸಾಯದಲ್ಲಿ ವೈವಿಧ್ಯತೆಯನ್ನು ಹೊಂದಿದೆ. ನೀರಾವರಿ ಪ್ರದೇಶದಲ್ಲಿ ಶೇಕಡಾ 70 ರಷ್ಟು ಚಪಾತಿ ತಳಿ, ಶೇಕಡಾ 20 ರಷ್ಟು ರವೆ ತಳಿ ಹಾಗೂ ಶೇಕಡಾ 10 ರಷ್ಟು ಜವೆಗೋಧಿ ತಳಿಗಳು ಕಂಡುಬರುತ್ತವೆ.

ಕೃವಿವಿ ಸಹ ಸಂಶೋಧನಾ ನಿರ್ದೇಶಕ ಡಾ. ಪಿ. ಎಸ್. ಮತ್ತಿವಾಡೆ ಮಾತನಾಡಿದರು.

ಈ ವೇಳೆ ಕೃಷಿ ಅಧಿಕಾರಿ ಎಂ. ಜಿ. ಕಳಸಪ್ಪನ್ನವರ, ಗ್ರಾ. ಪಂ. ಅಧ್ಯಕ್ಷೆ ಶ್ರೀಮತಿ ಸತ್ಯೆವ್ವ ಗೋರಗುದ್ದಿ, ಗ್ರಾ. ಪಂ. ಅಭಿವೃದ್ಧಿ ಅಧಿಕಾರಿ ವ್ಹಿ. ಎಸ್. ಮುಲ್ಲಾ, ಪಿಕೆಪಿಎಸ್ ಅಧ್ಯಕ್ಷ ಮಹಾಂತೇಶ ಗೋಡಿ, ವಿರೂಪಾಕ್ಷ ಕೌಜಲಗಿ, ವ್ಹಿ. ಎಂ. ಹೊಸೂರ, ಶಿಕ್ಷಕ ಆರ್. ಬಿ. ಹುಣಶ್ಯಾಳ, ರೈತರಾದ ವಿಠ್ಠಲ ಭಾಂಗಿ, ಶಿವಾನಂದ ಕರಿಗೊಣ್ಣವರ, ಮಹಾದೇವ ಯಂಡ್ರಾವಿ, ರವೀಂದ್ರ ಬೆಳವಲ, ಮಹಾರುದ್ರಪ್ಪ ಕಡಕೋಳ, ಬಸನಗೌಡ ಪಾಟೀಲ, ವೀರನಗೌಡ ಸರನಾಡಗೌಡ್ರ ಸೇರಿದಂತೆ ಅನೇಕ ರೈತರು ಇದ್ದರು.

---

## ಮಹಿಳೆಯರಿಗೆ ಸಮಾನ ಗೌರವ ನೀಡಿ

**ಕಾಗವಾಡ:** ಕುಟುಂಬ ನಿರ್ವಹಣೆ ಮಾಡುವ ಮಹಿಳೆಗೆ ದೇಶ ಕಾಯುವ ಶಕ್ತಿಯೂ ಇದೆ. ಅವಳು ಮನಸ್ಸು ಮಾಡಿದರೇ ಏನನ್ನು ಬೇಕಾದರೂ ಸಾಧಿಸಬಲ್ಲ ಛಲವೂ ಅವಳಲ್ಲಿದೆ. ಮನೆಯಲ್ಲಿ ಗೃಹಿಣಿಯಾಗಿ ಸವಟು ಹಿಡಿದು, ಅಡುಗೆಯೂ ಮಾಡುತ್ತಾಳೆ. ದೇಶಕ್ಕೆ ಗಂಡಾಂತರ ಬಂದರೇ ಬಂದೂಕು ಹಿಡಿದು, ದೇಶ ರಕ್ಷಣೆಯೂ ಮಾಡುತ್ತಾಳೆಂದು ಖ್ಯಾತ ಸಾಹಿತಿ ಡಾ.ಅರ್ಚನಾ ಅಥಣಿ ಅಭಿಪ್ರಾಯ ಪಟ್ಟಿದ್ದಾರೆ. ಅವರು ಶನಿವಾರ ಮಾ.8 ರಂದು ಪಟ್ಟಣದ ಶಿವಾನಂದ ಮಹಾ ವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ, ಸನ್ಮಾನ ಸ್ವೀಕರಿಸಿ, ಮಾತನಾಡುತ್ತಿದ್ದರು. ವಿಶ್ವದ ಮಹಾನ ಸಾಧಕರಲ್ಲಿ ಮಹಿಳೆಯರ ಸಾಧನೆಯೇ ಹೆಚ್ಚಿದೆ. ಹಾಗಾಗಿ ಹೆಣ್ಣು ಎಂದರೆ ಕೀಳಿರಿಮೆ ಬೇಡ. ಪೂಜ್ಯನೀಯ ಭಾವನೆಯಿಂದ ಕಾಣುವ ಮೂಲಕ ಗೌರವ ನೀಡಬೇಕೆಂದರು. ಉಪ ಪ್ರಾಚಾರ್ಯ ಡಾ. ಎಸ್.ಪಿ. ತಳವಾರ ಅಧ್ಯಕ್ಷತೆ ವಹಿಸಿ, ಮಾತನಾಡಿ, ಮನೆ ನಿರ್ವಹಣೆ ಜತೆಗೆ ಉದ್ಯೋಗದಲ್ಲಿ ಯಶಸ್ಸು ಸಾಧಿಸಿರುವ ಆಧುನಿಕ ಸಮಾಜದ ಮಹಿಳೆಯರು, ಎಲ್ಲ ಕ್ಷೇತ್ರದಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮುಂಚೂಣಿ ಸಾಧಿಸಿದ್ದು, ಹೆಣ್ಣು ಆಧುನಿಕ ಸಮಾಜದ ಕಣ್ಣು ಎಂದು ಬಣ್ಣಿಸಿದರು. ಈ ವೇಳೆ ಡಾ. ಆರ್. ಎಸ್. ಕಲ್ಲೋಳಿಕರ, ಡಾ.ಎನ್.ಎಂ. ಬಾಗೇವಾಡಿ, ಪ್ರೊ.ಬಿ.ಡಿ. ದಾನಮ್ಮನವರ, ಪಿಎಸ್ಐ ಬಸನಗೌಡಾ ಬಿರಾದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ರಾಷ್ಟ್ರಮಟ್ಟದಲ್ಲಿ ಬಸವ ಜಯಂತಿ ಆಚರಿಸಿ

**ಅಥಣಿ:** ಅನುಭವ ಮಂಟಪದ ಮೂಲಕ ವಿಶ್ವದ ಮೊದಲ ಸಂಸತ್ತು ರಚನೆಯಾದದ್ದು ಬಸವಾದಿ ಶರಣರ ಕಾಲದ 12 ನೇಯ ಶತಮಾನದಲ್ಲಿ. ಕೇಂದ್ರ ಸರಕಾರ ರಾಷ್ಟ್ರದ ಎಲ್ಲ ರಾಜ್ಯಗಳಲ್ಲಿ ಬಸವ ಜಯಂತಿಯನ್ನು ಆಚರಿಸಲು ಕ್ರಮ ಕೈಗೊಳ್ಳಬೇಕೆಂದು ಸವದಿ ಇಳಕಲ್ ಮಠದ ಗುರು ಮಹಾಂತ ಸ್ವಾಮೀಜಿ ಹೇಳಿದರು.

ಅವರು ತಾಲೂಕಿನ ಸವದಿ ಗ್ರಾಮದ ಸಾರವಾಡ ತೋಟದಲ್ಲಿ ಜರುಗಿದ ಶ್ರೀ ಎಡೆಯೂರು ತೋಂಟದ ಸಿದ್ದಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ತೆಪ್ಪೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡುತ್ತಾ ಬಸವಾದಿ ಶರಣರು ಕೇವಲ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗ ಬಾರದು ಅವರು ವಿಶ್ವ ಮಾನ್ಯರು. ಬಸವ ತತ್ವಗಳು ಎಂದೆಂದಿಗೂ ಪ್ರತಿಯೊಬ್ಬರಿಗೂ ದಾರಿದೀಪವಾಗಿವೆ ಎಂದು ಹೇಳಿದ ಅವರು ಸಾರವಾಡ ಮನೆತನದವರು ಕಳೆದ ಅನೇಕ ವರ್ಷಗಳಿಂದ ಶ್ರೀಎಡೆಯೂರು ತೋಂಟದ ಸಿದ್ದಲಿಂಗೇಶ್ವರ ಜಾತ್ರಾ ಮಹೋತ್ಸವ ಆಚರಿಸಿ ಕೊಂಡು ಬರುತ್ತಿರುವುದು ಅವರ ಕಾಯಕ ದಾಸೋಹದ ನಿಷ್ಠೆಯನ್ನು ತೋರಿಸುತ್ತದೆ ಎಂದು ಅವರು ಹೇಳಿದರು.

ಡಾ. ಬಸವಲಿಂಗ ಸ್ವಾಮೀಜಿ, ಶ್ರೀಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿದರು. ಈ ಸಂದರ್ಭದಲ್ಲಿ ಶ್ರೀವಿರತೇಶಾನಂದ ಸ್ವಾಮೀಜಿ, ಶ್ರೀಯಶವಂತ ದೇವರು, ಗ್ರಾ.ಪಂ. ಅಧ್ಯಕ್ಷೆ ಬಿಸ್ಮಿಲ್ಲಾ ಬೆಳ್ಳುಬ್ಬಿ, ಮಲ್ಲನಗೌಡ ಪಾಟೀಲ, ಸದಾಶಿವ ಸಾರವಾಡ, ನಿಂಗಪ್ಪ ಸಾರವಾಡ, ರಾಯಪ್ಪ ಜಿವೋಜಿ, ಮಹಾಂತೇಶ ಸಾರವಾಡ, ಪ್ರಕಾಶ ಪಾಟೀಲ, ಬಸವರಾಜ ಸಾರವಾಡ, ಭೀಮಣ್ಣ ಅಥಣಿ, ಡಾ. ಶ್ರೀಶೈಲ ಕೊಪ್ಪದ, ಮಹೇಶ ಮಠದ, ಅದೃಶಿ ಪಾಟೀಲ, ಮಲ್ಲಿಕಾರ್ಜುನ ಠಕ್ಕನ್ನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಅಥಣಿ ತಾಲೂಕಿನ ಸವದಿ ಗ್ರಾಮದಲ್ಲಿ ಜರುಗಿದ ಶ್ರೀಎಡೆಯೂರು ತೋಂಟದ ಸಿದ್ದಲಿಂಗೇಶ್ವರ ಜಾತ್ರಾ ಮಹೋತ್ಸವಕ್ಕೆ ಸವದಿ ಇಳಕಲ್ ಮಠದ ಶ್ರೀಗುರು ಮಹಾಂತ ಸ್ವಾಮೀಜಿ ಚಾಲನೆ ನೀಡಿದರು.

## ಅನಸೂಯಾಗೆ ಅಬ್ಬಕ್ಕ ದೇವಿ ಪ್ರಶಸ್ತಿ ಪ್ರದಾನ

**ಯರಗಟ್ಟಿ:** ಸಮೀಪದ ಸಿಂದೋಗಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಅನಸೂಯಾ ಶಂಕರಪ್ಪ ಮದನಬಾವಿಯವರಿಗೆ ಕರ್ನಾಟಕ ರಾಜ್ಯ ಮಹಿಳಾ ನೌಕರರ ಸಂಘದ ಆಶ್ರಯದಲ್ಲಿ ಕಲಬುರಗಿಯಲ್ಲಿ ಪೂಜ್ಯ ಡಾ. ಬಸವರಾಜಪ್ಪ ಅಪ್ಪ ಮೆಮೋರಿಯಲ್ ಹಾಲ್ ನಲ್ಲಿ ಜರುಗಿದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ ರಾಣಿ ಅಬ್ಬಕ್ಕ ದೇವಿ ಪ್ರಶಸ್ತಿಯನ್ನು ಗಣ್ಯರು ನೀಡಿ ಗೌರವಿಸಲಾಯಿತು. ಈ ವೇಳೆ ವಿಧಾನಪರಿಷತ್ ಸದಸ್ಯರಾದ ಶಶಿಲ್ ನಮೋಸಿ, ಕಲಬುರಗಿ ಅಕ್ಕಮಹಾದೇವಿ ಆಶ್ರಮದ ಮಾತೋ ಶ್ರೀಶ್ರೀಪ್ರಭು ತಾಯಿ, ರಾಜ್ಯ ಮಹಿಳಾ ನೌಕರರ ಸಂಘದ ಅಧ್ಯಕ್ಷೆ ರಮಾ. ರಾಜ್ಯ ಪ್ರಧಾನ ಕಾರ್ಯದರ್ಶಿ ಗಳಾದ ಡಾ. ಶೈಲಜಾ. ಕಲಬುರಗಿ ಜಿಲ್ಲೆಯ ಮಹಿಳಾ ನೌಕರರ ಸಂಘದ ಅಧ್ಯಕ್ಷೆ ನಂದಿನಿ ಸನಬಾಳ್, ಬೆಳಗಾವಿ ಜಿಲ್ಲೆಯ ಶಿಕ್ಷಕ ಸಾಹಿತಿ ವಾಯ್.ಬಿ.ಕಡಕೋಳ, ರಾಜು ಈರಪ್ಪ ಹಟ್ಟಿ, ಸಮಾಜ ಸೇವಕ ಸೋಮಲಿಂಗ ಮದನಬಾವಿ, ಆಕಾಶವಾಣಿ ಕಾರ್ಯಕ್ರಮ ನಿರ್ವಹಣಾಧಿಕಾರಿ ಸದಾನಂದ ಪೆರ್ಲ, ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಲ್ಲಯ್ಯ ಗುತ್ತೇದಾರ, ನೌಕರರ ಸಂಘದ ಅಧ್ಯಕ್ಷ ಬಸವರಾಜ ಬಳುಂಡಗಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿಜಯಕುಮಾರ್ ತೇಗಲತಿಪ್ಪಿ, ಡಾ. ರವಿಕಾಂತಿ ಕ್ಯಾತನಾಳ, ಸೇರಿದಂತೆ ವಿವಿಧ ಗಣ್ಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಪತ್ರಕರ್ತೆ ರಶ್ಮಿ ಹಾಗೂ ಕಲಬುರಗಿ ಜಿಲ್ಲೆಯ ಜಿಲ್ಲಾ ಆಪರ ಸರಕಾರಿ ವಕೀಲರಾದ ಶರಣಮ್ಮ ಪಾಟೀಲ ಉಪನ್ಯಾಸ ನೀಡಿದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ



ಗುರುವಾರ ವೈವಾಹಿಕ ಜೀವನಕ್ಕೆ ಕಾಲಿಟ್ಟ ಸಂಸದ ತೇಜಸ್ವಿ ಸೂರ್ಯ, ಶಿವಶ್ರೀ ಸ್ಕಂದಪ್ರಸಾದ್ ಅವರ ವಿವಾಹ ಆರತಕ್ಷತೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನೆರವೇರಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಜಮೀರ್ ಖಾನ್, ಸಂಸದೆ ಶೋಭಾ ಕರಂದ್ಲಾಜೆ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್ ಅಶೋಕ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ನಟ ರಮೇಶ್ ಅರವಿಂದ್ ಆಗಮಿಸಿ ಶುಭ ಹಾರೈಸಿದರು.

## ಸೊಂಪಾದ ಪುಟಗಳು

ಚಕ್ರವ್ಯೂಹದಿಂದ ಪಾರಾದರಾ ಸಿಎಂ ಸಿದ್ದು?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ವಿನಾಕಾರಣ ಜೈಲಿನಲ್ಲಿ ಬಾಡಿದ ಸ್ನೇಹಲತೆ
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7


## ದಾರಿದೀಪೋಕ್ತಿ

ಪ್ರತಿ ಕೆಟ್ಟ ಕ್ಷಣವೂ ನೋವನ್ನು ನೀಡುತ್ತದೆ. ಪ್ರತಿ ನೋವು ಪಥವನ್ನು ಕಲಿಸುತ್ತದೆ. ಪ್ರತಿ ಪಾಠವೂ ವ್ಯಕ್ತಿಯ ಬದುಕಿನ ಮೇಲೆ ಪರಿಣಾಮವನ್ನು ಬೀರುತ್ತದೆ ಮತ್ತು ಆತನನ್ನು ಬದಲಿಸುತ್ತದೆ. ಆದ್ದರಿಂದ ನೀವು ಕೆಟ್ಟ ಕ್ಷಣವನ್ನು ಎದುರಿಸಿದರೆ, ಬೇಸರಪಟ್ಟುಕೊಳ್ಳಬೇಕಿಲ್ಲ.

## ವಕ್ರತುಂಡೋಕ್ತಿ

ಹೆಂಗಸರಿಗಿಂತ ವೈನೇ ವಾಸಿ. ಕಾರಣ ವಯಸ್ಸಾದಂತೆ ವೈನ್ ಮೌಲ್ಯ ಹೆಚ್ಚಾಗುತ್ತದೆ.

### ವಿಜಯೇಂದ್ರ ವಿರುದ್ಧ ದೂರು ದಾಖಲಿಸಲು ಯತ್ನಾಳ ಬಣ ತಯಾರಿ

# ಬಣ ಮುಖಂಡರಿಗೆ ಬುಲಾವ್

**ಬೆಂಗಳೂರು:** ರಾಜ್ಯ ಬಿಜೆಪಿಯಲ್ಲಿ ಕಳೆದ ಕೆಲ ದಿನಗಳಿಂದ 'ಬೂದಿ ಮುಚ್ಚಿದ ಕೆಂಡ'ವಾಗಿರುವ ಬಣ ರಾಜಕೀಯ ಮತ್ತೆ ವರಿಷ್ಠರ ಬಳಿ ತಲುಪಿದ್ದು, ಶೀಘ್ರವೇ ಬಣ ನಾಯಕರಿಗೆ ದೆಹಲಿಗೆ ಬರುವಂತೆ ಅಮಿತ್ ಶಾ ಅವರಿಂದ ಬುಲಾವ್ ಬರುವುದು ನಿಶ್ಚಿತ ಎನಿಸಿದೆ.

ಕಳೆದ ಶುಕ್ರವಾರ ಬೆಂಗಳೂರಿಗೆ ಆಗಮಿಸಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯ ಬಿಜೆಪಿಯ ಬಣದಾಟದ ಕುರಿತು ಗಮನಕ್ಕೆ ಬಂದಿದ್ದು, ವಿಜಯೇಂದ್ರ ವಿರುದ್ಧ ಬಂಡಾಯವೆದ್ದಿರುವ ಕೆಲ ನಾಯಕರನ್ನು ದೆಹಲಿಗೆ ಬರುವಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಪ್ರಮುಖವಾಗಿ ಆಸ್ಪತ್ರೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರಿಗೆ ದೆಹಲಿಗೆ ಬರುವಂತೆ ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಖಾಸಗಿ ಕಾರ್ಯಕ್ರಮದ ನಿಮಿತ್ತ ಬೆಂಗಳೂರಿಗೆ ಆಗಮಿಸಿದ್ದರಿಂದ ಪಕ್ಷ ಸಂಘಟನೆಗೆ ಸಂಬಂಧಿಸಿದ ಯಾವುದೇ ಸಭೆಗಳನ್ನು ಅಮಿತ್ ಶಾ ಮಾಡಿಲ್ಲ. ಆದರೂ ರಾಜ್ಯ ಬಿಜೆಪಿಯ ಪರಿಸ್ಥಿತಿಗೆ ಸಂಬಂಧಿಸಿದಂತೆ ಚರ್ಚಿಸಲು ಅರವಿಂದ ಲಿಂಬಾವಳಿ ಅವರಿಗೆ ಬುಲಾವ್ ನೀಡಿರುವ ಸಾಧ್ಯತೆಯಿದೆ. ದಿನಾಂಕದ ನಿರೀಕ್ಷೆಯಲ್ಲಿರುವ ಬಣ ನಾಯಕರು, ಸಮಯ ಸಿಗುತ್ತಿದ್ದಂತೆ ವಿಜಯೇಂದ್ರ ವಿರುದ್ಧ ಮತ್ತೊಮ್ಮೆ ದೆಹಲಿಗೆ ತೆರಳಿ ವರಿಷ್ಠರಿಗೆ 'ದೂರು' ದಾಖಲಿಸುವ ಸಾಧ್ಯತೆ ದಟ್ಟವಾಗಿದೆ.

### ಬಿಎಸ್‌ವೈ ಜತೆ ಶಾ ಸಭೆ

ಆಸ್ಪತ್ರೆಯೊಂದರ ಉದ್ಘಾಟನೆಗೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಅಮಿತ್ ಶಾ ಅವರು, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಿದರು. ಈ ವೇಳೆ ಸಂಘಟನೆಯ ವೈಫಲ್ಯ, ಕಾಂಗ್ರೆಸ್ ಸರಕಾರದ ವೈಫಲ್ಯಗಳನ್ನು ಮುಂದಿಟ್ಟುಕೊಂಡು ವ್ಯವಸ್ಥಿತ ಹೋರಾಟ ನಡೆಸದೇ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಇದರೊಂದಿಗೆ, ರಾಜ್ಯ ಬಿಜೆಪಿಯಲ್ಲಿ ಹತ್ತಾರು ಬಣಗಳಾಗಿದ್ದರೂ, ಅವುಗಳನ್ನು ಸರಿಪಡಿಸುವ ಬದಲು ಆಪ್ತರ ಮೂಲಕ ಈ ಬಣಗಳ ನಡುವಿನ ಗಲಾಟೆಯನ್ನು ಹೆಚ್ಚಿಸುವ ರೀತಿಯಲ್ಲಿ ಹೇಳಿಕೆ ನೀಡಿಸುತ್ತಿರುವುದು ಸರಿಯಲ್ಲ. ಇನ್ನಾದರೂ ಈ ಎಲ್ಲ ವೈಫಲ್ಯಗಳನ್ನು ಸರಿಪಡಿಸಿಕೊಂಡು ಹೋಗುವ ಕೆಲಸವನ್ನು ಮಾಡಬೇಕು ಎಂದು ವಿಜಯೇಂದ್ರಗೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಲಿಂಗಾಯತ ಸಮುದಾಯದ ಹೆಸರಿನಲ್ಲಿ ಬಿಜೆಪಿ ನಾಯಕರನ್ನು ಯಡಿಯೂರಪ್ಪ ಅವರು ಬೆದರಿಸುವ ತಂತ್ರ ಮಾಡುತ್ತಿದ್ದಾರೆ. ಪಕ್ಷ ಸಂಘಟನೆಯ ಅನುಭವ ವಿಲ್ಲದಿದ್ದರೂ ಲಿಂಗಾಯತ ವಿಷಯವನ್ನು ಮುಂದಿಟ್ಟುಕೊಂಡು ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ಮಾಡಿಸಿದ್ದಾರೆ. ಇದರಿಂದಾಗಿ ರಾಜ್ಯಾದ್ಯಂತ ಪಕ್ಷ ಸಂಘಟನೆ ಸಂಪೂರ್ಣ ನೆಲಕಚ್ಚಿದೆ. ಅಲ್ಲದೆ, 75 ವರ್ಷದ ಬಳಿಕ ಸಕ್ರಿಯ ರಾಜಕಾರಣದಿಂದ ನಿವೃತ್ತರಾಗಬೇಕು ಎನ್ನುವ ನಿಯಮ ಬಿಜೆಪಿಯಲ್ಲಿದ್ದರೂ ಯಡಿಯೂರಪ್ಪ ಅವರು 80 ವರ್ಷವಾದರೂ ಸಕ್ರಿಯ ರಾಜಕಾರಣದಲ್ಲಿ ಮುಂದುವರಿಯಲು ಪ್ರಯುತ್ನಿಸುತ್ತಿದ್ದಾರೆ ಎನ್ನುವ ಆರೋಪ ಮಾಡಿದ್ದಾರೆ ಎನ್ನಲಾಗಿದೆ.

ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಹಿಡಿದಿದ್ದೆ 'ಹಿಂದುತ್ವ'ದ ಆಧಾರದಲ್ಲಿ. ಆದರೆ ಈಗಿರುವ ರಾಜ್ಯ ಘಟಕ ಹಿಂದುತ್ವದ ಬದಲಿಗೆ ಹೊಂದಾಣಿಕೆ ರಾಜಕೀಯ, ಒಂದು ಕುಟುಂಬಕ್ಕೆ ಸೀಮಿತಗೊಂಡ ರಾಜಕೀಯ ಮಾಡುತ್ತಿದೆ. ಇದರೊಂದಿಗೆ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ನಡೆದ ಭ್ರಷ್ಟಾಚಾರದಿಂದ ಪಕ್ಷಕ್ಕಿದ್ದ ವರ್ಚಸ್ಸು ಸಂಪೂರ್ಣ ನೆಲಕಚ್ಚಿದೆ. ಇದೇ ವಿಷಯವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ಸಿಗರು, ಬಿಜೆಪಿ ಸರಕಾರದ ಭ್ರಷ್ಟಾಚಾರದ ಪ್ರಸ್ತಾಪವನ್ನು ಮಾಡುತ್ತಿದ್ದಾರೆ.

→ 4

### ಕಾಂಗ್ರೆಸ್ ವಿರುದ್ಧ ಮುಗಿಬೀಳಲು ಪ್ರತಿಪಕ್ಷ ಬಿಜೆಪಿ ಸಜ್ಜು । ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ತಯಾರಿ

# ಮುಸ್ಲಿಮರಿಗೆ ಮೀಸಲು ಸದನದಲ್ಲಿಂದು ಗದ್ದಲ?

**ಬೆಂಗಳೂರು:** ಸಿಎಂ ಸಿದ್ದರಾಮಯ್ಯ ಅವರು ಐತಿಹಾಸಿಕ 16ನೇ ಬಜೆಟ್ ಮಂಡಿಸಿದ ಬೆನ್ನಲ್ಲೇ, ಇದೀಗ ಬಜೆಟ್ ನಲ್ಲಿನ ಅಂಶಗಳನ್ನೇ ಮುಂದಿಟ್ಟು ಕೊಂಡು ಕಾಂಗ್ರೆಸ್ ವಿರುದ್ಧ ಮುಗಿಬೀಳಲು ಪ್ರತಿಪಕ್ಷ ಬಿಜೆಪಿ ಸಜ್ಜಾಗಿದೆ.

ಬಜೆಟ್ ಮಂಡನೆಯಾಗುತ್ತಿದ್ದಂತೆ ಮುಸ್ಲಿಮರನ್ನು ಓಲೈಸುವ ಬಜೆಟ್ ಎಂದು ಕಿಡಿಕಾರಿದ್ದ ಬಿಜೆಪಿ, ಸೋಮವಾರದಿಂದ ಬಜೆಟ್ ಮೇಲಿನ ಚರ್ಚೆಯಲ್ಲಿ ಇದೇ ವಿಷಯವನ್ನು ಮುಂದಿಟ್ಟುಕೊಂಡು ವಾಗ್ದಾಳಿ ನಡೆಸುವ ಸಾಧ್ಯತೆಯಿದೆ. ಅದರಲ್ಲಿಯೂ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ನೀಡಿರುವ ಮೀಸಲಾತಿಯ ಘೋಷಣೆ ಭಾರಿ ವಿವಾದಕ್ಕೆ ಕಾರಣವಾಗಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಬಿಜೆಪಿ ಧರಣಿ ನಡೆಸುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಸರಕಾರದ ಈ ತೀರ್ಮಾನವನ್ನು ಈಗಾಗಲೇ ನ್ಯಾಯಾಲಯದಲ್ಲಿ ಪ್ರಶ್ನಿಸುವುದಾಗಿ ಬಸನಗೌಡ ಪಾಟೀಲ್ ಯತ್ನಾಳ್ ಪ್ರಕಟಿಸಿದ್ದಾರೆ. ಆದರೆ ಸೋಮವಾರದಿಂದ ಆರಂಭವಾಗುವ ಅಧಿವೇಶನದಲ್ಲಿಯೂ ಯತ್ನಾಳ್ ಸೇರಿದಂತೆ ಹಲವು ಬಿಜೆಪಿ ಶಾಸಕರು ಈ ವಿಷಯವನ್ನು ಮುಂದಿಟ್ಟುಕೊಂಡು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ತಯಾರಿ ನಡೆಸಿದ್ದಾರೆ. ಆದ್ದರಿಂದ ಸೋಮವಾರದಿಂದ ಸದನ ಆಡಳಿತ-ಪ್ರತಿಪಕ್ಷ ನಾಯಕರ ನಡುವೆ ವಾಕ್ಸಮರ ವೇದಿಕೆಯಾಗುವುದು ಖಚಿತ ಎನ್ನಲಾಗಿದೆ.

→ 4

### ಇಂದು ಸಿಎಲ್‌ಪಿ ಸಭೆ

ಬಿಜೆಪಿ ನಾಯಕರು ಮಾಡುವ ಆರೋಪಗಳನ್ನು ಸಮರ್ಥವಾಗಿ ಎದುರಿಸುವ ಹಾಗೂ ಬಜೆಟ್‌ನಲ್ಲಿ ಕಾಂಗ್ರೆಸ್ ಸರಕಾರದ ತಂದಿರುವ ಯೋಜನೆಗಳು ಸೇರಿದಂತೆ ವಿವಿಧ ವಿಷಯಗಳನ್ನು ಚರ್ಚಿಸಲು ಸೋಮವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯನ್ನು ಕರೆಯಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆಯಲಿರುವ ಸಭೆಯಲ್ಲಿ ಬಿಜೆಪಿ ನಾಯಕರು ಮಾಡುವ ಆರೋಪಗಳಿಗೆ ಕಾಂಗ್ರೆಸ್ ಶಾಸಕರು ಮಾತನಾಡಬೇಕು. ಬಿಜೆಪಿ ಅವಧಿಯಲ್ಲಿನ ಲೋಪಗಳ ಬಗ್ಗೆಯೂ ಪ್ರಸ್ತಾಪಿಸಬೇಕು ಎನ್ನುವ ಸೂಚನೆ ನೀಡಲಿದ್ದಾರೆ ಎನ್ನಲಾಗಿದೆ.

## ಭೀಕರ ಅಪಘಾತ: ಸ್ಥಳದಲ್ಲೇ ಐವರ ಸಾವು

**ಚಿತ್ರದುರ್ಗ:** ತಾಲೂಕಿನ ತಮಟಗಲ್ಲು ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಭಾನುವಾರ ನಿಂತಿದ್ದ ಲಾರಿಗೆ ಇನ್ನೋವಾ ಕಾರು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಐವರು ಸ್ಥಳದಲ್ಲೇ ಮತಪಟ್ಟಿದ್ದು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಬೆಂಗಳೂರು ಮೂಲದ ಬಿಎಂಟಿಸಿ ನಿವೃತ್ತ ನೌಕರ ಶಾಂತಮೂರ್ತಿ (60), ರುದ್ರ ಸ್ವಾಮಿ (52), ಮಲ್ಲಿಕಾರ್ಜುನ (50), ಚಿದಂ ಬರಾಚಾರ್ (50) ಮೃತಪಟ್ಟಿದ್ದಾರೆ. ಮತ್ತೊಬ್ಬರ ಗುರುತು ಪತ್ತೆಯಾಗಿಲ್ಲ. ಗಂಭೀರವಾಗಿ ಗಾಯಗೊಂಡಿರುವ ಇನ್ನೊಬ್ಬರನ್ನು ಜಿಲ್ಲಾ ಸ್ಪತ್ರೆಗೆ ದಾಖಲು ಮಾಡಲಾಗಿದೆ.

## ಉಪರಾಷ್ಟ್ರಪತಿ ಧನ್‌ಕರ್ ಆಸ್ಪತ್ರೆಗೆ

**ದೆಹಲಿ:** ಉಪರಾಷ್ಟ್ರಪತಿ ಮತ್ತು ರಾಜ್ಯಸಭೆಯ ಸಭಾಪತಿ ಜಗದೀಪ್ ಧನ್‌ಕರ್ ಅವರ ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆ ಭಾನುವಾರ ಬೆಳಗ್ಗೆ ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. 73 ವರ್ಷದ ಜಗದೀಪ್ ಅವರಿಗೆ ಎದೆ ನೋವು ಕಾಣಿಸಿಕೊಂಡಿತ್ತು. ಅಸ್ವಸ್ಥರಾದ ಕಾರಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ವರದಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರು ಆಸ್ಪತ್ರೆಗೆ ಭೇಟಿ ನೀಡಿ ಧನಕರ್ ಆರೋಗ್ಯ ವಿಚಾರಿಸಿದ್ದಾರೆ.

ಹಾಸನ ಜಿಲ್ಲೆಯ ಸಂತೇಶಿವರ ಗ್ರಾಮದಲ್ಲಿ ಸಾಹಿತಿ ಎಸ್.ಎಲ್.ಭೈರಪ್ಪನವರ ಕೃತಜ್ಞತಾ ಕಾರ್ಯಕ್ರಮವನ್ನು ಸಂಸದ ಬಸವರಾಜ್ ಬೊಮ್ಮಾಯಿ ಉದ್ಘಾಟಿಸಿದರು. ಸಂಸದ ಯದುವೀರ ಕೃಷ್ಣದತ್ತ ಒಡೆಯರ್, ಶಾಸಕರಾದ ಸಿ.ಎನ್.ಬಾಲಕೃಷ್ಣ, ಪತ್ರಕರ್ತ ವಿಶ್ವೇಶ್ವರ ಭಟ್ ಮತ್ತಿತರರು ಇದ್ದರು.

## ಸ್ವಾಮಿನಾರಾಯಣ ದೇಗುಲದ ಮೇಲೆ ದಾಳಿ

**ನ್ಯೂಯಾರ್ಕ್:** ಅಮೆರಿಕದ ಕ್ಯಾಲಿಫೋರ್ನಿಯಾದ ಅತಿದೊಡ್ಡ ಬಿಎಪಿಎಸ್ ಹಿಂದೂ ದೇವಾಲಯಕ್ಕೆ ಅಪರಿಚಿತ ದುಷ್ಕರ್ಮಿಗಳು ಹಾನಿ ಮಾಡಿದ್ದಾರೆ. ಚಿನೋ ಹಿಲ್ಸ್‌ನಲ್ಲಿರುವ ಶ್ರೀ ಸ್ವಾಮಿನಾರಾಯಣ ಮಂದಿರ ಅಪವಿತ್ರಗೊಂಡಿದೆ ಎಂದು ಬೋಚಸನ್ವಾಸಿ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆ (ಬಿಎಪಿಎಸ್) ಹೇಳಿದೆ. ಈ ಬಾರಿ ಕ್ಯಾಲಿಫೋರ್ನಿಯಾದ ಚಿನೋ ಹಿಲ್ಸ್‌ನಲ್ಲಿ ಮತ್ತೊಂದು ಮಂದಿರ ಹಾನಿಗೊಳಗಾಗಿದ್ದು, ಹಿಂದೂ ಸಮುದಾಯವು ದ್ವೇಷದ ವಿರುದ್ಧ ದೃಢವಾಗಿ ನಿಂತಿದೆ ಎಂದು ಹೇಳಿದೆ.

## ಸಮಾಚಾರ ಸಣ್ಣದಲ್ಲ

### ಚನ್ನಪಟ್ಟಣ ಬಳಿ ಕಾಡಾನೆಗಳು ಪ್ರತ್ಯಕ್ಷ

**ರಾಮನಗರ:** ಚನ್ನಪಟ್ಟಣದಲ್ಲಿ ಕಾಡಾನೆಗಳ ಉಪಟಳ ಮುಂದುವರಿದಿದೆ. ಊರಹಬ್ಬದ ದಿನವೇ ಗ್ರಾಮಕ್ಕೆ ಕಾಡಾನೆಗಳು ಪ್ರವೇಶ ಕೊಟ್ಟದ್ದರಿಂದ ಜನರು ದಿಕ್ಕಾಪಾಲಾಗಿ ಓಡಿದ ಘಟನೆ ಚನ್ನಪಟ್ಟಣ ಸಮೀಪದ ಕರಿಯಪ್ಪನದೊಡ್ಡಿಯಲ್ಲಿ ನಡೆದಿದೆ. ಚನ್ನಪಟ್ಟಣದ ಮೆಹದೀನಗರ ಹಾಗೂ ಪಕ್ಕದ ಬಡಾವಣೆಯಲ್ಲೂ ಕಾಡಾನೆಗಳ ಹಿಂಡು ಸಂಚರಿಸಿ ನಿವಾಸಿಗಳಿಗೆ ಭಯ ಹುಟ್ಟಿಸಿವೆ. ಕರಿಯಪ್ಪನದೊಡ್ಡಿಯಲ್ಲಿ ಊರಹಬ್ಬ ನಡೆದ ವೇಳೆ ಏಕಾಏಕಿ ನಾಲ್ಕು ಆನೆಗಳು ಗ್ರಾಮಕ್ಕೆ ನುಗ್ಗಿವೆ. ದೇವಾಲಯದ ಸಮೀಪ ಇದ್ದ ಜನರು ಎದ್ದೆನೋ ಬಿದ್ದೆನೋ ಎಂದು ಸ್ಥಳದಿಂದ ಓಡಿದ್ದಾರೆ. ಕಾಡಾನೆಗಳು ರಾತ್ರಿಯಿಡೀ ಜನವಸತಿ ಪ್ರದೇಶದಲ್ಲೇ ತಿರುಗುತ್ತಾ ದಾಂಧಲೆ ನಡೆಸಿದ್ದು, ಮೆಹದೀನಗರದ ಖಾಸಗಿ ಲೇಔಟ್‌ನ ಕಾಂಪೌಂಡ್ ಧ್ವಂಸ ಮಾಡಿವೆ. ಕಾಡಾನೆಗಳ ಹಿಂಡು ಕಂಡು ಚನ್ನಪಟ್ಟಣ ಜನತೆ ಬೆಚ್ಚಿಬಿದ್ದಿದ್ದು, ಈ ಉಪಟಳಕ್ಕೆ ಕಡಿವಾಣ ಹಾಕುವಂತೆ ಅರಣ್ಯಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

### ಆನೆ ದಾಳಿ: ಮಹಿಳೆಗೆ ಗಂಭೀರ ಗಾಯ

**ಹಾಸನ:** ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿ ಮೇಲೆ ಕಾಡಾನೆ ದಾಳಿ ನಡೆಸಿದ ಘಟನೆ ಬೇಲೂರು ತಾಲೂಕಿನ, ಚಿಕ್ಕಸಾಲಾವಾರ ಬಳಿ ನಡೆದಿದೆ. ಆನೆ ದಾಳಿಯಿಂದ ಬೈಕ್‌ನಲ್ಲಿದ್ದ ಮಹಿಳೆಗೆ ಗಂಭೀರ ಗಾಯವಾಗಿದೆ. ಭಾನುವಾರ ಬೆಳಗ್ಗೆ ಉಮೇಶ್ ಹಾಗೂ ರೇವತಿ (50) ದಂಪತಿ ಕೂಲಿ ಕೆಲಸಕ್ಕಾಗಿ ಬೈಕ್‌ನಲ್ಲಿ ಹೋಗುತ್ತಿದ್ದಾಗ ಕಾಡಾನೆ ಏಕಾಏಕಿ ದಾಳಿ ನಡೆಸಿದೆ. ಇದರಿಂದಾಗಿ ರೇವತಿಯ ತಲೆ ಮತ್ತು ಸೊಂಟದ ಭಾಗಕ್ಕೆ ಗಂಭೀರ ಗಾಯಗಳಾಗಿವೆ. ಅದೃಷ್ಟವಶಾತ್ ದಂಪತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗಾಯಾಳುಗಳಿಗೆ ಅರೇಹಳ್ಳಿ ಸರಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹಾಸನ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

### ಪ್ರೇಮಿಗಳು ಶವವಾಗಿ ಪತ್ತೆ

**ಮಂಗಳೂರು:** ನಾಪತ್ತೆಯಾಗಿದ್ದ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿನಿ ಮತ್ತು ಆಟೋಚಾಲಕ ಶವವಾಗಿ ಪತ್ತೆ ಆಗಿರುವ ಘಟನೆ ಕೇರಳದ ಕಾಸರಗೋಡು ಜಿಲ್ಲೆಯ ಮಂಡೆಕಾಪು ಗ್ರಾಮದಲ್ಲಿ ನಡೆದಿದೆ. ಆಟೋ ಚಾಲಕ ಪ್ರದೀಪ್ (42), 15 ವರ್ಷದ ವಿದ್ಯಾರ್ಥಿನಿ ಮೃತರು. ಪ್ರದೀಪ್ ಬಾಲಕಿಯ ಮನೆಗೆ ಭೇಟಿ ನೀಡುತ್ತಿದ್ದು, ಇಬ್ಬರೂ ಪ್ರೀತಿಸುತ್ತಿದ್ದರು. ಕಾಸರಗೋಡು ಜಿಲ್ಲೆಯ ಕುಂಬಳೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಫೆ.11ರಂದು ರಾತ್ರಿ ಮಂಡೆಕಾಪು ಗ್ರಾಮದಿಂದ ಪ್ರದೀಪ್ ಮತ್ತು ಬಾಲಕಿ ನಾಪತ್ತೆಯಾಗಿದ್ದರು. ನಾಪತ್ತೆ ಬಗ್ಗೆ ಕುಂಬಳೆ ಪೊಲೀಸರಿಗೆ ಅದೇ ದಿನ ಬಾಲಕಿಯ ತಾಯಿ ದೂರು ನೀಡಿದ್ದರು. ಪೊಲೀಸರು ತನಿಖೆ ನಡೆಸಿದರೂ ಇಬ್ಬರೂ ಪತ್ತೆಯಾಗಿರಲಿಲ್ಲ.

ಕರಾಳ ಭಾನುವಾರ | ಚಿತ್ರದುರ್ಗ ಬಳಿ ರಸ್ತೆ ದುರಂತದಲ್ಲಿ 5 ಬಲಿ | ಚಿಂತಾಮಣಿ ಸಮೀಪ ತಾಯಿ–ಮಗ ಸಜೀವ ದಹನ

# ಪ್ರತ್ಯೇಕ ಅಪಘಾತ: 11 ಜನರ ಸಾವು

**ಬೆಂಗಳೂರು:** ರಾಜ್ಯದ ವಿವಿಧೆಡೆ ಭಾನುವಾರ ಕರಾಳವಾಗಿ ಪರಿಣಮಿಸಿದ್ದು, ಪ್ರತ್ಯೇಕ ಅಪಘಾತಗಳಲ್ಲಿ 11 ಜನರು ಮೃತಪಟ್ಟು ಹಲವರು ಗಾಯಗೊಂಡಿದ್ದಾರೆ. ಚಿತ್ರದುರ್ಗದ ಬಳಿ ನಡೆದ ಭೀಕರ ಅಪಘಾತದಲ್ಲಿ ಐವರು ಸಾವನ್ನಪ್ಪಿದ್ದರೆ, ಚಿಂತಾಮಣಿ ಬಳಿ ನಡೆದ ಮತ್ತೊಂದು ದುರ್ಘಟನೆಯಲ್ಲಿ ತಾಯಿ–ಮಗ ಸಜೀವವಾಗಿ ದಹನಗೊಂಡಿದ್ದಾರೆ.

**ಲಾರಿಗೆ ಕಾರು ಡಿಕ್ಕಿ:** ಚಿತ್ರದುರ್ಗ ತಾಲೂಕಿನ ತಮಟಗಲ್ಲು ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಭಾನುವಾರ ನಿಂತಿದ್ದ ಲಾರಿಗೆ ಇನ್ನೋವಾ ಕಾರು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಐವರು ಸ್ಥಳದಲ್ಲೇ ಮೃತಪಟ್ಟು ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬೆಂಗಳೂರು ಮೂಲದ ಬಿಎಂಟಿಸಿ ನಿವೃತ್ತ ನೌಕರ ಶಾಂತಮೂರ್ತಿ (60), ರುದ್ರಸ್ವಾಮಿ (52), ಮಲ್ಲಿಕಾರ್ಜುನ (50), ಚಿದಂಬರಾಚಾರ್ (50) ಮೃತಪಟ್ಟಿದ್ದಾರೆ. ಮತ್ತೊಬ್ಬರ ಗುರುತು ಪತ್ತೆಯಾಗಿಲ್ಲ. ಗಂಭೀರವಾಗಿ ಗಾಯ ಗೊಂಡಿರುವ ಇನ್ನೊಬ್ಬರನ್ನು ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ. ಎಲ್ಲರೂ ಸವದತ್ತಿ ರೇಣುಕಾ ಯಲ್ಲಮ್ಮ ದೇವಾಲಯಕ್ಕೆ ತೆರಳಿ ದೇವರ ದರ್ಶನ ಪಡೆದು ವಾಪಸಾಗುತ್ತಿದ್ದಾಗ ಈ ದುರಂತ ಸಂಭವಿಸಿದೆ. ಕಾರಿನಲ್ಲಿದ್ದ ದೇವಾಲ ಯದ ಪ್ರಸಾದ ಚೆಲ್ಲಾಪಿಲ್ಲಿಯಾಗಿತ್ತು.

ಬೆಂಗಳೂರು ಕಡೆಗೆ ಚಲಿಸುತ್ತಿದ್ದ ತಮಿಳುನಾಡು ಮೂಲದ ಲಾರಿ ತಮಟಗಲ್ಲು ಬಳಿ ರಸ್ತೆಬದಿ ನಿಂತಿತ್ತು. ಹಿಂದಿನಿಂದ ವೇಗವಾಗಿ ಬಂದ ಇನ್ನೋವಾ ಕಾರು ಲಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ಅರ್ಧಭಾಗ ನುಜ್ಜುಗುಜ್ಜಾಗಿದೆ. ಕಾರಿನ ಚಾಲಕನ ನಿರ್ಲಕ್ಷ್ಯ ಚಾಲನೆಯೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

ಲಾರಿಗೆ ಡಿಕ್ಕಿ ಹೊಡೆದಿರುವ ಕಾರು.

> **ಬೆಳಗಾವಿಯಿಂದ ಬೆಂಗಳೂರಿಗೆ ತೆರಳುವ ಮಾರ್ಗ ಮಧ್ಯೆ ಘಟನೆ ಸಂಭವಿಸಿದೆ. ಇನ್ನೋವಾ ಕಾರು ಚಾಲಕನ ಅತಿಯಾದ ವೇಗವೇ ಅಪಘಾತಕ್ಕೆ ಕಾರಣ. ಮೃತರೆಲ್ಲರೂ ಬೆಳಗಾವಿಯ ಸವದತ್ತಿಗೆ ಹೋಗಿದ್ದರು. ಕಾರಿನಲ್ಲಿ ಯಲ್ಲಮ್ಮ ದೇವಾಲಯದ ಪ್ರಸಾದ ಕಂಡು ಬಂದಿದ್ದು, ದೇವಸ್ಥಾನಕ್ಕೆ ಹೋಗಿದ್ದ ಸಾಧ್ಯತೆ ಇದೆ. ಘಟನೆ ಬಗ್ಗೆ ಚಿತ್ರದುರ್ಗ ಗ್ರಾಮಾಂತರ ಪೊಲೀಸರಿಂದ ತನಿಖೆ ನಡೆಯುತ್ತಿದೆ**
> **-ರಂಜಿತ್‌ಕುಮಾರ್ ಬಂಡಾರು,** ಎಸ್‌ಪಿ

ಮೃತದೇಹಗಳನ್ನು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ. ಅಪಘಾತ ಸ್ಥಳಕ್ಕೆ ಚಿತ್ರದುರ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಡಿವೈಎಸ್ಪಿ ದಿನಕರ್ ಭೇಟಿ ನೀಡಿ ಪರಿಶೀಲಿಸಿದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಟಿಪ್ಪರ್-ಕಾರು ಡಿಕ್ಕಿ: ಇಬ್ಬರ ಸಾವು:** ಅದೇ ರೀತಿ ಬೆಳಗಾವಿ ಸಮೀಪದ ಬಿಲ ಕುಂದಿ ಬಳಿ ಗೊಡಚಿನಮಲ್ಕಿ- ಬಾದಾಮಿ ರಾಜ್ಯ ಹೆದ್ದಾರಿಯಲ್ಲಿ ಟಿಪ್ಪರ್ ಮತ್ತು ಕಾರಿನ ಮಧ್ಯೆ ಭಾನುವಾರ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಲ್ಲೋಳಿಯ ಶಿವಪ್ಪ ಹುಕ್ಕೇರಿ (40), ನಿಂಗಾಪುರದ ಕೆಂಚಪ್ಪ ಕರಿಗಾರ (35) ಮೃತರು. ಗೋಕಾಕದಿಂದ ಕೌಜಲಗಿ ಕಡೆ ಹೊರಟಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ, ಎದುರಿಗೆ ಬಂದ ಟಿಪ್ಪರ್‌ಗೆ ಡಿಕ್ಕಿ ಹೊಡೆದಿದೆ. ಕಾರಿನಲ್ಲಿದ್ದ ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕುಲಗೋಡ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಕಾರಿಗೆ ಬಸ್ ಡಿಕ್ಕಿ: ತಾಯಿ,ಮಗ ಸಜೀವ ದಹನ:** ಕಾರಿಗೆ ಖಾಸಗಿ ಬಸ್ಸು ಡಿಕ್ಕಿಯಾದ ಪರಿಣಾಮ ಕಾರು ಹೊತ್ತಿ ಉರಿದು ಇಬ್ಬರು ಸಜೀವ ದಹನವಾದ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಗೋಪಲ್ಲಿ ಗೇಟ್ ಬಳಿ ನಡೆದಿದೆ. ಕಾರು ಚಾಲಕ ಧನಂಜಯ್ (34) ಹಾಗೂ ತಾಯಿ ಕಲಾವತಿ (54) ಮೃತರು. ಮೂರು ವರ್ಷದ ಮಾನ್ವಿತ ಸೇರಿದಂತೆ ಮೂವರು ಗಾಯಗೊಂಡಿದ್ದು, ಗಾಯಾಳುಗಳನ್ನು ಚಿಂತಾಮಣಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಸ್ ಸಹ ರಸ್ತೆಬದಿಯ ಹಳ್ಳಕ್ಕೆ ಉರುಳಿ ಪಲ್ಟಿಯಾಗಿ ನಿಂತಿದ್ದು ಬಸ್ ನಲ್ಲಿದ್ದ ಪ್ರಯಾಣಿಕರಿಗೂ ಗಾಯಗಳಾಗಿವೆ. ಸ್ಥಳಕ್ಕೆ ಅಗ್ನಿಶಾಮಕ ದಳ ಸಿಬ್ಬಂದಿ ಧಾವಿಸಿ ಕಾರಿನ ಬೆಂಕಿ ನಂದಿಸಿದ್ದಾರೆ. ಸ್ಥಳಕ್ಕೆ ಚಿಕ್ಕಬಳ್ಳಾಪುರ ಎಸ್‌ಪಿ ಕುಶಾಲ್ ಚೌಕ್ಸಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಟ್ಟಡ ಕುಸಿದು ಇಬ್ಬರ ದುರ್ಮರಣ

ಹಾಸನ: ಬೇಲೂರು ಪಟ್ಟಣದ ಬಸ್ ನಿಲ್ದಾಣ ಮುಂಭಾಗ ಪಾಳುಬಿದ್ದಿದ್ದ ಖಾಸಗಿ ವಾಣಿಜ್ಯ ಮಳಿಗೆಯ ಸಜ್ಜಾ ದಿಢೀರನೇ ಕುಸಿದು ಇಬ್ಬರು ದುರಂತ ಅಂತ್ಯ ಕಂಡ ಘಟನೆ ಭಾನುವಾರ ಮಧ್ಯಾಹ್ನ ನಡೆದಿದೆ. ಹಣ್ಣು ಖರೀದಿಗೆ ಬಂದಿದ್ದ ನಜೀರ್(38) ಹಾಗೂ ಅಮರನಾಥ್(45) ಮೃತರು. ಜ್ಯೋತಿ,ನೀಲಮ್ಮ ಸೇರಿದಂತೆ ಮೂವರ ಪರಿಸ್ಥಿತಿ ಗಂಭೀರವಾಗಿದೆ. ಚೀಕನಹಳ್ಳಿ ಸತ್ಯನಾರಾಯಣಗೌಡ ಎಂಬುವರಿಗೆ ಸೇರಿದ್ದ 8 ಮಳಿಗೆಗಳಿದ್ದ ಹಳೆಯ ಕಟ್ಟಡ ಇದಾಗಿದ್ದು, ಇದರಲ್ಲೇ ಹಣ್ಣು, ತರಕಾರಿ ಸೇರಿದಂತೆ ವಿವಿಧ ರೀತಿಯ ವ್ಯಾಪಾರ ನಡೆಯುತ್ತಿತ್ತು. ನಜೀರ್ ಹಾಗೂ ಅಮರನಾಥ್ ಹಣ್ಣು ಖರೀದಿಗೆ ಬಂದು ಜೀವ ಕಳೆದುಕೊಂಡಿದ್ದಾರೆ. ಐವರು ಅವಶೇಷದಡಿಯಲ್ಲಿ ಸಿಲುಕಿರುವ ಶಂಕೆಯಿದೆ.

ಅಪಾಯಕಾರಿಯಾಗಿರುವ ಈ ಕಟ್ಟಡವನ್ನು ಶೀಘ್ರವೇ ತೆರವುಗೊಳಿಸುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ. ಸ್ಥಳಕ್ಕೆ ಹಾಸನ ಎಸ್.ಪಿ ಮೊಹಮದ್ ಸುಜೀತಾ, ಶಾಸಕ ಎಚ್.ಕೆ. ಸುರೇಶ್ ಮೊದಲಾದವರು ಭೇಟಿ ನೀಡಿ ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿದರು.

## ಮುಸ್ಲಿಮರಿಗೆ ಮೀಸಲು ಸದನದಲ್ಲಿಂದು ಗದ್ದಲ?

← ಮೊದಲಪುಟದಿಂದ

**ಪ್ರತಿತಂತ್ರ ರೂಪಿಸಿಕೊಂಡಿರುವ ಕಾಂಗ್ರೆಸ್:** ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ಹೆಚ್ಚಿನ ಅನುದಾನ ನೀಡಿದ್ದಾರೆ ಎನ್ನುವ ವಿಷಯವನ್ನೇ ಮುಂದಿಟ್ಟುಕೊಂಡು ಬಿಜೆಪಿ ನಾಯಕರು ಆರೋಪಿಸುವುದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಯಾವೆಲ್ಲ ವಿಷಯವನ್ನು ಪ್ರಸ್ತಾಪಿಸಬೇಕು ಎನ್ನುವ ಬಗ್ಗೆ ಚರ್ಚೆಗಳು ನಡೆದಿವೆ. ಗ್ಯಾರಂಟಿ ಯೋಜನೆಗೆ 52 ಸಾವಿರ ಕೋಟಿ ಅನುದಾನ ನೀಡುವುದರೊಂದಿಗೆ, ಎಲ್ಲ ಸಮುದಾಯಗಳನ್ನು ಗಮನದಲ್ಲಿರಿಸಿಕೊಂಡು ಘೋಷಿಸಿರುವ ಯೋಜನೆಗಳು, ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಕಟಿಸಿರುವ ಯೋಜನೆಗಳು ತೋರಿ ಸುವ ಮೂಲಕ ಬಿಜೆಪಿ ವಿರುದ್ಧ ವಾಕ್ಸಮರ ನಡೆಸಲು ಕಾಂಗ್ರೆಸಿ ಗರು ಮುಂದಾಗಿದ್ದಾರೆ. ಬಿಜೆಪಿ ಅವಧಿಯಲ್ಲಿನ ಕರೋನಾ ಅವ್ಯವಹಾರ, 40 ಪರ್ಸೆಂಟ್ ಕಮಿಷನ್ ಸೇರಿದಂತೆ ವಿವಿಧ ವಿಷಯಗಳನ್ನು ಪ್ರಸ್ತಾಪಿಸುವ ಮೂಲಕ ಬಿಜೆಪಿಗರನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ಮಾಡುವ ಸಾಧ್ಯತೆಯಿದೆ ಎನ್ನಲಾಗಿದೆ.

## ಬಣ ಮುಖಂಡರಿಗೆ ಬುಲಾವ್

← ಮೊದಲಪುಟದಿಂದ

ಕಾಂಗ್ರೆಸ್ಸಿಗರ ಈ ಬ್ಲ್ಯಾಕ್‌ಮೇಲ್ ತಂತ್ರದಿಂದ ತಪ್ಪಿಸಿ ಕೊಳ್ಳಲು ವಿಜಯೇಂದ್ರ ಹೊಂದಾಣಿಕೆ ರಾಜಕೀಯದ ಮೊರೆ ಹೋಗಿದ್ದಾರೆ ಎನ್ನುವ ಆರೋಪ ಮಾಡಿದ್ದಾರೆ. ಈ ಎಲ್ಲ ಬೆಳವಣಿಗೆಗಳಿಂದ ಪಕ್ಷದಿಂದ ದೂರಾಗಿರುವ ಕಾರ್ಯ ಕರ್ತರನ್ನು ಮತ್ತೆ ಒಗ್ಗೂಡಿಸಬೇಕು ಎಂದರೆ ಬಿಜೆಪಿ ರಾಜ್ಯಾ ಧ್ಯಕ್ಷರ ಬದಲಾವಣೆಯೊಂದೇ ಪರಿಹಾರ ಎನ್ನುವ ಮಾತು ಗಳನ್ನು ವರಿಷ್ಠರಿಗೆ ಮತ್ತೊಮ್ಮೆ ತಿಳಿಸಲು ಬಣ ನಾಯಕರು ಸಜ್ಜಾಗಿದ್ದಾರೆ.

**ನಿಗದಿಯಾಗದ ದಿನಾಂಕ:** ಮೂಲಗಳ ಪ್ರಕಾರ ಬೆಂಗಳೂರಿಗೆ ಆಗಮಿಸಿದ್ದ ಅಮಿತ್ ಶಾ ಅವರೊಂದಿಗೆ ಅರವಿಂದ ಲಿಂಬಾವಳಿ ಅವರು ಪ್ರತ್ಯೇಕ ಚರ್ಚೆಗೆ ಪ್ರಯತ್ನಿಸಿದರೂ ಸಾಧ್ಯವಾಗಿಲ್ಲ. ಬದಲಿಗೆ ದೆಹಲಿಗೆ ಬರುವಂತೆ ಸೂಚನೆ ನೀಡಿದ್ದಾರೆ. ಆದರೆ ದೆಹಲಿಗೆ ಯಾವಾಗ ಬರಬೇಕು ಎನ್ನುವ ಬಗ್ಗೆ ಅಮಿತ್ ಶಾ ಸ್ಪಷ್ಟಪ ಡಿಸಿಲ್ಲ. ಶೀಘ್ರವೇ ದಿನಾಂಕ ಹಾಗೂ ಯಾರೆಲ್ಲ ಭಾಗವಹಿಸ ಬೇಕು ಎನ್ನುವುದು ನಿಗದಿಯಾಗಲಿದ್ದು, ಅದರ ಆಧಾರದ ಮೇಲೆ ಮುಂದಿನ ಎಲ್ಲವೂ ತೀರ್ಮಾನವಾಗಲಿದೆ ಎಂದು ತಿಳಿದುಬಂದಿದೆ.

ಚಿಕ್ಕನಂದಿಹಳ್ಳಿ ಗ್ರಾಮದಲ್ಲಿ ನಡೆದ ಘಟನೆ

## ತಮ್ಮನನ್ನು ಕೊಂದ ಅಣ್ಣ

**ಚನ್ನಮ್ಮನ ಕಿತ್ತೂರು:** ಪ್ರೀತಿಸಿದವಳನ್ನೇ ಮದುವೆಯಾಗುತ್ತೇನೆಂದು ಹಠ ಹಿಡಿದು ಕುಡಿತದ ಚಟಕ್ಕೆ ಬಿದ್ದು, ಮನೆಗೆ ಬಂದು ಕಿರಿಕ್ ಮಾಡುತ್ತಿದ್ದ ಎಂಬ ಕೋಪಕ್ಕೆ ತಮ್ಮನನ್ನು ಸ್ವತಃ ಅಣ್ಣನೇ ಕೊಲೆ ಮಾಡಿರುವ ಘಟನೆಯೊಂದು ತಾಲೂಕಿನ ಚಿಕ್ಕನಂದಿಹಳ್ಳಿ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ. ಇದಕ್ಕೆ ಹಿರಿಯಮಗನಿಗೆ ಅಪ್ಪನೂ ಸಾಥ್ ಕೊಟ್ಟ ಆರೋಪ ಕೇಳಿಬಂದಿದೆ.

ಚಿಕ್ಕನಂದಿಹಳ್ಳಿ ಗ್ರಾಮದ ಮಂಜುನಾಥ ನಾಗಪ್ಪ ಉಳ್ಳಾಗಡ್ಡಿ (25) ಕೊಲೆಯಾದ ದುರ್ದೈವಿ. ಇತನ ತಂದೆ ನಾಗಪ್ಪ ಉಳ್ಳಾಗಡ್ಡಿ ಹಾಗೂ ಹಿರಿಯ ಮಗ ಗುರುಬಸಪ್ಪ ಉಳ್ಳಾಗಡ್ಡಿ ಸೇರಿಕೊಂಡು ಮೃತ ಮಂಜುನಾಥನ ತಲೆಗೆ ಕಲ್ಲಿನಿಂದ ಜಜ್ಜಿ ಭೀಕರವಾಗಿ ಕೊಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಗುರುಬಸಪ್ಪ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಕಳೆದ ಎರಡು ದಿನದ ಹಿಂದೆ ರಜೆಯ ಮೇಲೆ ಸ್ವಗ್ರಾಮಕ್ಕೆ ಮನೆಗೆ ಬಂದಿದ್ದ. ಆತನ ತಮ್ಮ ಮೃತ ಮಂಜುನಾಥನ ಬೇರೆ ಜಾತಿ ಯುವತಿಯನ್ನು ಪ್ರೀತಿಸುತ್ತಿದ್ದ. ಇದಕ್ಕೆ ಕುಟುಂಬಸ್ಥರು ನಿರಾಕರಿಸಿದ್ದರು. ಇದೇ ವಿಚಾರಕ್ಕೆ ಕಿರಿಕ್ ಶುರುವಾಗಿ ಹಿರಿಯ ಮಗನ ಮದುವೆ ಫಿಕ್ಸ್ ಮಾಡಿದ್ದೀರಿ, ನನ್ನ ಮದುವೆ ಯಾವಾಗ? ಎಂದು ಮಂಜುನಾಥ ನಶೆಯಲ್ಲಿ ಮನೆಯವರೊಂದಿಗೆ ಜಗಳವಾಡಿದ್ದ. ಜಗಳ ವಿಕೋಪಕ್ಕೆ ತಿರುಗಿ ಮದುವೆ ಆಗಬೇಕಾದ ಯುವಕ ತಂದೆ ಮತ್ತು ಅಣ್ಣನ ಕೈಯಿಂದ ಕೊಲೆಯಾಗಿ ಮಸಣ ಸೇರಿದ್ದಾನೆ. ಈ ಕುರಿತು ಕಿತ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಚಾರಣೆ ವೇಳೆ ನಾಪತ್ತೆಯ ಅಸಲಿ ಕಾರಣ ಬಯಲು | ಉಡುಪಿಯಲ್ಲಿ ದಿಗಂತ್ ಪತ್ತೆ

## ಅಂತಿಮ ಪರೀಕ್ಷೆಗೆ ಹೆದರಿ ವಿದ್ಯಾರ್ಥಿ ನಾಪತ್ತೆ

**ಮಂಗಳೂರು:** ಫರಂಗಿಪೇಟೆಯ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿ ನಾಪತ್ತೆ ಪ್ರಕರಣದ ಅಸಲಿ ಕಾರಣ ಇದೀಗ ಬೆಳಕಿಗೆ ಬಂದಿದೆ. 12 ದಿನಗಳ ಬಳಿಕ ಶುಕ್ರವಾರ ವಿದ್ಯಾರ್ಥಿ ದಿಗಂತ್ ಉಡುಪಿಯ ಡಿ'ಮಾರ್ಟ್‌ನಲ್ಲಿ ಪತ್ತೆಯಾಗಿದ್ದ. ಪಿಯುಸಿ ಅಂತಿಮ ಪರೀಕ್ಷೆಗೆ ಹೆದರಿ ಪರಾರಿಯಾಗಿದ್ದಾಗಿ ಬಾಲಕ ಸ್ಪಷ್ಟಪಡಿಸಿದ್ದಾನೆ. ದ್ವಿತೀಯ ಪಿಯುಸಿ ಪರೀಕ್ಷೆಯ ಹಾಲ್ ಟಿಕೆಟ್ ತಂದ ಬಳಿಕವೇ ದಿಗಂತ್ ನಾಪತ್ತೆಯ ಯೋಜನೆ ಮಾಡಿದ್ದ. ಕಳೆದ ಪರೀಕ್ಷೆ ಯಲ್ಲಿ ಕಡಿಮೆ ಅಂಕ ಬಂದಿದ್ದಕ್ಕೆ ಮನೆಯಲ್ಲಿ ಬೈದಿದ್ದರು. ಹೀಗಾಗಿ, ಅಂತಿಮ ಪರೀಕ್ಷೆ ಭಯದಿಂದ ಪರಾರಿಯಾಗಿದ್ದ.

### ಪರಾರಿ ಯೋಜನೆ ಬಾಯ್ಬಿಟ್ಟ ದಿಗಂತ್

ಪರಾರಿಯಾಗಲು ಮಾಡಿದ ಯೋಜನೆ ಬಗ್ಗೆ ದಿಗಂತ್ ಬಾಯಿಬಿಟ್ಟಿದ್ದಾನೆ. ಫೆ.25ರಂದು ಬಸ್ಸಿನಲ್ಲಿ ಮೈಸೂರಿಗೆ ತೆರಳಿದ್ದ. ಅಲ್ಲಿಂದ ಬೆಂಗಳೂರಿಗೆ ಬಸ್ಸಿನಲ್ಲೇ ಹೋಗಿ 2 ದಿನ ರಾಜಧಾನಿಯಲ್ಲಿ ಸುತ್ತಾಡಿದ್ದ. ಬಳಿಕ ಕೈಯಲ್ಲಿದ್ದ ಹಣ ಖಾಲಿಯಾದಾಗ ಬೆಂಗಳೂರು ರೆಸಾರ್ಟ್‌ನಲ್ಲಿ ಕೆಲಸಕ್ಕೆ ಸೇರಿದ್ದ. ರೆಸಾರ್ಟ್‌ನಲ್ಲಿ 3 ದಿನಗಳ ಕಾಲ ಕೆಲಸ ಮಾಡಿ ಸಂಬಳ ಪಡೆದು ಅಲ್ಲಿಂದ ಹೊರಬಿದ್ದಿದ್ದ. ಶಿವಮೊಗ್ಗಕ್ಕೆ ಬಸ್ಸಿನಲ್ಲಿ ಪ್ರಯಾಣಿಸಿ, ಶಿವಮೊಗ್ಗದಿಂದ ಮತ್ತೆ ಮೈಸೂರಿಗೆ ಬಸ್ಸಿನಲ್ಲಿ ತೆರಳಿದ್ದ. ಶುಕ್ರವಾರ ರಾತ್ರಿ ಮೈಸೂರಿನಿಂದ ಮುರುಡೇಶ್ವರದ ರೈಲಿನಲ್ಲಿ ಹೊರಟಿದ್ದ. ರೈಲು ಫರಂಗಿಪೇಟೆ ಹಾದುಹೋದಾಗ ತನ್ನ ಮನೆ ಸಮೀಪ ಪೊಲೀಸರು ಹುಡುಕಾಟ ನಡೆಸುತ್ತಿದ್ದುದನ್ನು ನೋಡಿದ್ದ. ರೈಲು ಉಡುಪಿಗೆ ಬರುತ್ತಿದ್ದಂತೆ ಡಿ'ಮಾರ್ಟ್‌ಗೆ ತೆರಳಿದ್ದ. ಅಲ್ಲಿನ ಸಿಬ್ಬಂದಿ ಆತನನ್ನು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದರು ಎಂದು ತಿಳಿಸಿದ್ದಾನೆ.

### ಫನ್‌ತರಂಗ

- ರಘುಪತಿ ಶೃಂಗೇರಿ -




## ಬಿಜೆಪಿ ಸುಳ್ಳುಗಳಿಗೆ ಕಿವಿಕೊಡಬೇಡಿ: ಶಾಸಕ ಟಿ.ಡಿ.ರಾಜೇಗೌಡ

**ನರಸಿಂಹರಾಜಪುರ:** ಪ್ರತಿಭಟನೆ ಮಾಡುವುದು ಪ್ರಜಾಪ್ರಭುತ್ವದ ಹಕ್ಕಾಗಿದ್ದು, ಬಿಜೆಪಿಯ ಸುಳ್ಳುಗಳಿಗೆ ಕ್ಷೇತ್ರದ ಜನರು ಕಿವಿಗೊಡಬಾರದು ಎಂದು ಶಾಸಕ ಟಿ.ಡಿ.ರಾಜೇಗೌಡ ಹೇಳಿದರು. ಕ್ಷೇತ್ರದ ಅಭಿವೃದ್ಧಿಗೆ ನಿರಂತರವಾಗಿ ಅಡ್ಡಿಪಡಿಸಿದವರು ಪ್ರತಿಭಟನೆ ಮಾಡುತ್ತಿರುವುದು ಹಾಸ್ಯಸ್ಪದವಾಗಿದೆ ಎಂದ ಅವರು, ತಪ್ಪು ಮಾಡಿದ್ದರೆ ಎಚ್ಚರಿಸಲಿ. ಸರಿಪಡಿಸಿಕೊಳ್ಳುತ್ತೇನೆ ಎಂದರು. ರಾಜ್ಯ ಬಜೆಟ್‌ನಲ್ಲಿ ಆನೆ–ಮಾನವ ಸಂಘರ್ಷ ತಡೆಗಟ್ಟಲು ರೈಲ್ವೆ ಬ್ಯಾರಿಕೆಡ್ ನಿರ್ಮಾಣಕ್ಕೆ 60 ಕೋಟಿ ಅನುದಾನ ನೀಡಿದ್ದಾರೆ ಎಂದರು.

ರಾಜ್ಯ ಸರಕಾರ ಬಜೆಟ್ ಅನ್ನು ಅಲ್ಪಸಂಖ್ಯಾತರ ಬಜೆಟ್ ಎಂದು ಬಿಜೆಪಿಯವರು ಟೀಕಿಸುತ್ತಿದ್ದಾರೆ. ಅಲ್ಪಸಂಖ್ಯಾತರೆಂದರೆ ಕೇವಲ ಮುಸ್ಲಿಮರು ಮಾತ್ರವಲ್ಲ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಕ್ ಸಮುದಾಯವದರು ಸೇರಿದ್ದಾರೆ. ಜೈನ ಸಮುದಾಯಕ್ಕೆ ಸೇರಿದ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿರುವುದನ್ನು ಬಿಜೆಪಿಯವರು ಸಹಿಸಿಕೊಳ್ಳುತ್ತಿಲ್ಲ ಎಂದು ಹೇಳಿದರು.

ಕರ್ನಾಟಕ ಸರಕಾರ
**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ**
**ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ**
ದೂರವಾಣಿ : 08472 –220196, midnglb@rediffmail.com / midnglb1@gmail.com

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–1/ಕೆ.ಡಬ್ಲ್ಯೂ–1&2/2024–25/ 4413 ದಿನಾಂಕ: 07–03–2025

**–:ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1&2):–**

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ ವಿಶೇಷ ಘಟಕ ಯೋಜನೆ, 2702 ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ ಹಾಗೂ 4702 ಏತ ನೀರಾವರಿ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: **ಗರಿಷ್ಠ ರೂ. 50,82,765.22 ಕನಿಷ್ಠ ರೂ. 3,35,293.35**, 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಹಾಗೂ ಮೇಲ್ಪಟ್ಟು, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ.ಪಿ. ಪೋರ್ಟಲನಂತೆ, ಇ.ಎಂ.ಡಿ. **ಗರಿಷ್ಠ ರೂ. 51,000.00 ಕನಿಷ್ಠ ರೂ. 4,300.00,** 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **14–03–2025 ಸಮಯ 11.00 ಗಂಟೆಯ ವರೆಗೆ,** 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **15–03–2025 ಸಮಯ 17.30 ಗಂಟೆಯ ವರೆಗೆ,** 7) ಟೆಂಡರ ತೆರೆಯುವ ದಿನಾಂಕ: **17–03–2025 ಸಮಯ 11.00 ಗಂಟೆಯ ವರೆಗೆ,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **18–03–2025 ಸಮಯ 17.30 ಗಂಟೆಯ ವರೆಗೆ,** 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: (https:// KPPP.Karnataka.gov.in)

**ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,**
**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.**
ವಾ.ಸಾ.ಸಂ.ಇ/ಕಲಬುರಗಿ/1067/ಕೆ.ಎಸ್.ಎಂ.ಸಿ.&ಎ/2024–25

**ಮಹಾನಗರ ಪಾಲಿಕೆ, ಕಲಬುರಗಿ**
ದೂ.: 08472/ 278675 ಫ್ಯಾಕ್ಸ : 08472 / 260776 ಇ ಮೇಲ್– itstaff_ulb_gulbarga@yahoo.com
No: KMP/EE/TS-02/ 15th FC/SFC D.W/2024-25 ದಿನಾಂಕ: 07.03.2025

**:: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ ::**

**ಸಂಖ್ಯೆ:06/2024–25**

1) ಕಾಮಗಾರಿಯ ವಿವರ ః ಕಲಬುರಗಿ ಮಹಾನಗರ ಪಾಲಿಕೆಯಿಂದ 2023–24ನೇ ಸಾಲಿನ 15ನೇ ಹಣಕಾಸು ಪರಿಷ್ಕೃತ ಕ್ರಿಯಾ ಯೊಜನೆ, 2024–25ನೇ ಸಾಲಿನ 15ನೇ ಹಣಕಾಸು ಪರಿಷ್ಕೃತ ಕ್ರಿಯಾ ಯೊಜನೆ, 2024–25ನೇ ಸಾಲಿನ ಎಸ್.ಎಫ್.ಸಿ & 2024–25ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಕ್ರಿಯಾ ಯೊಜನೆ ಅನುದಾನದಲ್ಲಿ ಅನುಮೋದನೆಗೊಂಡ ಒಟ್ಟು (7) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ–1,2 & 3 ರ ಮೂಲಕ 15 ದಿನಗಳ ಟೆಂಡರ್‌ನ್ನು ದ್ವಿ ಲಕೋಟೆಯಲ್ಲಿ (Two Cover) ಟೆಂಡರನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಕನಿಷ್ಠ ಮೊತ್ತ **ರೂ. 2.50 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ. 95.00 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರಃ 3&4ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್–2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. **ಕನಿಷ್ಠ ರೂ. 2,700.00 ಗಳು ಹಾಗೂ ಗರಿಷ್ಠ ರೂ. 92,300.00 ಗಳು.** , 5) ಪೂರ್ವಭಾವಿ ಸಭೆ ದಿನಾಂಕ: **21.03.2025 ರಂದು ಬೆಳಿಗ್ಗೆ 11:00 ಗಂಟೆಗೆ.** 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **21.03.2025 ರಂದು ಸಾಯಂಕಾಲ 4:30 ಗಂಟೆಗೆ.** 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **24.03.2025 ರಂದು ಸಾಯಂಕಾಲ 04:35 ಗಂಟೆಗೆ.** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **25.03.2025 ರಂದು ಬೆಳಿಗ್ಗೆ 11:30 ಗಂಟೆಗೆ.** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ ః ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

**ಸಹಿ/– ಕಾರ್ಯಪಾಲಕ ಅಭಿಯಂತರರು,**
**ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.**
ವಾ.ಸಾ.ಸಂ.ಇ/ಕಲಬುರಗಿ/1062/ಕೆ.ಎಸ್.ಎಂ.ಸಿ.&ಎ/2024–25

ಸಣಾಪೂರ ಸಮೀಪದ ತುಂಗಭದ್ರಾ ಕಾಲುವೆ ಬಳಿ ನಡೆದಿದ್ದ ಘಟನೆ

## ಅತ್ಯಾಚಾರ ಪ್ರಕರಣ: ಸ್ಥಳ ಮಹಜರು, ಮತ್ತೊಬ್ಬ ಸೆರೆ

ಗಂಗಾವತಿ: ತಾಲೂಕಿನ ಸಣಾಪೂರ ಸಮೀಪದ ತುಂಗಭದ್ರಾ ಕಾಲುವೆ ಬಳಿ ನಡೆದಿದ್ದ ವಿದೇಶಿ ಮಹಿಳೆ ಹಾಗೂ ಹೋಂ ಸ್ಟೇ ಒಡತಿ ಮೇಲಿನ ಅತ್ಯಾಚಾರ ಪ್ರಕರಣ ಇಡೀ ದೇಶಾದ್ಯಂತ ಸದ್ದು ಮಾಡುತ್ತಿದೆ. ಮತ್ತೊಂದೆಡೆ ಪೊಲೀಸರು ಇಬ್ಬರು ಆರೋಪಿಗಳನ್ನು ಸ್ಥಳಕ್ಕೆ ಕರೆದೊಯ್ದು ಮಹಜರು ಮಾಡಿದ್ದಾರೆ. ತಲೆಮರೆಸಿಕೊಂಡಿದ್ದ ಮತ್ತೊಬ್ಬ ಆರೋಪಿಯನ್ನೂ ಬಂಧಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ. ಒಟ್ಟು ಮೂವರು ಆರೋಪಿಗಳ ಪೈಕಿ ಮಲ್ಲೇಶ ಅಲಿಯಾಸ್ ಹಂದಿ ಮಲ್ಲ (22) ಹಾಗೂ ಚೇತನ ಸಾಯಿ ಶಿಲ್ಲೇಕ್ಯಾತರ್ (21) ಎಂಬುವರನ್ನು ಮಾ.8 ರಂದು ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದ್ದ ಪೊಲೀಸರು, ತನಿಖೆಗೆ ಮತ್ತೇ ವಶಕ್ಕೆ ಪಡೆದು ಕೊಂಡಿದ್ದರು. ಈ ಇಬ್ಬರು ಆರೋಪಿಗಳೊಂದಿಗೆ ಘಟನಾ ಸ್ಥಳಕ್ಕೆ ತೆರಳಿದ ಪೊಲೀಸರು ಸ್ಥಳ ಮಹಜರು ಮಾಡಿದ್ದಾರೆ. ಯಾವ ಯಾವ ಸ್ಥಳದಲ್ಲಿ ಯಾವ ಕೃತ್ಯ ಎಸಗಿದ್ದಾರೆ ಎಂಬುದನ್ನು ದಾಖಲಿಸಿಕೊಂಡರು.

ಗಂಗಾವತಿ ತಾಲೂಕು ಸಣಾಪೂರ ಸಮೀಪದ ತುಂಗಭದ್ರ ಕಾಲುವೆ ಬಳಿ ನಡೆದಿದ್ದ ವಿದೇಶಿ ಮಹಿಳೆ ಹಾಗೂ ಹೋಂ ಸ್ಟೇ ಒಡತಿ ಮೇಲಿನ ಅತ್ಯಾಚಾರ ಪ್ರಕರಣದ ಇಬ್ಬರು ಆರೋಪಿಗಳನ್ನು ಪೊಲೀಸರು ಸ್ಥಳಕ್ಕೆ ಕರೆದ್ದೊಯ್ದು ಭಾನುವಾರ ಮಹಜರು ಮಾಡಿದರು.

ಈ ನಡುವೆ ತಲೆ ಮರೆಸಿ ಕೊಂಡಿದ್ದ ಇನ್ನೊಬ್ಬ ಆರೋಪಿಯನ್ನೂ ಪೊಲೀ ಸರು ಬಂಧಿಸಿದ್ದು, ಅಧಿಕೃತ ಮಾಹಿತಿ ನೀಡಿಲ್ಲ. ಆದರೆ, ಜಿಲ್ಲಾ ಉಸ್ತುವಾರಿ ಸಚಿವರು ಬಂಧನದ ಮಾಡಿದ್ದಾಗಿ ಹೇಳಿದ್ದಾರೆ.

**ಆತಂಕ:** ಘಟನೆ ಹಿನ್ನೆಲೆ ವಿರೂಪಾಪುರ ಗಡ್ಡಿ, ಸಣಾಪೂರ ಹಾಗೂ ಹಂಪಿಯಲ್ಲಿ ಉಳಿದುಕೊಂಡಿರುವ ಇಸ್ರೇಲ್ ಸೇರಿ ಬೇರೆ ಬೇರೆ ದೇಶಗಳ ವಿದೇಶಿ ಪ್ರವಾಸಿಗರು ಆತಂಕಕ್ಕೆ ಒಳಗಾಗಿದ್ದಾರೆ. ಈ ಬಗ್ಗೆ ಯಾರೊಬ್ಬರೂ ಅಧಿಕೃತವಾಗಿ ಮಾತನಾಡಲು ಸಿದ್ದರಿಲ್ಲ. ಆದರೆ, ಘಟನೆ ಹಿನ್ನೆಲೆ ಹೊರಗೆ ಬರದೇ ತಾವು ತಂಗಿರುವ ಹೋಂ ಸ್ಟೇ ಮತ್ತು ರೆಸಾರ್ಟ್‌ನಲ್ಲೇ ಉಳಿದುಕೊಂಡಿದ್ದಾರೆ.

### ಜನಾರ್ದನ ರೆಡ್ಡಿ ಖಂಡನೆ

ಇಬ್ಬರು ಮಹಿಳೆಯರ ಮೇಲಿನ ಗ್ಯಾಂಗ್ ರೇಪ್ ಘಟನೆಯನ್ನು ಶಾಸಕ ಜನಾರ್ದನ ರೆಡ್ಡಿ ಖಂಡಿಸಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ರೆಡ್ಡಿ, ಹಲ್ಲೆ ಮತ್ತು ಅತ್ಯಾಚಾರ ಪ್ರಕರಣ ಅತ್ಯಂತ ಹೀನ ಕೃತ್ಯ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಇಬ್ಬರು ಆರೋಪಿಗಳನ್ನುಪೊಲೀಸರು ಬಂಧಿಸಿದ್ದಾರೆ. ನಾನು ಸಚಿವನಾಗಿದ್ದಾಗ ಹಂಪಿ ಆನೆಗೊಂದಿ ಭಾಗದಲ್ಲಿ ನಿರಂತರ ಗಸ್ತು ತಿರುಗುತ್ತಿದ್ದರು. ನಂತರ ಬಂದ ಸರಕಾರ ಹಂಪಿಯಲ್ಲಿ ಪೊಲೀಸ್ ಸಬ್ ಡಿವಿಷನ್ ಸ್ಥಗಿತಗೊಳಿಸಿವೆ. ಹಂಪಿ ಹಾಗೂ ಆನೆಗೊಂದಿಗೆ ಆಗಮಿಸುವ ದೇಶ-ವಿದೇಶಗಳ ಪ್ರವಾಸಿಗರ ರಕ್ಷಣೆಗೆ ಕ್ರಮ ಕೈಗೊಳ್ಳಿ. ಈ ಹಿಂದೆ ಕಲ್ಪಿಸಲಾಗಿದ್ದ ಪೊಲೀಸ್ ಸಬ್ ಡಿವಿಷನ್ ಹಂಪಿಯಲ್ಲಿ ಪುನಃ ಆರಂಭಿಸಿ, ಆನೆಗೊಂದಿಯಲ್ಲಿ ಪ್ರತ್ಯೇಕ ಪೊಲೀಸ್ ಠಾಣೆ ನಿರ್ಮಿಸಿ ಉತ್ತಮ ಭದ್ರತಾ ವ್ಯವಸ್ಥೆ ಕಲ್ಪಿಸಬೇಕು ಎಂದು ಸರಕಾರಕ್ಕೆ ಮನವಿ ಮಾಡಿದ್ದಾರೆ.

ಅಳಿವಿನಂಚಿನಲ್ಲಿರುವ ಆಮೆಗಳ ರಕ್ಷಣೆಗೆ ಅರಣ್ಯ ಇಲಾಖೆ ಕ್ರಮ | 2 ತಿಂಗಳಲ್ಲಿ 110 ಮೊಟ್ಟೆಗಳ ರಕ್ಷಣೆ

## ಸಮುದ್ರ ಸೇರಿದ ಆಲಿವ್ ರಿಡ್ಲೆ ಆಮೆ ಮರಿಗಳು

**ಕಾರವಾರ:** ಅಳಿವಿನಂಚಿನಲ್ಲಿರುವ ಆಲಿವ್ ರಿಡ್ಲೆ ಆಮೆಗಳ ಸಂತತಿ ರಕ್ಷಣೆಗೆ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಇಲಾಖೆಯ ಮಹತ್ವದ ಯೋಜನೆ ಕೈಗೊಂಡಿದೆ. ಕಡಲಾಮೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಆಮೆಯ ಮೊಟ್ಟೆಗಳನ್ನು ರಕ್ಷಿಸಿ, ಅವುಗಳಿಂದ ಹೊರಬಂದ ಮರಿಗಳನ್ನು ಕಡಲಿಗೆ ಸುರಕ್ಷಿತವಾಗಿ ಸೇರಿಸುವ ಕೆಲಸ ಮಾಡುತ್ತಿದೆ. ಭಾನುವಾರವೂ ಆಮೆ ಮರಿಗಳನ್ನು ಜನರ ಸಮ್ಮುಖದಲ್ಲಿ ಕಡಲಿಗೆ ಸೇರಿಸಲಾಯಿತು.

**2 ತಿಂಗಳಲ್ಲಿ 110 ಆಮೆ ಮೊಟ್ಟೆಗಳ ರಕ್ಷಣೆ:** ಸಾಮಾನ್ಯವಾಗಿ ಫೆಬ್ರವರಿಯಿಂದ ಏಪ್ರಿಲ್ ಅಂತ್ಯದವರೆಗೆ ಜಿಲ್ಲೆಯ ಕಾರವಾರದ ದೇವಬಾಗ್, ಅಂಕೋಲಾ, ಮಾಜಾಳಿ, ಹೊನ್ನಾವರದ ಕಡಲ ತೀರ ಸೇರಿದಂತೆ ಹಲವೆಡೆ ಆಮೆಗಳು ಮೊಟ್ಟೆ ಇಟ್ಟು ಸಮುದ್ರಕ್ಕೆ ತೆರಳುತ್ತವೆ. ಈ ಮೊಟ್ಟೆಗಳ ರಕ್ಷಣೆಗೆ ಅರಣ್ಯ ಇಲಾಖೆ ಮುಂದಾಗಿದ್ದು, ಕಾರವಾರ ಕಡಲತೀರದಲ್ಲಿ ಕಳೆದ ಎರಡು ತಿಂಗಳಲ್ಲಿ 110 ಆಮೆ ಮೊಟ್ಟೆಗಳ ಗೂಡುಗಳನ್ನು ರಕ್ಷಿಸಲಾಗಿದೆ. ಇವುಗಳ ಪೈಕಿ 9 ಗೂಡುಗಳಿಂದ ಹೊರಬಂದ 1027 ಆಮೆ ಮರಿಗಳನ್ನು ಸಮುದ್ರಕ್ಕೆ ಬಿಡಲಾಗಿದೆ. ಭಾನುವಾರ 123 ಮರಿಗಳು ಸಮುದ್ರ ಸೇರಿವೆ ಎಂದು ಕಾರವಾರ ಎಸಿಎಫ್ ಕೆ.ಡಿ.ನಾಯ್ಕ ತಿಳಿಸಿದರು.

ಕಾರವಾರ ತೀರದಲ್ಲಿ ಆಮೆ ಮರಿಗಳನ್ನು ಕಡಲಿಗೆ ಬಿಟ್ಟು ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದರು.

**ಆಮೆಗಳ ರಕ್ಷಣೆಗೆ ಜನಜಾಗೃತಿ:** ಈ ಬಾರಿ ಹತ್ತು ಸಾವಿರಕ್ಕಿಂತ ಹೆಚ್ಚು ಆಮೆಗಳನ್ನು ಸಂರಕ್ಷಿಸಿ ಸಮುದ್ರಕ್ಕೆ ಬಿಡುವ ಗುರಿ ಹೊಂದಿದ್ದು, ನಿರಂತರವಾಗಿ ಜನರಲ್ಲಿ ಜಾಗೃತಿ ಮತ್ತು ಮೊಟ್ಟೆ ರಕ್ಷಿಸಿ ಅರಣ್ಯ ಇಲಾಖೆಗೆ ನೀಡುವ ಜನರಿಗೆ ಹಣ ನೀಡಲಾಗುತ್ತದೆ. ರಕ್ಷಿಸಿದ ಮೊಟ್ಟೆಗಳು ಮರಿಯಾದಾಗ ಜನರಲ್ಲಿ ಅರಿವು ಮೂಡಿಸಲು ಅವರ ಕೈ ಯಿಂದಲೇ ಆಮೆಗಳನ್ನು ಸಮುದ್ರಕ್ಕೆ ಬಿಡಿಸಲಾಗುತ್ತಿದೆ.

> **ಇದೊಂದು ಹೊಸ ಅನುಭವ. ಪುಟ್ಟ ಮರಿಗಳನ್ನು ಕಡಲಿಗೆ ಬಿಡಲು ಅವಕಾಶ ನೀಡಿದ್ದು ನಮಗೆ ಸಂತಸ ತಂದಿದೆ. ಮಕ್ಕಳಿಗೆ ಪರೀಕ್ಷೆಗಳಿದ್ದರೂ ಕೂಡ ಈ ಅಪರೂಪದ ಕ್ಷಣಕ್ಕಾಗಿ ಇಲ್ಲಿಗೆ ಬಂದಿದ್ದೇವೆ.**
> **- ಪ್ರಿಯಾಂಕಾ,** ಸ್ಥಳೀಯ ವಿದ್ಯಾರ್ಥಿನಿ

ಭಾನುವಾರ ಮಕ್ಕಳು, ಸ್ಥಳೀಯರು ಆಮೆಗಳನ್ನು ತಮ್ಮ ಕೈಯಿಂದ ಸಮುದ್ರಕ್ಕೆ ಬಿಟ್ಟು ಸಂತಸಪಟ್ಟರು. ಆಲಿವ್ ರಿಡ್ಲೆ ಕಡಲಾಮೆಗಳು ಸಂತಾನೋತ್ಪತ್ತಿಗಾಗಿ ನಿರ್ಜನ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಕಡತೀರಕ್ಕೆ ಬಂದು ಮೊಟ್ಟೆಯಿಟ್ಟು ತೆರಳುತ್ತವೆ. ಬಳಿಕ ಅವುಗಳ ಮೊಟ್ಟೆಗಳು ಶುಷ್ಕ ಮರಳಲ್ಲಿ ಅನಾಥವಾಗಿರುತ್ತವೆ.

## ಟ್ವೀಟೂ-ಖಾರಾ

**ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ದೇಶದ ಆರ್ಥಿಕ ಪರಿಸ್ಥಿತಿಯ ಚಿತ್ರಣವನ್ನೇ ಬದಲಿಸಿದ ಮಾಜಿ ಪ್ರಧಾನಿ ಡಾ. ಮನಮೋಹನಸಿಂಗ್ ಅವರ ಹೆಸರನ್ನು ಶಾಶ್ವತವಾಗಿ ಉಳಿಸುವ ಹಾಗೂ ಬೆಂಗಳೂರಿಗೆ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸುವ ನಿಟ್ಟಿನಲ್ಲಿ ಬೆಂಗಳೂರು ವಿ.ವಿ.ಯನ್ನು ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಎಂದು ಮರುನಾಮಕರಣ ಮಾಡಲಾಗುತ್ತಿದೆ.

**ವೆಂಕಟಾಚಲನ್ ಶಾಸ್ತ್ರಿ,** ಬೆಂಗಳೂರು

ಯಾರ ಹೆಸರನ್ನಾದರೂ ಇಡಿ. ಇಂದಿನ ವಿಶ್ವವಿದ್ಯಾಲಯಗಳ ಹೆಸರೇ ಕುಲಗೆಟ್ಟು ಹೋಗಿ, ಭ್ರಷ್ಟಾಚಾರದ ಕೂಪಗಳಾಗಿವೆ. ಇಂತಹ ಮೇಧಾವಿಗಳ ಹೆಸರಿಟ್ಟು ಅವರ ವ್ಯಕ್ತಿತ್ವಕ್ಕೂ ಕಳಂಕ ತರುವ ನಿಮ್ಮ ಮಹತ್ವದ ನಿರ್ಧಾರ ಮೆಚ್ಚಬೇಕಾದದ್ದೇ. ಕುರುಡು ಮೋಹದ ಪ್ರಭಾವ.

ವಿಶ್ವವಾಣಿ ಕ್ಲಬ್ ಹೌಸ್
10.03.2025
ಸಂಜೆ: 06.55 ರಿಂದ 08.05 ರವರೆಗೆ

ಸೋಮವಾರದ ಅತಿಥಿ
ಶ್ರೀಮತಿ ಶ್ರುತಿ, ಶ್ರೀ ಮಹೇಶ್ ಪ್ರಿಯದರ್ಶನ್
ವಿಷಯ
ಗೀತ ಸಂಜೆ
vishwavani.news

## ಸಮಾಚಾರ ಸಣ್ಣದಲ್ಲ

### ರೈಲ್ವೆ ನಿಲ್ದಾಣಕ್ಕೆ ಹುಸಿಬಾಂಬ್ ಕರೆ

**ಮೈಸೂರು:** ಮೈಸೂರು ರೈಲ್ವೆ ನಿಲ್ದಾಣಕ್ಕೆ ಭಾನುವಾರ ಬಂದ ಹುಸಿಬಾಂಬ್ ಬೆದರಿಕೆ ಕರೆಬಂದ ಕೆಲಕಾಲ ಆತಂಕ ಸೃಷ್ಟಿಸಿತ್ತು. ಇದರಿಂದ ಎಚ್ಚೆತ್ತುಕೊಂಡ ಬಾಂಬ್ ನಿಷ್ಕ್ರಿಯದಳ, ಶ್ವಾನದಳ ಹಾಗೂ ರೈಲ್ವೆ ಪೊಲೀಸರು ಮೈಸೂರಿನ ರೈಲು ನಿಲ್ದಾಣದ ಇಂಚಿಂಚು ಸ್ಥಳ ಪರಿಶೀಲನೆ ನಡೆಸಿದರು.ಆಂಧ್ರಪ್ರದೇಶದ ನೆಲ್ಲೂರಿನಿಂದ ಕರೆ ಮಾಡಿರುವ ಅಪರಿಚಿತ ವ್ಯಕ್ತಿಗೆ ವಾಪಸ್ ಕರೆ ಮಾಡಿದಾಗ ಪ್ರಧಾನಿ ನರೇಂದ್ರ ಮೋದಿ, ಆಂಧ್ರ ಸಿಎಂ ಚಂದ್ರಬಾಬುನಾಯ್ಡು ನನಗೆ ಬಾಂಬ್ ಇಡಲು ಹೇಳಿದ್ದಾರೆ ಎಂದಿದ್ದಾನೆ. ಪೊಲೀಸರ ತಪಾಸಣೆ ಬಳಿಕ ಇದೊಂದು ಹುಸಿಬಾಂಬ್ ಬೆದರಿಕೆ ಕರೆ ಎಂಬುದು ದೃಢವಾಗಿದೆ. ಬೆದರಿಕೆ ಕರೆ ಮಾಡಿರುವ ಅನಾಮಧೇಯ ವ್ಯಕ್ತಿಗಾಗಿ ಪೊಲೀಸರಿಂದ ಶೋಧ ಕಾರ್ಯ ನಡೆದಿದೆ.

### ಪ್ರವಾಸಿಗರ ರಕ್ಷಣೆಗೆ ಕ್ರಮ: ತಂಗಡಗಿ

**ಕೊಪ್ಪಳ:** ತುಂಗಭದ್ರಾ ಕಾಲುವೆ ಬಳಿ ಪ್ರವಾಸಿಗರ ಮೇಲೆ ದೌರ್ಜನ್ಯ ನಡೆದ ಪ್ರಕರಣದ ಬಗ್ಗೆ ಈಗಾಗಲೇ

ಮಾಹಿತಿ ಪಡೆದಿದ್ದೇನೆ. ಈ ರೀತಿಯ ಕೃತ್ಯ ಆಗಬಾರದಿತ್ತು. ಈ ಘಟನೆ ನನಗೆ ಬಹಳ ನೋವು ತಂದಿದೆ. ಈವರೆಗೆ ಮೂವರು ಆರೋಪಿ ಗಳನ್ನು ಬಂಧಿಸಲಾಗಿದೆ. ಪ್ರವಾಸಿಗರ ರಕ್ಷಣೆಗೆ ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಶಿವರಾಜ್ ತಂಗಡಗಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷುಲ್ಲಕ ವಿಚಾರಕ್ಕೆ ಈ ರೀತಿಯ ಘಟನೆಯಾಗಿದೆ. ಆರೋಪಿಗ ಳಿಗೆ ಕಠಿಣ ಶಿಕ್ಷೆ ಕೊಡಿಸುವ ಕೆಲಸ ಮಾಡುತ್ತೇವೆ. ನಿರ್ಜನ ಪ್ರದೇಶದಲ್ಲಿ ಪ್ರವಾಸಿಗರು ರಾತ್ರಿ ಸಂಚಾರ ಮಾಡಬಾರದಿತ್ತು. ಅಲ್ಲಿ ಚಿರತೆ, ಕರಡಿ ಸೇರಿ ಕಾಡುಪ್ರಾಣಿಗಳ ಉಪಟಳವಿದೆ. ಈ ಬಗ್ಗೆ ಪೂರ್ಣ ತನಿಖೆ ಮಾಡಿಸಲಾಗುತ್ತಿದೆ ಎಂದರು. ಅಲ್ಲದೆ, ಅನಧಿಕೃತ ರೆಸಾರ್ಟ್ ಗಳ ವಿರುದ್ಧ ಸರಕಾರ ಕಠಿಣ ಕ್ರಮ ಕೈಗೊಳ್ಳಲಿದೆ ಎಂದು ಸಚಿವ ತಂಗಡಗಿ ಹೇಳಿದರು.

### ಸಣಾಪುರ: ಡ್ರಗ್ಸ್ ಮಾಫಿಯಾ ಕೈವಾಡ

**ಹೊಸಪೇಟೆ:** ಗಂಗಾವತಿ ತಾಲೂಕಿನ ಸಣಾಪುರದಲ್ಲಿ ವಿದೇಶಿ ಪ್ರಜೆಯ ಅತ್ಯಾಚಾರದ ಹಿಂದೆ ಡ್ರಗ್ ಮಾಫಿಯಾ ಇದೆ. ಈ ಮಾಫಿಯಾದಲ್ಲಿ ಕೆಲವು

ರಾಜಕಾರಣಿಗಳು ಮತ್ತು ಅಧಿಕಾರಿಗಳ ಶಾಮೀಲಾಗಿದ್ದಾರೆ' ಎಂದು ಮುಖ್ಯಮಂತ್ರಿ ಅವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ರಮ ಡ್ರಗ್ ಮಾಫಿಯಾದಿಂದ ಹಂಪಿ ಸುತ್ತಮುತ್ತಲಿನ ಪ್ರವಾಸಿ ತಾಣಗಳ ಹೆಸರಿಗೆ ಕಳಂಕ ಬರುತ್ತಿದೆ. ಈ ಭಾಗದ ಅಕ್ರಮ ಹೋಂಸ್ಟೇಗಳನ್ನು ಬಂದ್ ಮಾಡಿಸಬೇಕಿದೆ ಎಂದರು. ಹಂಪಿ ಮತ್ತು ಸುತ್ತಮುತ್ತಲ ಪ್ರವಾಸಿ ತಾಣಗಳಿಗೆ ಪ್ರತಿಷ್ಠಿತ ವಿದೇಶಿಯರು ಪ್ರವಾಸ ಬರುವುದು ಕಡಿಮೆ. ಹೀಗೆ ಬರುವ ಕೆಲವು ಕಡಿಮೆ ಆದಾಯದ ವಿದೇಶಿ ಪ್ರಜೆಗಳು ಡ್ರಗ್ ಮಾಫಿಯಾವನ್ನು ದಂಧೆಯಾಗಿ ಮಾಡಿಕೊಂಡಿ ದ್ದಾರೆ. ಈ ಹಿಂದಿನಿಂದಲೂ ಈ ಜಾಲ ಕೆಲಸ ಮಾಡುತ್ತಿದೆ. ನಾನು ಈ ಹಿಂದೆ ವಿಧಾನಸೌಧದಲ್ಲೇ ಪ್ರಸ್ತಾಪ ಮಾಡಿದಾಗ ನನ್ನ ವಿರುದ್ಧವೇ ಕೆಲವರು ಮಾತನಾಡಿದರು. ತಕ್ಷಣ ಹೋಂಸ್ಟೇ ಅಕ್ರಮಗಳಿಗೆ ಕಡಿವಾಣ ಹಾಕಬೇಕಿದೆ ಎಂದು ಹೇಳಿದರು.

---

ಎಸ್.ಎಲ್.ಭೈರಪ್ಪ ಅಭಿನಂದನಾ ಸಮಾರಂಭದಲ್ಲಿ ಸಂಸದ ಬೊಮ್ಮಾಯಿ ಮಾತು | ಹುಟ್ಟೂರು ಸಂತೇಶಿವರದಲ್ಲಿ ಹಿರಿಯ ಸಾಹಿತಿಗೆ ಗಣ್ಯರ ಸಮ್ಮುಖದಲ್ಲಿ ಸಮ್ಮಾನ

# ರಾಜ್ಯದ ಜನತೆಗೆ ನೀರು, ಸೂರು ಕೊಡಿ

ವಿಶ್ವವಾಣಿ ಸುದ್ದಿಮನೆ ಹಾಸನ

ಜನರಿಗೆ ಕುಡಿಯುವ ನೀರು, ಭೂಮಿಗೆ ನೀರು, ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಸೂರು, ಒಳ್ಳೆಯ ಗಾಳಿ, ದುಡಿಮೆಗೆ ಒಳ್ಳೆಯ ಬೆಲೆ, ಬದುಕಿನಲ್ಲಿ ಸಾಧನೆ ಮಾಡಲು ಅವಕಾಶ ಮಾಡಿಕೊಳ್ಳದಿದ್ದರೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಕಳೆದುಕೊಳ್ಳುತ್ತಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಸಂತೇಶಿವರ ಗ್ರಾಮದಲ್ಲಿ ಹಿರಿಯ ಸಾಹಿತಿ ಎಸ್.ಎಲ್ .ಭೈರಪ್ಪ ಅವರಿಗೆ ಹುಟ್ಟೂರಿನಲ್ಲಿ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿ, ಬದುಕಿನ ಸಾಕ್ಷಾತ್ಕಾರಕ್ಕೆ ಎರಡು ವಿಷಯ ಬಹಳ ಮುಖ್ಯ. ಒಂದು ಜ್ಞಾನ, ಇನ್ನೊಂದು ಧ್ಯಾನ. ಇವೆರ ಡನ್ನೂ ಭೈರಪ್ಪ ಒಲಿಸಿಕೊಂಡಿದ್ದಾರೆ. ದೊಡ್ಡವರಾದ ಮೇಲೆ ಆಕಾರ ವಿಕಾರ ಆಗಿರುತ್ತದೆ. ಆದರೆ ಭೈರಪ್ಪರ ಮುಗ್ಧತೆ ಈಗಲೂ ಇದೆ. ಅವರದು ಮಗುವಿನ ಮುಗ್ಧತೆ ಎಂದರು.

ಭೈರಪ್ಪ ಅವರು ಬರಹದಿಂದ ಬದುಕನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡನಾಡು ಬಹಳ ಶ್ರೀಮಂತ ಅಂತ ನಾವು ಕರೆಯುತ್ತೇವೆ. ಆರ್ಥಿಕವಾಗಿ ಶ್ರೀಮಂತರಿದ್ದರೆ ಅವರು ಶ್ರೀಮಂತರಲ್ಲ. ಶ್ರೀಮಂತಿಕೆ ವ್ಯಕ್ತಿಯ ಸಿರಿತನದಿಂದ ಬರುವುದಿಲ್ಲ. ನಮ್ಮ ಸಂಸ್ಕೃತಿ, ಪರಂಪರೆ, ನಾಡಿನ ಸಾತ್ವಿಕತೆ, ಕನ್ನಡಿಗರಂತಹ ಹೃದಯವಂತ ಜನರು ಜಗತ್ತಿನಲ್ಲಿ ಎಲ್ಲಿಯೂ ಸಿಗುವುದಿಲ್ಲ. ಕನ್ನಡನಾಡು ಶ್ರೀಮಂತವಾಗಿರುವುದು ನಮ್ಮನ್ನು ಆಳಿದ ಮೈಸೂರು ಮಹಾರಾಜರು, ಹೊಯ್ಸಳರು, ಕದಂಬರಿಂದ. ಅದನ್ನು ಉಳಿಸಿದವರು ಸಾಹಿತಿಗಳು, ಕಲಾವಿದರು, ಶಿಲ್ಪಿಗಳು. ಫಲವತ್ತಾದ ಮಣ್ಣು, ಅಮೃತದಂತಹ ನೀರು, ಶುದ್ಧ ಗಾಳಿ ಕನ್ನಡನಾಡನ್ನು ಶ್ರೀಮಂತವಾಗಿರಿಸಿದೆ ಎಂದು ಬೊಮ್ಮಾಯಿ ಬಣ್ಣಿಸಿದರು.

**ನನ್ನೂರ ಕೆರೆ ತುಂಬಿಸಿ ಎಂದರು:** ಭೈರಪ್ಪನವರ ಪರ್ವ ಕಾದಂಬರಿಯನ್ನು ಕಾಲೇಜಿನಲ್ಲಿ ಇದ್ದಾಗ ಓದಿದೆ. ಆ ಕೃತಿಯಿಂದ ಪ್ರಭಾವಿತನಾಗಿದ್ದೇನೆ. ಪರ್ವ ಕಾದಂಬರಿ ಸಾರ್ವಕಾಲಿಕ ಕೃತಿ ಎಂದು ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು. ನಾನು ಮುಖ್ಯಮಂತ್ರಿಯಾಗಿದ್ದಾಗ ವಿಶ್ವೇಶ್ವರ ಭಟ್ಟರು ಭೈರಪ್ಪನವರನ್ನು ಕರೆದುಕೊಂಡು ಬಂದರು. ಆಗ ಭೈರಪ್ಪನವರು, 'ನಮ್ಮೂರಿನ ಕೆರೆ ತುಂಬಿಸಿ' ಎಂದಾಗ ಮನಸ್ಸಿಗೆ ನೋವಾಯಿತು. ಈ ಕೆಲಸವನ್ನು ಮಾಡಲೇಬೇಕು ಎಂದು ನಿಶ್ಚಯಿಸಿ ಮನಃಪೂರ್ವಕವಾಗಿ ಮಾಡಿದೆ. ಸಾಹಿತಿಗಳು ರಾಜಕಾರಣಿಗಳನ್ನು ಭೇಟಿಮಾಡಿ ಬಿಡಿಎ ಸೈಟ್ ಕೇಳುತ್ತಾರೆ. ಆದರೆ ಭೈರಪ್ಪ ಅವರು 'ನನ್ನೂರಿಗೆ ನೀರು ಕೊಡಿ ಸ್ವಾಮಿ' ಎಂದು ಕೇಳಿದರೆಂದು ಬೊಮ್ಮಾಯಿ ಅವರು ಮಾರ್ಮಿಕವಾಗಿ ನುಡಿದರು.

**ಭೈರಪ್ಪನವರಿಗೆ ಅದ್ದೂರಿ ಮೆರವಣಿಗೆ :** ಸಮಾರಂಭದ ಅಂಗವಾಗಿ ಬೆಳಗ್ಗೆ ಚಿಕ್ಕೋನಹಳ್ಳಿ ಗೇಟ್ ಬಳಿಯಿಂದ ಸಂತೇಶಿವರ ಗ್ರಾಮದವರೆಗೆ ಬೆಳ್ಳಿ ಸಾರೋಟಿನಲ್ಲಿ ಅದ್ದೂರಿ ಮೆರವಣಿಗೆ ನಡೆಸಲಾಯಿತು. ಅದಕ್ಕೂ ಮೊದಲು ಪೂರ್ಣಕುಂಭ ಮೆರವಣಿಗೆಯಲ್ಲಿ ಗ್ರಾಮದ ಮಹಿಳೆಯರು ಊರಿನ ಕೆರೆಯಿಂದ ಗಂಗೆಯನ್ನು ಹೊತ್ತು ತಂದರು. ಭೈರಪ್ಪ ವಿರಚಿತ 27 ಕಾದಂಬರಿಗಳ ಸ್ತಬ್ಧಚಿತ್ರಗಳ ಮೆರವಣಿಗೆ ನಡೆಯಿತು. ಭೈರಪ್ಪನವರ ಅಭಿನಂದನಾ ಸಮಾರಂಭ ಅಂಗವಾಗಿ ಸಂತೇಶಿವರ ಗ್ರಾಮ ಮದುವಣಗಿತ್ತಿಯಂತೆ ಸಿಂಗಾರಗೊಂಡಿತ್ತು. ಕಾರ್ಯಕ್ರಮದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ , ತಿಪಟೂರು ಶಾಸಕ ಷಡಕ್ಷರಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಗೀತಾ ಸೋಮಶೇಖರ್, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್ ಸೇರಿ ಹಲವರಿದ್ದರು.

**ನನ್ನ ಸಾಧನೆಗೆ ತಾಯಿಯೇ ಸ್ಫೂರ್ತಿ: ಭೈರಪ್ಪ:** ಕಾರ್ಯಕ್ರಮದಲ್ಲಿ ಮಾತನಾಡಿದ ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ, ನನಗೆ ನನ್ನ ತಾಯಿಯೇ ಸರ್ವಸ್ವ. ನನ್ನೂರು ನನಗೆ ಸ್ವರ್ಗವಿದ್ದಂತೆ. ನನಗೆ ಬರವಣಿಗೆ ಹುಟ್ಟಿನಿಂದಲೇ ಬಂದದ್ದು. ಇದಕ್ಕೆ ತಾಯಿಯೇ ಸ್ಫೂರ್ತಿ. ಬಾಲ್ಯದಲ್ಲಿ ತುಂಟನಾಗಿದ್ದ ನಾನು ಒಮ್ಮೆ ಪಕ್ಕದ ಹಿರೀಸಾವೆಗೆ ನಾಟಕ ನೋಡಲು ಹೋಗಿ ಮನೆಗೆ ಬರುವುದು ತಡವಾದಾಗ ನನ್ನ ತಾಯಿ ಊರಿನ ಕೆರೆಗಳಲ್ಲಿ ನನ್ನನ್ನು ಹುಡುಕಿಸಿದ್ದರು ಎಂದು ಬಾಲ್ಯದ ದಿನಗಳ ಮೆಲುಕುಹಾಕಿದರು. ತಾಯಿ ನನಗೆ ದೇವರ ಸಮಾನ ಎಂದರು.

ನಾನು ಬರೆಯುವ ಕಥೆ, ಕಾದಂಬರಿ ಹಾಗೂ ಎಲ್ಲವನ್ನೂ ತಾಯಿ ಒಪ್ಪಿಕೊಂಡು ಕೊಂಡಾಡುತ್ತಿದ್ದಳು. ಆಕೆ ಪ್ರೋತ್ಸಾಹ ನೀಡುತಿದ್ದರಿಂದ ನಾನು ಉತ್ಸುಕನಾಗಿ ಬರೆಯುವುದನ್ನು ಮುಂದುವರಿಸಿದೆ. ಅದರ ಫಲವಾಗಿ ಇಂದು ಹುಟ್ಟೂರಿನಲ್ಲಿ ಪುರಸ್ಕಾರ ಸಿಕ್ಕಿದ್ದು ಇದನ್ನು ನನ್ನ ತಾಯಿಗೆ ಅರ್ಪಿಸುತ್ತೇನೆ ಎಂದು ತಾಯಿಯನ್ನು ನೆನೆದರು.

ನಾನು ಮದುವೆಯಾದ ದಿನದಿಂದ ಇದೂವರೆಗೂ ಸಾಕಷ್ಟು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೇನೆ. ಆದರೆ ಯಾವ ಕಾರ್ಯಕ್ರಮದಲ್ಲಿಯೂ ನನ್ನ ಪತ್ನಿ ಭಾಗಿಯಾಗಿರಲಿಲ್ಲ. ಇದೇ ಮೊದಲ ಬಾರಿಗೆ ಅದೂ ನನ್ನ ಹುಟ್ಟೂರಿನಲ್ಲಿ ನಡೆಯುತ್ತಿರುವ ಕಾರ್ಯಕ್ರ ಮದಲ್ಲಿ ಆಕೆಯೂ ಭಾಗವಹಿಸಿದ್ದಾಳೆ ಎಂದು ಭೈರಪ್ಪನವರು ಭಾವುಕರಾಗಿ ನುಡಿದರು.

**ದೇಗುಲ ಜೀರ್ಣೋದ್ಧಾರಕ್ಕೆ ದೇಣಿಗೆ ನೀಡಿ:** ದೇವಸ್ಥಾನವಿರುವ ಊರು ಸ್ವರ್ಗದಂತೆ ಇರಲಿದೆ. ಗ್ರಾಮದ ದೇಗುಲ ಜೀರ್ಣೋದ್ಧಾರಕ್ಕೆ ಸಹಕಾರ ಮಾಡಿದ್ದೇನೆ. ಯಾವುದೇ ಗ್ರಾಮವಾಗಲಿ ದೇಗುಲ ನಿರ್ಮಾಣ ಇಲ್ಲವೇ ಜೀರ್ಣೋದ್ಧಾರ ಕಾರ್ಯಕ್ಕೆ ಎಲ್ಲರೂ ಕೈಲಾದಷ್ಟು ದೇಣಿಗೆ ನೀಡಬೇಕು. ಊರಿನ ಗಂಗಾಧರೇಶ್ವರ ದೇವಾಲಯ 800 ವರ್ಷಗಳಷ್ಟು ಹಳೆಯದಾಗಿದ್ದು ಅದರ ಜೀರ್ಣೋದ್ಧಾರಕ್ಕೆ ಒಂದು ಲಕ್ಷ ರು. ನೀಡಿದ್ದೇನೆ. ನೀವೆಲ್ಲರೂ ಹೆಚ್ಚು ನೆರವು ನೀಡಿ ಈ ಕಾರ್ಯ ಶೀಘ್ರ ಪೂರ್ಣಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಹುಟ್ಟೂರು ಸಂತೇಶಿವಾರದಲ್ಲಿ ಹೆಸರಾಂತ ಸಾಹಿತಿ ಡಾ.ಎಸ್.ಎಲ್. ಭೈರಪ್ಪ ಹಾಗೂ ಸರಸ್ವತಿ ದಂಪತಿಯನ್ನು ಭಾನುವಾರ ಅಭಿನಂದಿಸಲಾಯಿತು. ಮಾಜಿ ಸಿಎಂ ಮತ್ತು ಸಂಸದ ಬಸವರಾಜ ಬೊಮ್ಮಾಯಿ, ಸಂಸದ ಯದುವೀರ್ ಒಡೆಯರ್, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಹಾಗೂ ಇತರರಿದ್ದರು.

ಕಾರ್ಯಕ್ರಮದ ವೇಳೆ ಭೈರಪ್ಪ ಅವರೊಂದಿಗೆ ವಿಶ್ವೇಶ್ವರ ಭಟ್ ಉಭಯ ಕುಶಲೋಪರಿ ನಡೆಸಿದರು. ಭೈರಪ್ಪನವರ ಪತ್ನಿ ಶ್ರೀಮತಿ ಸರಸ್ವತಿ ಇದ್ದರು.

> ಭೈರಪ್ಪನವರು ತಮ್ಮ ಬೇರನ್ನು ಎಂದೂ ಮರೆತಿಲ್ಲ. ತಮ್ಮ ಊರಿನ ಜನರು, ತಂದೆ-ತಾಯಿಯನ್ನು ಮರೆತಿಲ್ಲ. ಊರಿನ ಕೆರೆಯನ್ನೂ ಮರೆತಿಲ್ಲ ಎನ್ನುವುದಕ್ಕೆ ಇದೇ ಸಾಕ್ಷಿ. ಕನ್ನಡನಾಡಿನ ಪ್ರತಿಯೊಂದು ಗ್ರಾಮದಲ್ಲಿ ಭೈರಪ್ಪನಂಥವರು ಹುಟ್ಟಿದ್ದಿದ್ದರೆ, ನಾಡು ಇನ್ನಷ್ಟು ಆಗರ್ಭ ಶ್ರೀಮಂತವಾಗುತ್ತಿತ್ತು.
>
> **- ಬಸವರಾಜ ಬೊಮ್ಮಾಯಿ,** ಮಾಜಿ ಮುಖ್ಯಮಂತ್ರಿ, ಸಂಸದ

> ಸಾಹಿತ್ಯ ಹಾಗೂ ಬರವಣಿಗೆಗೆ ಎಂದಿಗೂ ಕೊನೆಯಿಲ್ಲ. ನಾನು ಉತ್ತರದಿಂದ ದಕ್ಷಿಣ ಧ್ರುವದವರೆಗೂ ಓದಿದ್ದೇನೆ. ಸಾಕಷ್ಟು ದೇಶಗಳನ್ನು ಸುತ್ತಿದ್ದೇನೆ. ಎಲ್ಲ ಭಾಷೆಗಳಲ್ಲಿಯೂ ಸಾಹಿತ್ಯವಿದೆ. ಆದರೆ ನಮ್ಮ ಕನ್ನಡ ಭಾಷೆಯಷ್ಟು ಸುಂದರ ಹಾಗೂ ಸುಲಲಿತ ಭಾಷೆ ಮತ್ತೊಂದಿಲ್ಲ.
>
> **-ಎಸ್.ಎಲ್. ಭೈರಪ್ಪ,** ಸರಸ್ವತಿ ಸಮ್ಮಾನ್ ಪುರಸ್ಕೃತ ಸಾಹಿತಿ.

### ಸನ್ಮಾನಕ್ಕಿಂತ, ಊರಿಗೆ ನೀರು ಬೇಕೆಂದವರು ಭೈರಪ್ಪ

ಕಾರ್ಯಕ್ರಮದಲ್ಲಿ ಮಾತನಾಡಿದ 'ವಿಶ್ವವಾಣಿ' ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು, ಭೈರಪ್ಪ ಅವರಿಗೆ ತಮ್ಮ ಹುಟ್ಟೂರಿನ ಬಗ್ಗೆ ಅಪಾರ ಕಾಳಜಿಯಿದೆ. ಸಂತೇಶಿವರ ಮೇಲೆ ಭೈರಪ್ಪ ಅವರಿಗೆ ಇರುವ ಕಾಳಜಿ ಬಗ್ಗೆ ಹೇಳುವುದಕ್ಕೆ ಸಾಕಷ್ಟು ವಿಷಯಗಳಿವೆ. ವಿಶ್ವವಿಖ್ಯಾತ ಮೈಸೂರು ದಸರಾದ ಉದ್ಘಾಟನೆ ಮಾಡುವ ಅವಕಾಶ ಹಾಗೂ ಸನ್ಮಾನವನ್ನು ಲೆಕ್ಕಿಸದೆ ಮೊದಲು ನನ್ನೂರಿನ ಕೆರೆಗೆ ನೀರು ಬೇಕು ಎಂದು ಕೇಳಿದ ಮಹಾನ್ ವ್ಯಕ್ತಿ ಎಂದು ಅಭಿಪ್ರಾಯಪಟ್ಟರು. ಭೈರಪ್ಪ ಅವರು ಜಿಲ್ಲೆ, ರಾಜ್ಯ ಹಾಗೂ ದೇಶಕಕ್ಷ್ಟೇ ಅಲ್ಲದೆ ವಿಶ್ವ ವ್ಯಾಪಿ ಗುರುತಿಸಿಕೊಂಡಿರುವ ಹಿರಿಯ ಸಾಹಿತಿ. ಇವರ ಕಾದಂಬರಿಗಳನ್ನು ಓದುತ್ತಿದ್ದರೆ ಕಣ್ಣ ಮುಂದೆಯೇ ದೃಶ್ಯ ಹಾಗೂ ಚಿತ್ರಣಗಳು ಮೂಡಿಬಂದಂತೆ ಭಾಸವಾಗುತ್ತದೆ. ಕೆಲ ವರ್ಷಗಳ ಹಿಂದೆ ಜರ್ಮನಿಯಲ್ಲಿ ನಡೆದ ಪುಸ್ತಕ ಮೇಳದಲ್ಲಿ ಎಸ್.ಎಲ್.ಭೈರಪ್ಪ ಅವರ ಕಾದಂಬರಿಯನ್ನು ನೋಡಿದ್ದೆ. ಅವರ ಕಾದಂಬರಿ ಭಾರತ ದೇಶವನ್ನು ಪ್ರತಿನಿಧಿಸಿತ್ತು. ಇವರ ಹೆಸರು ವಿಶ್ವ ಸಾಹಿತ್ಯ ನಕಾಶೆಯಲ್ಲಿದೆ. ಭೈರಪ್ಪ ಅವರು ರಚಿಸಿರುವ ಬಹುತೇಕ ಕೃತಿಗಳು 30ಕ್ಕೂ ಹೆಚ್ಚು ಭಾಷೆಗಳಲ್ಲಿ ಅನುವಾದಗೊಂಡಿರುವುದು ಹೆಮ್ಮೆಯ ಸಂಗತಿ ಎಂದು ಶ್ಲಾಘಿಸಿದರು.

---

ಮಸ್ಕತ್‌ನಲ್ಲಿ ನಡೆದ 8ನೇ ಭಾರತೀಯ ಓಷನ್ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿದ್ದ ಕೇಂದ್ರದ ಮಾಜಿ ಸಚಿವ ಹಾಗೂ ಹಿರಿಯ ಪತ್ರಕರ್ತ ಎಂ.ಜೆ ಅಕ್ಬರ್ ಅವರಿಗೆ ಅಂತಾರಾಷ್ಟ್ರೀಯ ಯೋಗ ತರಬೇತುದಾರೆ ಕವಿತಾ ರಾಮಕೃಷ್ಣ ಅವರು 24 ಕ್ಯಾರಟ್ ಚಿನ್ನದಿಂದ ರಚಿತವಾದ ಒಮಾನ್ ಆಭರಣವನ್ನು ಉಡುಗೊರೆಯಾಗಿ ನೀಡಿ ಗೌರವಿಸಿದರು.

ಕೊಪ್ಪಳದಲ್ಲಿ ಅಗರಬತ್ತಿಯಿಂದ ಕೂಸನ್ನು ಸುಟ್ಟ ತಾಯಿ

## ಮೂಢನಂಬಿಕೆಗೆ ಮಗು ಬಲಿ

**ಕೊಪ್ಪಳ:** ಅನಾರೋಗ್ಯಪೀಡಿತ ಮಗುವಿಗೆ ಅಗರಬತ್ತಿಯಿಂದ ಸುಟ್ಟರೆ, ಕಾಯಿಲೆ ವಾಸಿಯಾಗುತ್ತದೆ ಎಂಬ ನಂಬಿಕೆಯಿಂದ ತಾಯಿಯೊಬ್ಬಳು ಮಾಡಿದ ಎಡವಟ್ಟಿನಿಂದ ಮಗು ಸಾವನ್ನಪ್ಪಿದ ಘಟನೆ ಕೊಪ್ಪಳ ಜಿಲ್ಲೆಯ ಹಳ್ಳಿಯೊಂದರಲ್ಲಿ ನಡೆದಿದೆ.

2024ರ ನವೆಂಬರ್‌ನಲ್ಲಿ ಏಳು ತಿಂಗಳ ಮಗುವಿಗೆ ಅನಾರೋಗ್ಯ ಕಾಡಿತ್ತು. ಬೇರೆ ಬೇರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಆದರೆ ಈವರೆಗೆ ಕಾಯಿಲೆ ವಾಸಿಯಾಗಿರಲಿಲ್ಲ. ಹೀಗಾಗಿ ಮಗುವಿನ ಕೈಗೆ ಅಗರಬತ್ತಿಯ ಬೆಂಕಿಯಿಂದ ಬಿಸಿ ಇಟ್ಟರೆ ವಾಸಿಯಾಗುತ್ತದೆ ಎಂದು ಯಾರೋ ಹೇಳಿದ್ದ ಮಾತನ್ನು ನಂಬಿದ ತಾಯಿ, ಅದನ್ನು ಪ್ರಯೋಗ ಮಾಡಿದ್ದಾರೆ. ಇದರ ಪರಿಣಾಮ ಮಗುವಿಗೆ ಸುಟ್ಟಗಾಯಗಳಿಂದ ನಂಜಾಗಿ ಸಾವನ್ನಪ್ಪಿದೆ.

**ವೈದ್ಯರಿಗೆ ಸಂಶಯ:** ಈ ನಡುವೆ ಮಗುವಿಗೆ ಚಿಕಿತ್ಸೆ ನೀಡಿದ ವೈದ್ಯರಿಗೆ ಮಗುವಿನ ದೇಹದ ಮೇಲೆ ಸುಟ್ಟ ಗಾಯಗಳು ಕಂಡುಬಂದಿದ್ದು, ಮಕ್ಕಳ ರಕ್ಷಣಾ ಘಟಕದವರಿಗೆ ಮಾಹಿತಿ ನೀಡಿದ್ದಾರೆ. ಜಿಲ್ಲಾಮಟ್ಟದ ಶಿಶುಮರಣ ಪರಿಶೀಲನಾ ಸಭೆ ವೇಳೆ ಈ ವಿಷಯ ಗಮನಕ್ಕೆ ಬಂದಿದೆ. ಊದಿನಕಡ್ಡಿಯಿಂದ ಸುಟ್ಟಿದ್ದಕ್ಕೆ ನಂಜಾಗಿ ಮಗು ಮೃತಪಟ್ಟಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ಬಳಿಕ ಮಗುವಿನ ಸಾವಿಗೆ ಕಾರಣವಾದ ತಾಯಿಯ ವಿರುದ್ಧವೇ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ದೂರು ನೀಡಿದ್ದು, ಪೊಲೀಸರು ಈ ಕುರಿತು ಎಫ್ .ಐ.ಆರ್. ದಾಖಲಿಸಿದ್ದಾರೆ.

ಕೊಪ್ಪಳದಲ್ಲಿ ಕೆಯುಡಬ್ಲ್ಯುಜೆ ಆಯೋಜಿಸಿದ್ದ ದತ್ತಿನಿಧಿ ಪ್ರಶಸ್ತಿ ಸಮಾರಂಭದಲ್ಲಿ ಸಾಧಕ ಪತ್ರಕರ್ತರಿಗೆ ಭಾನುವಾರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು, ಪ್ರೊ.ಬಿ.ಕೆ.ರವಿ, ಜಿ.ಎನ್.ಮೋಹನ್ ಮೊದಲಾದವರಿದ್ದರು.

---

ಮಾಜಿ ಸಿಎಂ ವಿರುದ್ಧ ಶಾಸಕ ಬಿ.ಪಿ.ಹರೀಶ್ ಆರೋಪ

## ಬಿಎಸ್‌ವೈ ಬೆದರಿಕೆ ರಾಜಕಾರಣ

**ದಾವಣಗೆರೆ:** ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರಾಷ್ಟ್ರೀಯ ನಾಯಕರಿಗೆ ಬ್ಲ್ಯಾಕ್‌ಮೇಲ್ ರಾಜಕಾರಣ ಮಾಡಿಕೊಂಡೇ ಅಧಿಕಾರ ನಡೆಸಿಕೊಂಡು ಬಂದಿದ್ದಾರೆ ಎಂದು ಹರಿಹರ ಶಾಸಕ ಬಿ.ಪಿ.ಹರೀಶ್ ಹೇಳಿದರು.

ಲಿಂಗಾಯತರ ಸಮಾವೇಶ ನಡೆಸುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಬಣ ಹೇಳಿದೆ. ಪರ್ಯಾಯವಾಗಿ ನೀವು ಮಾಡ್ತೀರ ಎಂಬ ಪ್ರಶ್ನೆಗೆ, ರಾಷ್ಟ್ರೀಯ ನಾಯಕರು ನಮ್ಮ ಜತೆ ಇಲ್ಲ ಎಂಬ ಭಾವನೆ ಅವರಿಗಿದೆ. ಹೀಗಾಗಿ ಈ ಆಟ ಶುರು ಮಾಡಿ ದ್ದಾರೆ ಎಂದು ಭಾನುವಾರ ನಡೆಸಿದ ಸುದ್ದಿ ಗೋಷ್ಠಿಯಲ್ಲಿ ಈ ರೀತಿ ಪ್ರತಿಕ್ರಿಯಿಸಿದರು.

> ಪಕ್ಷ ದ್ರೋಹ ಮಾಡಿದವರು, ಮ್ಯಾಚ್ ಫಿಕ್ಸಿಂಗ್ ಮಾಡಿದವರು, ಭ್ರಷ್ಟಾಚಾರಿಗಳನ್ನು ತೊಲಗಿಸಲು ರಾಜ್ಯದ ಜನತೆ ಬಯಸಿದ್ದಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯಕ್ಕೆ ಒಳ್ಳೆಯ ಭವಿಷ್ಯವಿದೆ. ಒಳ್ಳೆಯ ನಾಯಕರು ಬೇಕೆಂದು ಜನರು ಬಯಸಿದ್ದಾರೆ. ಅದೇ ರೀತಿ ರಾಷ್ಟ್ರೀಯ ನಾಯಕರು ನಡೆದುಕೊಳ್ಳುವ ವಿಶ್ವಾಸ ನಮಗಿದೆ.
>
> **-ಬಿ.ಪಿ.ಹರೀಶ್,** ಶಾಸಕ

ಯಾವೊತ್ತು ಕೂಡ ಬಿ.ಎಸ್ .ಯಡಿಯೂರಪ್ಪ ರಾಷ್ಟ್ರೀಯ ನಾಯಕರಿಗೆ ಬ್ಲ್ಯಾಕ್‌ಮೇಲ್ ಮಾಡಿಕೊಂಡೇ ಬಂದಿದ್ದಾರೆ. ಭ್ರಷ್ಟಾಚಾರದಲ್ಲಿ ಸಿಎಂ ಸ್ಥಾನದಿಂದ ಇಳಿಯುವಾಗ ಇದೇ ರೀತಿ ಮಠ-ಮಾನ್ಯಗಳ ಜನರನ್ನು ಸೇರಿಸೋದು, ಎಲ್ಲರನ್ನು ಸೇರಿಸೋದು ಇವರ ಹಳೆಯ ಆಟ. ಮತ್ತೆ ಈಗ ಅದೇ ಹಳೆಯ ಆಟ ಮುಂದುವರಿಸಿರುವುದನ್ನು ನೋಡಿದರೆ, ಅವರಿಗೆ ರಾಷ್ಟ್ರೀಯ ನಾಯಕರು ಮುಂದುವರಿಸಲು ಇಷ್ಟವಿಲ್ಲ ಎಂಬ ಅನುಮಾನಕ್ಕೆ ಸಮಾವೇಶ ಮಾಡಬಹುದು. ನಮಗೆ ಆ ಭಯ ಇಲ್ಲ, ನಾವು ಪ್ರಾಮಾಣಿಕವಾಗಿ ಇದ್ದೇವೆ ಎಂದರು.

---

ಅರಣ್ಯ, ಪರಿಸರ ಸಚಿವ ಈಶ್ವರ್ ಖಂಡ್ರೆ ಸೂಚನೆ

## ನದಿ ಭಾಗದಲ್ಲಿ ಸೋಪು ಮಾರಲು ನಿರ್ಬಂಧ

ಬೆಂಗಳೂರು: ಪುಣ್ಯ ಕ್ಷೇತ್ರಗಳ ನದಿ, ಸರೋವರ, ಕಲ್ಯಾಣಿಯ ದಂಡೆ, ಸ್ನಾನಘಟ್ಟಗಳ 500 ಮೀಟರ್ ವ್ಯಾಪ್ತಿಯಲ್ಲಿ ಸೋಪು,

ಶ್ಯಾಂಪೂ ಮಾರಾಟ ಮಾಡದಂತೆ ನಿಷೇಧಿಸಲು ಕ್ರಮ ಕೈಗೊಳ್ಳಬೇಕು ಎಂದು ಅರಣ್ಯ, ಪರಿಸರ ಸಚಿವ ಈಶ್ವರ್ ಖಂಡ್ರೆ, ಸೂಚನೆ ನೀಡಿದ್ದಾರೆ.

ಈ ಸಂಬಂಧ ಭಾನುವಾರ ಅಪರ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿರುವ ಅವರು, ಸ್ನಾನಘಟ್ಟಗಳಲ್ಲಿ ಭಕ್ತರು ಶ್ಯಾಂಪೂ, ಸೋಪು ಬಳಸಿ ಸ್ನಾನ ಮಾಡಿ ಉಳಿದ ತುಂಡು ಮತ್ತು ಶ್ಯಾಂಪೂ ಪ್ಯಾಕೆಟ್ ಬಿಟ್ಟು ಹೋಗುತ್ತಿರುವುದರಿಂದ ನದಿಗೆ ಸೇರಿ ನೊರೆ ಉಕ್ಕುತ್ತಿದೆ. ನೀರು ಕಲುಷಿತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ನದಿ, ಕೊಳ, ಸರೋವರದ 500 ಮೀಟರ್ ವ್ಯಾಪ್ತಿಯಲ್ಲಿ ಸೋಪು, ಶ್ಯಾಂಪೂ ಮಾರಾಟ ಮಾಡದಂತೆ ನಿಷೇಧಿಸಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ.

ಅದೇ ರೀತಿ ನದಿ, ಸರೋವರ, ಕೊಳ, ಕಲ್ಯಾಣಿಗಳಲ್ಲಿ ಭಕ್ತರು ತಾವು ಉಟ್ಟ ಬಟ್ಟೆಯನ್ನು ವಿಸರ್ಜಿಸದಂತೆ ನಿರ್ಬಂಧಿಸಲು ಕ್ರಮ ಕೈಗೊಳ್ಳಬೇಕು. ಕಡಿಮೆ ಮೊತ್ತದ ಶ್ಯಾಂಪೂ ಪೊಟ್ಟಣ, ಸಣ್ಣ ಸೋಪುಗಳು ನದಿ, ಸರೋವರ, ಕಲ್ಯಾಣಗಳ ಬಳಿಯೇ ಇರುವ ಅಂಗಡಿಗಳಲ್ಲಿ ಲಭಿಸುತ್ತಿದ್ದು, ಸುಲಭವಾಗಿ ಖರೀದಿಸುವ ಜನರು ಅದನ್ನು ಬಳಸಿ ಉಳಿದ ಸೋಪು, ಶ್ಯಾಂಪೂ ಸ್ಯಾಚೆಟ್‌ಗಳನ್ನು ನೀರಿನಲ್ಲಿ ಅಥವಾ ದಂಡೆಯಲ್ಲಿ ಎಸೆದು ಹೋಗುತ್ತಿದ್ದು, ಇದು ನೀರಲ್ಲಿ ಬೆರೆತು ಜಲಚರಗಳು ಸಾವನ್ನಪ್ಪುತ್ತಿದ್ದರೆ. ಈ ನೀರು ಕುಡಿಯುವ ಜನ, ಜಾನುವಾರುಗಳು ಕಾಯಿಲೆಯಿಂದ ಬಳಸುವಂತಾಗಿದೆ. ಈ ನಿಟ್ಟಿನಲ್ಲಿ ನದಿಗಳ ಸಮೀಪ ಶ್ಯಾಂಪೂ, ಸೋಪು ಲಭ್ಯವಾಗದಂತೆ ತಡೆಯುವುದು ಅನಿವಾರ್ಯವಾಗಿದೆ ಎಂದು ಹೇಳಿದ್ದಾರೆ.

---

## ಚರಂಡಿಯಲ್ಲಿ ಭ್ರೂಣ ಪತ್ತೆ: ದೂರು ದಾಖಲು

**ಹರಿಹರ:** ನಗರದ ಹೈಸ್ಕೂಲ್ ಬಡಾವಣೆಯ 3ನೇ ಮುಖ್ಯರಸ್ತೆಯ 2ನೇ ಕ್ರಾಸ್ನಲ್ಲಿರುವ ಬೊಂಗಾಳೆ ನರ್ಸಿಂಗ್ ಹೋಂ ಬಳಿಯ ಗೋಡೆಗೆ ಹೊಂದಿಕೊಂಡಿರುವ ಚರಂಡಿಯಲ್ಲಿ ಭಾನುವಾರ ಹೆಣ್ಣು ಭ್ರೂಣ ಪತ್ತೆಯಾಗಿದೆ.

ಭ್ರೂಣವನ್ನು ಕಂಡ ಸ್ಥಳೀಯರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ ಮತ್ತು ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಬಂದ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಸಮಾಜಸೇವಕ ಸೈಯದ್ ಸನಾವುಲ್ಲಾ ಮತ್ತಿತರರು ಚರಂಡಿಯಲ್ಲಿದ್ದ ಭ್ರೂಣವನ್ನು ಹೊರತೆಗೆದರು. ನಂತರ ವೈದ್ಯಕೀಯ ಪರೀಕ್ಷೆಗೆ ನಗರದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲಾಯಿತು. ಭ್ರೂಣವನ್ನು ಯಾರು ಚರಂಡಿಗೆ ಎಸೆದಿದ್ದಾರೆ ಎಂಬ ಬಗ್ಗೆ ಮಾಹಿತಿ ತಿಳಿದು ಬಂದಿಲ್ಲ,

---

ನೀರಾವರಿ ಇಲಾಖೆಯಿಂದ 250 ಕೋಟಿ ರು. ಮೊತ್ತದ ಕೆಲಸಗಳು ನಡೆಯುತ್ತಿವೆ: ಡಿಸಿಎಂ ಡಿ.ಕೆ.ಶಿವಕುಮಾರ್

## ಅಭಿವೃದ್ಧಿಯೇ ನಮ್ಮ ತಂದೆ -ತಾಯಿ, ಗ್ಯಾರಂಟಿಗಳೇ ನನ್ನ ಬಂಧು-ಬಳಗ

**ಕನಕಪುರ:** ಕಾಯಕದಲ್ಲಿಯೇ ದೇವರನ್ನು ಕಾಣಬೇಕು. ನಮಗೆ ಅಭಿವೃದ್ಧಿಯೇ ತಾಯಿ ತಂದೆ, ಗ್ಯಾರಂಟಿಗಳೇ ಬಂಧು ಬಳಗ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಕನಕಪುರ ತಾಲೂಕಿನ ಭೂಹಳ್ಳಿ ಹೊಸಕೆರೆ ಬಳಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ನನ್ನ ಕ್ಷೇತ್ರಕ್ಕೆ ಸುಮಾರು 400 ಕೋಟಿಗಳಷ್ಟು ಅನುದಾನ ತಂದಿದ್ದೇನೆ. ಒಂದೇ ಸಲ ಅನುದಾನ ತಂದರೆ ಬೇರೆ ಕ್ಷೇತ್ರದವರು ಪ್ರಶ್ನೆ ಮಾಡುತ್ತಾರೆ. ಹಂತ, ಹಂತವಾಗಿ ಅನುದಾನ ತಂದು ಅಭಿವೃದ್ಧಿ ಕೆಲಸದ ಮೂಲಕ ಜನರ ಋಣ ತೀರಿಸಲಾಗುವುದು.250 ಕೋಟಿ ರು. ಮೊತ್ತದ ಕಾಮಗಾರಿಗಳು ನೀರಾವರಿ ಇಲಾಖೆಯಿಂದಲೇ ನಡೆಯುತ್ತಿದೆ ಎಂದರು.

ಪಾದ್ದರೆಯಿಂದ ಭೂಹಳ್ಳಿ ಅರಣ್ಯ ತಪಾಸಣಾ ಕೇಂದ್ರದ ವರೆಗೆ ಸುಮಾರು 13 ಕೋಟಿ ವೆಚ್ಚದಲ್ಲಿ ರಸ್ತೆ, ದೊಡ್ಡಆಲಹಳ್ಳಿಯಿಂದ ಕಬ್ಬಾಳಿನ ತನಕ 40 ಕೋಟಿ ವೆಚ್ಚದಲ್ಲಿ 14.5 ಕಿಮೀ ಉದ್ದದ ರಸ್ತೆ ಅಗಲೀಕರಣ ಮಾಡಲಾಗುತ್ತಿದೆ. ಇದರಿಂದ ನಮ್ಮ ಜನರ ಆಸ್ತಿ ಮೌಲ್ಯ ಹೆಚ್ಚಾಗಲಿದೆ ಎಂದು ಹೇಳಿದರು.

ಕನಕಪುರ, ಸಾತನೂರು, ದೊಡ್ಡ ಆಲಹಳ್ಳಿ ರಸ್ತೆಗಳನ್ನು ಅಗಲೀಕರಣ ಮಾಡಲು ಸಾಧ್ಯವಿಲ್ಲ ಎಂದು ಒಂದಷ್ಟು ಜನ ನಗುತ್ತಿದ್ದರು. ಆದರೆ ಇಂದು ಕೆಲಸವನ್ನು ಮಾಡಿ ತೋರಿಸಿದ್ದೇವೆ. ರಸ್ತೆ ಅಭಿವೃದ್ಧಿಗೆ ಎಂದು 135 ಕೋಟಿ, ಹೊಸಕೆರೆ ತುಂಬಿಸಲು 108 ಕೋಟಿ ಖರ್ಚು ಮಾಡಲಾಗುತ್ತಿದೆ. ನಲ್ಲಳ್ಳಿ-ಮುಲ್ಲಳ್ಳಿ ಸಂಪರ್ಕ ಸೇತುವೆಗೆ 11 ಕೋಟಿ, ಅರ್ಕಾವತಿಯಿಂದ ನೀರನ್ನು ಎತ್ತಿ ದೊಡ್ಡ ಆಲಹಳ್ಳಿ ಸುತ್ತಮುತ್ತಲ ಗ್ರಾಮ ಗಳಿಗೆ ಸೂಕ್ಷ್ಮ ನೀರಾವರಿ ಕಲ್ಪಿಸಲು 70 ಕೋಟಿ ಯ ಕಾಮಗಾರಿ ನಡೆಸಲಾಗುತ್ತಿದೆ. ಇದರಿಂದ 8 ಗ್ರಾಮಗಳ 2 ಸಾವಿರ ಎಕರೆ ಭೂಮಿಗೆ ಉಪಯೋಗವಾಗಲಿದೆ. ಅರ್ಕಾವತಿ ನದಿಗೆ ಅಡ್ಡಲಾಗಿ ಕೊಕ್ಕರೆ ಹೊಸಹಳ್ಳಿ ಬಳಿ ಸಂಪರ್ಕ ಸೇತುವೆ ನಿರ್ಮಾಣಕ್ಕೆ 10 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಒಬ್ಬ ವ್ಯಕ್ತಿಯ ಹಿಂದೆ ಎಷ್ಟು ಜನ ಇದ್ದಾರೆ ಎನ್ನುವುದಕ್ಕಿಂತ ಆತ ಎಷ್ಟು ಜನರ ಬದುಕನ್ನು ಬದಲಾವಣೆ ಮಾಡಿದ ಎನ್ನುವುದು ಮುಖ್ಯ. ಕೆರೆ ತುಂಬಿಸುವ ಯೋಜನೆಯಿಂದ ಸಾವಿರಾರು ರೈತರಿಗೆ ಉಪಯೋಗವಾಗುತ್ತದೆ. ಅಂತರ್ಜಲ ಹೆಚ್ಚುತ್ತದೆ, ಭೂಮಿ ಸದಾ ಹಸಿರಾಗಿ ಇರುತ್ತದೆ. ಕೆರೆ ತುಂಬಿಸುವ ಯೋಜನೆ ಅನುಷ್ಠಾನಕ್ಕೆ ಸಾಕಷ್ಟು ಕಷ್ಟ ಪಟ್ಟಿದ್ದೇವೆ. ಎಲ್ಲಿ ಶ್ರಮ ಇದೆಯೋ ಅಲ್ಲಿ ಫಲವಿದೆ ಎಂದರು.

ಕನಕಪುರ ತಾಲೂಕು ಕೋಡಿಹಳ್ಳಿ ಹೋಬಳಿ ವ್ಯಾಪ್ತಿಯ ಹಳ್ಳಗಳ ಅಭಿವೃದ್ಧಿ ಹಾಗೂ ಹಳ್ಳಗಳಿಗೆ ಅಡ್ಡಲಾಗಿ ಸರಣಿ ಚೆಕ್ ಡ್ಯಾಂಗಳನ್ನು ನಿರ್ಮಿಸಿ ಅರ್ಕಾವತಿ ನದಿಯಿಂದ ನೀರನ್ನು ತುಂಬಿಸುವ ಕಾಮಗಾರಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಚಿಕ್ಕ ಆಲಹಳ್ಳಿ ಗ್ರಾಮದಲ್ಲಿ ಭಾನುವಾರದಂದು ಶಂಕುಸ್ಥಾಪನೆ ನೆರವೇರಿಸಿದರು.

### ಕ್ಷೇತ್ರದ ಎಲ್ಲ ಕೆರೆಗಳನ್ನು ತುಂಬಿಸಲು ಕ್ರಮ

ನನ್ನ ಕ್ಷೇತ್ರದಲ್ಲಿ ಎಷ್ಟು ಕೆರೆಗಳನ್ನು ತುಂಬಿಸಲು ಸಾಧ್ಯವೋ ಅಷ್ಟು ಕೆರೆಗಳನ್ನು ತುಂಬಿಸುತ್ತೇನೆ. ಹಂತ, ಹಂತವಾಗಿ ಕೆಲಸಗಳನ್ನು ಮಾಡುತ್ತೇನೆ. ಅಧಿಕಾರ ಅವಧಿಯಲ್ಲಿ ಎಲ್ಲಾ ಕಡೆ ನೀರು ತುಂಬಿ ಹರಿಯಬೇಕು. ಚನ್ನಪಟ್ಟಣ, ರಾಮನಗರ, ಮಾಗಡಿಗೆ ಅನೇಕ ಕಾರ್ಯಕ್ರಮಗಳನ್ನು ನೀಡಲಾಗಿದೆ. ಅಲ್ಲಿನ ಜನಕ್ಕೂ ನಾನು ಕೆಲಸ ಮಾಡಿಸುವುದಾಗಿ ಮಾತು ಕೊಟ್ಟಿದ್ದೇನೆ. ಮೇಕೆದಾಟು ಕಚೇರಿ ಪ್ರಾರಂಭ ಮಾಡಲಾಗಿದ್ದು. ಎಷ್ಟು ಜಮೀನು ಮುಳುಗಡೆಯಾಗುತ್ತದೆ ಎಂದು ಅಂದಾಜು ಮಾಡಲು ಕಂದಾಯ ಹಾಗೂ ಅರಣ್ಯ ಅಧಿಕಾರಿಗಳು ಕೆಲಸ ಪ್ರಾರಂಭ ಮಾಡಿದ್ದಾರೆ. ಕಾವೇರಿ ನದಿಯಿಂದ ನೀರನ್ನು ತಂದು ಜನರ ಬದುಕನ್ನು ಬದಲಾವಣೆ ಮಾಡುವ ದೊಡ್ಡ ಕೆಲಸ ನಡೆಯುತ್ತಿದೆ ಎಂದರು.

> ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರು ಸಾತನೂರು ಹೋಬಳಿಯನ್ನು ರಾಮನಗರಕ್ಕೆ ಸೇರಿಸಲು ಹೊರಟಿದ್ದರು. ಕನಕಪುರದಲ್ಲಿಯೇ ಸಾತನೂರನ್ನು ಉಳಿಸಿಕೊಳ್ಳಬೇಕು ಎಂದು ಸ್ಥಳೀಯ ಮುಖಂಡರಿಂದ ದೊಡ್ಡ ಹೋರಾಟ ನಡೆದ ಕಾರಣಕ್ಕೆ ನನಗೆ ನಿಮ್ಮ ಸೇವೆ ಮಾಡುವ ಅವಕಾಶ ಸಿಕ್ಕಿದೆ. ಕ್ಷೇತ್ರ ಪುನರ್ ವಿಂಗಡಣೆ ವೇಳೆ ಎಸ್.ಎಂ.ಕೃಷ್ಣ ಅವರು ಹಾಗೂ ಕುಲದೀಪ್ ಸಿಂಗ್ ಅವರ ಪ್ರಯತ್ನದ ಫಲವಾಗಿ ಈ ಹೋಬಳಿ ಕನಕಪುರದಲ್ಲಿಯೇ ಉಳಿಯಿತು. ಕಾವೇರಿ ಸಂಗಮದಿಂದ ನೀರು ತಂದು ಈ ಭಾಗದ 21 ಕೆರೆಗಳಿಗೆ ತುಂಬಿಸುವ ಯೋಜನೆ ನನಗೆ ತೃಪ್ತಿ ನೀಡುತ್ತಿದೆ.
>
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ವಿಶ್ವವಾಣಿ

## ಸಂಪಾದಕೀಯ

# ಅಕ್ರಮ ಗಣಿಗಾರಿಕೆಗೆ ಬೇಕಿದೆ ಕಡಿವಾಣ

ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ತಡೆಗೆ ಸರಕಾರ ಹಲವು ಕ್ರಮಗಳನ್ನು ಕೈಗೊಂಡಿದ್ದರೂ ಅಕ್ರಮವಾಗಿ ಗಣಿಗಾರಿಕೆ ಚಟುವಟಿಕೆಯಲ್ಲಿ ತೊಡಗಿರುವ ವ್ಯಕ್ತಿಗಳಿಗೆ ರಾಜಕಾರಣಿಗಳು ಬೆಂಬಲ ನೀಡುತ್ತಿರುವುದರಿಂದ ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅನೇಕ ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸಿರುವುದು ವರದಿಯಾಗಿದೆ. ಕೆಲವು ಶಾಸಕರು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಅಕ್ರಮ ಗಣಿಗಾರಿಕೆ ತಡೆಯದಂತೆ ಅಡ್ಡಗಾಲು ಹಾಕುತ್ತಿರುವ ಕುರಿತೂ ಗಂಭೀರ ಆರೋಪಗಳು ಕೇಳಿ ಬಂದಿವೆ. ಅಕ್ರಮ ಮರಳು ಅಡ್ಡೆ ಮೇಲೆ ದಾಳಿ ಮಾಡದಂತೆ ಅವಾಚ್ಯ ಶಬ್ದಗಳಿಂದ ನಿಂದಿಸುವುದು, ವಾಹನಗಳನ್ನು ಜಪ್ತಿ ಮಾಡದಂತೆ ಪ್ರಭಾವ ಬೀರುವುದು, ಅಕ್ರಮ ಗಣಿಗಾರಿಕೆ ವಿರುದ್ಧ ಕ್ರಮ ಕೈಗೊಳ್ಳುವವರನ್ನು ಎತ್ತಂಗಡಿ ಮಾಡಿಸುವುದು ಮತ್ತು ಜೀವ ಬೆದರಿಕೆ ಹಾಕುವುದು ಸಾಮಾನ್ಯವಾಗಿದೆ ಎಂಬ ಆರೋಪಗಳು ಕೇಳಿ ಬಂದಿವೆ. ಇದೇ ರೀತಿ ಅಕ್ರಮ ಮರಳು, ಕಲ್ಲು ಗಣಿಕಾರಿಗೆ ಮುಂದುವರಿದರೆ ನದಿ, ಬೆಟ್ಟ-ಗುಡ್ಡಗಳಿಗೆ ಅಪಾಯ ಕಟ್ಟಿಟ್ಟ ಬುತ್ತಿ. ಆದ್ದರಿಂದ ಅಧಿಕಾರಿಗಳಿಗೆ ಇನ್ನಷ್ಟು ಹೆಚ್ಚಿನ ಅಧಿಕಾರ ನೀಡುವುದು ಅತ್ಯಗತ್ಯವಾಗಿದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧೀನದಲ್ಲಿ ಪ್ರತಿ ಜಿಲ್ಲೆಗೆ ಕನಿಷ್ಠ 4-5 ಪೊಲೀಸ್ ಸಿಬ್ಬಂದಿ ನೇಮಕ ಮಾಡಬೇಕಿದೆ. ಗಣಿ ಅಧಿಕಾರಿಗಳು ಗಸ್ತು ತಿರುಗುವಾಗ, ಗಣಿಗಾರಿಕೆ ಸ್ಥಳಕ್ಕೆ ಭೇಟಿ ನೀಡುವಾಗ ಆ ಪೊಲೀಸರು ಅಧಿಕಾರಿಗಳಿಗೆ ರಕ್ಷಣೆ ಕೊಡುವಂತಾಗಬೇಕಿದೆ. ಗಣಿಗಾರಿಕೆ ಅಡ್ಡೆಗಳ ಮೇಲೆ ದಾಳಿ ಮಾಡಿದ ಅನೇಕ ಪ್ರಕರಣಗಳಲ್ಲಿ ಸಾಮಾನ್ಯವಾಗಿ ದಂಡ ವಿಧಿಸಿ, ಆರೋಪಿಗಳನ್ನು ಬಿಡುಗಡೆ ಮಾಡಲಾಗುತ್ತದೆ. ಇದರಿಂದ ಆರೋಪಿಗಳಿಗೆ ಯಾವುದೇ ಭಯ ಇಲ್ಲದಂತಾಗಿದೆ. ಆದ್ದರಿಂದ ಗಣಿಗಾರಿಕೆಯಲ್ಲಿ ತೊಡಗಿರುವವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ರಚನೆಯಾಗಬೇಕಿದೆ. ಈ ಪ್ರಕರಣಗಳ ವಿಚಾರಣೆಗೆ ಕಂದಾಯ, ಅರಣ್ಯ ಇಲಾಖೆ ಮಾದರಿಯಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಪ್ರತ್ಯೇಕ ನ್ಯಾಯಾಲಯ ಸ್ಥಾಪಿಸಬೇಕಿದೆ. ಇನ್ನು ಅಕ್ರಮ ಗಣಿಗಾರಿಕೆ ತಡೆಯುವಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಪಾತ್ರ ಬಹಳಷ್ಟಿದೆ. ಬರೀ ನೋಟಿಸ್ ನೀಡಿ ಸುಮ್ಮನಾಗುವದರಿಂದ ಏನೂ ಪ್ರಯೋಜನವಿಲ್ಲ. ಎಲ್ಲ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಕ್ರಮ ಗಣಿಗಾರಿಕೆ ತಡೆಯಬೇಕಿದೆ.

## ಸೊಂಪಾದಕೀಯ

# 200 ರುಪಾಯಿಗೆ ಒಂದು..

ಸಿದ್ದರಾಮನ ಹುಂಡಿ ಲೆಕ್ಕ ರೆಡಿ ಆಗಿದೆ. ಅಂದರೆ ರಾಜ್ಯದ ಬಜೆಟ್ ಮಂಡನೆ ಆಗಿದೆ. ಇದರಲ್ಲಿ ಸಿನಿಮಾ ರಂಗಕ್ಕೆ ಸಂಬಂಧಿಸಿ ಕೆಲವು ಗಮನ ಸೆಳೆಯುವ ಅಂಶಗಳಿವೆ ಅನ್ನೋದು ವಿಶೇಷ. ಇತ್ತೀಚೆಗೆ ತಾನೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಿನಿಮಾರಂಗದ ಸ್ಟಾರ್‌ಗಳ ನಟ್ಟು ಬೋಲ್ಟು ಟೈಟ್ ಮಾಡುವ ಮಾತಾಡಿದ್ದರು. ಆದರೆ ಈಗ ಸಿಎಂ ಸಿದ್ದರಾಮಯ್ಯ ಚಿತ್ರರಂಗದ ಹಲವು ಅಂಶಗಳಿಗೆ ತಮ್ಮ ಬಜೆಟ್‌ನಲ್ಲಿ ಒತ್ತು ಕೊಟ್ಟಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಚರ್ಚೆ ಆಗ್ತಾ ಇರೋದು ಮಲ್ಟಿಪ್ಲೆಕ್ಸ್ ಟಿಕೆಟ್ ರೇಟುಗಳ ಬಗ್ಗೆ. ಕರ್ನಾಟಕದ ಮಲ್ಟಿಪ್ಲೆಕ್ಸ್‌ಗಳ ವಿಶೇಷತೆ ಅಂದ್ರೆ ಅವುಗಳ ಟಿಕೆಟ್ ರೇಟು. ಪಾಪ್ ಕಾರ್ನ್ ಮಾರುವ ಬ್ಯುಸಿನೆಸ್ ಮಾಡುವ ಈ ಮಲ್ಟಿಪ್ಲೆಕ್ಸ್‌ಗಳು ಅದರ ಜತೆಗೆ ಜನರಿಗೆ ಸಿನಿಮಾ ಕೂಡಾ ತೋರಿಸುತ್ತವೆ. ಆದರೆ ಈ ಟಿಕೆಟ್ ದರ ಮಾತ್ರ ಯಾವುದರ ಮೇಲೆ ಆಧಾರಿತವಾಗಿದೆ ಅನ್ನೋದು ಯಾರಿಗೂ ಅರ್ಥ ಆಗಲ್ಲ. ಇತರ ರಾಜ್ಯಗಳಲ್ಲಿ ಕೈಗೆಟುಕುವ ದರ ನಿಗದಿ ಮಾಡಿರುವ ಈ ಮಲ್ಟಿಪ್ಲೆಕ್ಸ್‌ಗಳು ಕರ್ನಾಟಕದಲ್ಲಿ ಮಾತ್ರ ಶೋ ತೋರಿಸೋ ವಿಷಯದಲ್ಲಿ ಪ್ರೇಕ್ಷಕರನ್ನು ಶೋಷಣೆ ಮಾಡುತ್ತಿವೆ. ಈಗ ಈ ಶೋಷಣೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೊಸದೊಂದು ಘೋಷಣೆ ಮಾಡಿದ್ದಾರೆ. ಅದೇನಪ್ಪಾ ಅಂದ್ರೆ ಇನ್ನು ಮುಂದೆ ಮಲ್ಟಿಪ್ಲೆಕ್ಸ್‌ಗಳ ಮ್ಯಾಕ್ಸಿಮಮ್ ಟಿಕೆಟ್ ದರ ಅಂದ್ರೆ 200 ರುಪಾಯಿ ಅನ್ನೋದು. ಹೊಸ ಚಿತ್ರಗಳು, ಅದರಲ್ಲೂ ಸ್ಟಾರ್ ಚಿತ್ರಗಳು ಬಿಡುಗಡೆ ಆದ್ರೆ ಟಿಕೆಟ್ ದರವನ್ನು ಸಾವಿರಗಳ ಲೆಕ್ಕದಲ್ಲಿ ನಿಗದಿ ಮಾಡುತ್ತಿದ್ದ ಮಲ್ಟಿಪ್ಲೆಕ್ಸ್‌ಗಳಿಗೆ ಈ ಮೂಲಕ ಕಡಿವಾಣ ಹಾಕಲಾಗಿದೆ. ಆದರೆ ಮೊದಲೇ ನವರಂಗಿ ಆಟಗಳಿಗೆ ಹೆಸರಾಗಿರುವ ಮಲ್ಟಿಪ್ಲೆಕ್ಸ್‌ಗಳು ಇದನ್ನು ಹೇಗೆ ನಿಭಾಯಿಸುತ್ತವೆ ಅನ್ನೋದು ಈಗ ಇಂಟರೆಸ್ಟಿಂಗ್ ವಿಚಾರ. ಈಗ 200 ರುಪಾಯಿಗಿಂತ ಹೆಚ್ಚು ವಸೂಲಿ ಮಾಡುವ ಹಾಗಿಲ್ಲ ಎಂದ ಮೇಲೆ ಚಿತ್ರಮಂದಿರದ ಎಲ್ಲ ಟಿಕೆಟ್ ದರಗಳನ್ನೂ 200 ರುಪಾಯಿಗೇ ನಿಗದಿ ಮಾಡುವ ಹುನ್ನಾರ ಮಾಡಬಹುದು. ಇಲ್ಲವೇ ಪಾಪ್ ಕಾರ್ನ್ ರೇಟನ್ನು ಇನ್ನಷ್ಟು ಜಾಸ್ತಿ ಮಾಡಬಹುದು. ಹೀಗೆ ಈ ಕಾರ್ಪೊರೇಟ್ ಕಂಪನಿಗಳಿಗೆ ಜನರನ್ನು ಲೂಟಿ ಮಾಡಲು ನೂರಾರು ದಾರಿ. ಆದರೆ ಅಟ್‌ಲೀಸ್ಟ್ ಅವರ ದಬ್ಬಾಳಿಕೆಗೆ ಕಡಿವಾಣ ಹಾಕುವ ಪ್ರಯತ್ನವಾದರೂ ಆಗಿದೆ ಅನ್ನೋದು ಸಮಾಧಾನಕರ ವಿಷಯ.

## ಸಂಪಾದಕರ ಸದ್ಯಶೋಧನೆ

# ಶಾಲೆಯಲ್ಲಿ ಸ್ವಚ್ಛತೆಯ ಪಾಠ

ಶಿಕ್ಷಣವೆಂದರೆ ಕೇವಲ ಪಠ್ಯಪುಸ್ತಕಗಳನ್ನು ಓದುವುದು, ಪರೀಕ್ಷೆ ಬರೆಯುವುದು ಮತ್ತು ಅಂಕಗಳನ್ನು ಪಡೆಯುವುದು ಮಾತ್ರವಲ್ಲ. ಇದು ಜೀವನದ ವಿವಿಧ ಆಯಾಮಗಳನ್ನು ಒಳಗೊಂಡಿದೆ. ನೈತಿಕತೆ, ಸಂಸ್ಕಾರ, ಶಿಷ್ಟಾಚಾರ ಮತ್ತು ಪ್ರಾಯೋಗಿಕ ಕೌಶಲಗಳು ಕೂಡಾ ಶಿಕ್ಷಣದ ಮಹತ್ವದ ಅಂಶಗಳೇ. ಜಪಾನಿನ ಶಾಲೆಗಳಲ್ಲಿ ಸ್ವಚ್ಛತೆಯನ್ನು ಒಂದು ಮುಖ್ಯ ವಿಷಯವಾಗಿ, ಶಿಸ್ತಾಗಿ ಪರಿಗಣಿಸಲಾಗಿದೆ. ಅಲ್ಲಿನ ಶಾಲೆಗಳು ವಿದ್ಯಾರ್ಥಿಗಳಿಗೆ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಹೇಳಿಕೊಡುತ್ತವೆ. ಸ್ವಚ್ಛತೆಯು ವಿದ್ಯಾರ್ಥಿಗಳಲ್ಲಿ ಶಿಷ್ಟತೆಯ ಬೆಳವಣಿಗೆಯೊಂದಿಗೆ ಜವಾಬ್ದಾರಿಯ ಅರಿವು ಮೂಡಿಸುತ್ತದೆ ಎಂದು ಅಲ್ಲಿನ ಶಿಕ್ಷಣ ತಜ್ಞರು ಭಾವಿಸಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳು ಸ್ವತಃ ಸ್ವಚ್ಛತೆ ಮಾಡಿಕೊಳ್ಳುವುದನ್ನು ಹಾಗೂ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳುವುದನ್ನು ಅವರು ಪ್ರಚೋದಿಸುತ್ತಾರೆ. ಮಣ್ಣು, ಧೂಳು, ಕಸದ ರಾಶಿಗಳು ರೋಗವನ್ನು ಹರಡುತ್ತವೆ. ಆದ್ದರಿಂದ, ಸ್ವಚ್ಛತೆಯನ್ನು ಕಾಪಾಡುವುದು ಒಳ್ಳೆಯ ಆರೋಗ್ಯದ ಮೂಲ ಎಂಬುದನ್ನು ವಿದ್ಯಾರ್ಥಿಗಳಿಗೆ ಕಲಿಸುವ ಅಗತ್ಯವಿದೆ ಎಂದು ಅಲ್ಲಿನ ಶಾಲೆಗಳಲ್ಲಿ ಈ ವಿಷಯಗಳ ಬಗ್ಗೆ ಆದ್ಯತೆ ನೀಡಲಾಗುತ್ತದೆ. ಶಾಲೆ ಸ್ವಚ್ಛವಿದ್ದರೆ ವಿದ್ಯಾರ್ಥಿಗಳು ಆರೋಗ್ಯವಾಗಿರುತ್ತಾರೆ, ಸಮುದಾಯ ಸ್ವಚ್ಛವಾಗಿದ್ದರೆ, ಸಮಾಜ ಕ್ಷೇಮವಾಗಿರುತ್ತದೆ ಎಂಬುದನ್ನು ಬಾಲ್ಯದಿಂದಲೇ ಮಕ್ಕಳ ಮನಸ್ಸಿನಲ್ಲಿ ಬಿತ್ತಲಾಗುತ್ತದೆ. ಶಾಲೆಗಳಲ್ಲಿ ಮೊದಲ ಮೂರ್ನಾಲ್ಕು ವರ್ಷಗಳ ಅವಧಿಯಲ್ಲಿ ಸ್ವಚ್ಛತೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದರಿಂದ, ಭವಿಷ್ಯದಲ್ಲಿ ಮಕ್ಕಳು ಪರಿಸರ ಸಂರಕ್ಷಕರಾಗಬಹುದು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವಂತೆ, ತ್ಯಾಜ್ಯ ವಸ್ತುಗಳನ್ನು ಸರಿಯಾಗಿ ವಿಂಗಡಿಸುವಂತೆ, ನೀರು ಮತ್ತು ವಿದ್ಯುತ್ ಉಳಿತಾಯ ಮಾಡುವಂತೆ ಅವರೇ ಇತರರಿಗೆ ಹೇಳುತ್ತಾರೆ. ಸ್ವಚ್ಛತಾ ಕಾರ್ಯಗಳು ವಿದ್ಯಾರ್ಥಿಗಳಲ್ಲಿ ಟೀಮ್ ವರ್ಕ್ ಮತ್ತು ಸಹಕಾರದ ಮನೋಭಾವವನ್ನು ಬೆಳೆಸುತ್ತವೆ. ಒಟ್ಟಾಗಿ ಮಾಡುವ ಕೆಲಸವು, ಪರಸ್ಪರ ಸಹಾಯ ಮಾಡುವ, ಇತರರ ಸಂಕಷ್ಟವನ್ನು ಅರ್ಥಮಾಡಿಕೊಳ್ಳುವ ಗುಣವನ್ನು ಪ್ರೇರೇಪಿಸುತ್ತದೆ. ದೈನಂದಿನ ಜೀವನದಲ್ಲಿ ಸ್ವಾವಲಂಬಿಯಾಗಿ ನಡೆದುಕೊಳ್ಳುವಲ್ಲಿ ಸ್ವಚ್ಛತಾ ಕಾರ್ಯಗಳು ವಿದ್ಯಾರ್ಥಿಗಳಿಗೆ ಸಹಕಾರಿಯಾಗುತ್ತವೆ. ಶಾಲೆಯಲ್ಲಿ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲು ಪ್ರಾತ್ಯಕ್ಷಿಕೆ (demonstration) ಮತ್ತು ಮಾಹಿತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಮೂಲಕ ವಿದ್ಯಾರ್ಥಿಗಳು ಕಸದ ವಿಂಗಡನೆ, ಶೌಚಾಲಯ ಶುದ್ಧತೆ ಮತ್ತು ಕೈ ತೊಳೆಯುವುದರ ಮಹತ್ವವನ್ನು ಆರಂಭದಲ್ಲಿಯೇ ಕಲಿಯುತ್ತಾರೆ. ಪ್ರತಿದಿನ, ವಾರದಲ್ಲಿ ಒಂದು ದಿನ ಅಥವಾ ತಿಂಗಳಲ್ಲಿ ಒಂದು ದಿನ, ಶಾಲೆಯ ವಿದ್ಯಾರ್ಥಿಗಳು ಸ್ವಚ್ಛತಾ ಕಾರ್ಯಗಳಲ್ಲಿ ಭಾಗವಹಿಸಬೇಕು. ವಿದ್ಯಾರ್ಥಿಗಳು ತಮ್ಮ ಟಾಯ್ಲೆಟ್, ಕ್ಲಾಸ್‌ರೂಮ್, ಆಟದ ಮೈದಾನ, ಲೈಬ್ರರಿ ಮುಂತಾದ ಸ್ಥಳಗಳನ್ನು ಕಡ್ಡಾಯವಾಗಿ ಸ್ವಚ್ಛಗೊಳಿಸಲೇಬೇಕು. ಶಾಲೆಯಲ್ಲಿ ಸ್ವಚ್ಛತಾ ಸಮಿತಿಯನ್ನು ರಚಿಸಿ, ಅದರಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರು ಭಾಗವಹಿಸುವಂತೆ ಮಾಡುತ್ತಾರೆ. ಈ ಸಮಿತಿಯು ಶಾಲೆಯ ಸ್ವಚ್ಛತೆ, ಪರಿಸರ ಸಂರಕ್ಷಣಾ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಉತ್ತಮ ಸ್ವಚ್ಛತೆಯನ್ನು ಪಾಲಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುವುದರಿಂದ ಇತರ ವಿದ್ಯಾರ್ಥಿಗಳು ಕೂಡಾ ಅದನ್ನು ಅನುಸರಿಸಲು ಉತ್ಸುಕತೆ ತೋರುತ್ತಾರೆ. ಶಾಲೆಯ ಆವರಣದಲ್ಲಿ ಕೈತೋಟ ಬೆಳೆಯಲು ಅವಕಾಶ ನೀಡುವುದರಿಂದ ಸ್ವಚ್ಛತೆ ಮಾತ್ರವಲ್ಲದೇ, ಪ್ರಕೃತಿ ಸಂರಕ್ಷಣಾ ಮಹತ್ವವನ್ನೂ ಕಲಿಸಲಾಗುತ್ತದೆ. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವ ಅಭ್ಯಾಸವನ್ನು ವೃದ್ಧಿಸಿ, ಪರಿಸರ ಸ್ನೇಹಿ ಕ್ರಮಗಳನ್ನು ಕೈಗೊಳ್ಳುವುದಕ್ಕಿರುವ ಮಹತ್ವವನ್ನು ಅವರಲ್ಲಿ ಬಿತ್ತಲಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಸ್ವಚ್ಛತೆಯ ಜವಾಬ್ದಾರಿಯನ್ನು ಶಾಲಾ ಹಂತದಲ್ಲಿ ಅರಿತುಕೊಂಡರೆ, ಅವರು ಮನೆ, ಶಾಲೆ ಮತ್ತು ಸಮಾಜವನ್ನು ಸ್ವಚ್ಛವಾಗಿ ಇರಿಸುತ್ತಾರೆ. ಸ್ವಚ್ಛತೆಯನ್ನು ಜೀವನವಿಡೀ ಪ್ರತಿ ಹಂತದಲ್ಲೂ ಪಾಲಿಸುವುದರಲ್ಲಿ ಸಂದೇಹವಿಲ್ಲ.

# ಚಕ್ರವ್ಯೂಹದಿಂದ ಪಾರಾದರಾ ಸಿಎಂ ಸಿದ್ದು?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಳೆದ ವಾರ ಕರ್ನಾಟಕಕ್ಕೆ ಬಂದರು. ಹೀಗೆ ಬಂದವರು ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಏಕತೆಯ ಮಂತ್ರ ಬೋಧಿಸಿ ಹೋದರು. ಅಂದ ಹಾಗೆ, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರಿಗೆ ಖರ್ಗೆಯವರು ಏಕತೆಯ ಮಂತ್ರ ಬೋಧಿಸಿದ್ದು ಇದೇ ಮೊದಲಲ್ಲ; ರಾಜ್ಯ ಕಾಂಗ್ರೆಸ್ ಪಾಳಯದಲ್ಲಿ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ತಳಮಳವೆದ್ದಾಗಲೆಲ್ಲ ಅವರು ಅದೇ ಕೆಲಸ ಮಾಡಿದ್ದಾರೆ. ಹಾಗಂತ ರಾಜಕೀಯ ಬೆಳವಣಿಗೆಗಳ ಮಧ್ಯೆ ಖರ್ಗೆಯವರಿಗೆ ಸಿಎಂ ಆಗುವ ಆಸೆ ಇಲ್ಲವೆಂದಲ್ಲ. ವಾಸ್ತವವಾಗಿ ಕರ್ನಾಟಕದ ಸಿಎಂ ಆಗಲು ಅವರು ಸತತವಾಗಿ ಪ್ರಯತ್ನಿಸಿದ್ದಾರೆ. ಆದರೆ ಸನ್ನಿವೇಶಗಳು, ಕೈಗೆ ಬಂದ ತುತ್ತು ಅವರ ಬಾಯಿಗೆಟುಕದಂತೆ ಮಾಡಿವೆ. ಈ ಬಗ್ಗೆ ಅವರಿಗೆ ಹಳಹಳಿಕೆ ಇಲ್ಲವೆಂದಲ್ಲ, ಇವತ್ತು ಕಷ್ಟ ಹೇಳಿಕೊಳ್ಳಲು ರಾಜ್ಯ ಕಾಂಗ್ರೆಸ್‌ನ ಯಾವುದೇ ನಾಯಕರು ತಮ್ಮ ಬಳಿ ಬರಲಿ, ತಮಗೆ ಸಿಎಂ ಹುದ್ದೆ ಎಷ್ಟು ಬಾರಿ ಮತ್ತು ಹೇಗೆ ತಪ್ಪಿತು ಅನ್ನುವುದನ್ನು ಅವರೆದುರು ಎಳೆ ಎಳೆಯಾಗಿ ಬಿಡಿಸಿಡುತ್ತಾರೆ.

ಇಂಥ ಖರ್ಗೆಯವರ ಬಳಿ ಸಿದ್ದರಾಮಯ್ಯ ಕ್ಯಾಂಪಿನವರು ಹೋಗಿ ಒಂದು ಬಗೆಯ ಆಸೆ ಹುಟ್ಟಿಸಿದರೆ, ಶಿವಕುಮಾರ್ ಕ್ಯಾಂಪಿನವರು ಹೋಗಿ ಮತ್ತೊಂದು ಬಗೆಯ ಆಸೆಯ ಬೀಜ ಬಿತ್ತಿ ಬಂದಿದ್ದಾರೆ. ಅಂದ ಹಾಗೆ, ಇತ್ತೀಚೆಗೆ ಖರ್ಗೆಯವರನ್ನು ಭೇಟಿ ಮಾಡಿದ್ದ ಸಿದ್ದು ಕ್ಯಾಂಪಿನ ಪ್ರಮುಖರಾದ ಸತೀಶ್ ಜಾರಕಿಹೊಳಿ ಮತ್ತು ಕೆ.ಎನ್.ರಾಜಣ್ಣ ಅವರು 3 ವಿಷಯಗಳನ್ನು ಸ್ಪಷ್ಟವಾಗಿ ಹೇಳಿ ಬಂದಿದ್ದರು. ಅದೆಂದರೆ, ''ಸಿದ್ದು ಸಿಎಂ ಹುದ್ದೆಯಿಂದ ಇಳಿಯಬಾರದು. ಇಳಿಯುವುದೇ ಆದರೆ ಅವರ ಜಾಗಕ್ಕೆ ನೀವು ಬರಬೇಕು. ಒಂದು ವೇಳೆ ಇದು ಸಾಧ್ಯವಾಗದೆ ಡಿಕೆಶಿ ಹೆಸರು ಮುನ್ನೆಲೆಗೆ ಬಂದರೆ ನಾವು ಪಕ್ಷ ತೊರೆಯುತ್ತೇವೆ'' ಎಂಬುದು ಈ ನಾಯಕರ ಮಾತಾಗಿತ್ತು.

ಇದೇ ರೀತಿ ಡಿಕೆಶಿ ಕ್ಯಾಂಪಿನವರೂ ಖರ್ಗೆಯವರ ಮುಂದೆ ಎರಡು ಪ್ರಪೋಸಲ್ಲುಗಳನ್ನು ಮಂಡಿಸಿ ಬಂದಿದ್ದಾರೆ. ಅದೆಂದರೆ, ಅಧಿಕಾರ ಹಂಚಿಕೆ ಒಪ್ಪಂದದ ಅನುಸಾರ ಸಿಎಂ ಸಿದ್ದರಾಮಯ್ಯ ಕೆಳಗಿಳಿದು ಡಿಕೆಶಿ ಸಿಎಂ ಆಗಲಿ. ಅದೇ ರೀತಿ ಡಿಕೆಶಿ ತೆರವು ಮಾಡುವ ಡಿಸಿಎಂ ಹುದ್ದೆಗೆ ನಿಮ್ಮ ಪುತ್ರ ಪ್ರಿಯಾಂಕ್ ಖರ್ಗೆ ಬರಲಿ ಎಂಬುದು. ಇವತ್ತು ತಾವು ಸಿಎಂ ಆಗುವ, ಇಲ್ಲವೇ ತಮ್ಮ ಪುತ್ರ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಡಿಸಿಎಂ ಆಗುವ ಪ್ರಪೋಸಲ್ಲು ಖರ್ಗೆಯವರಿಗೆ ಇಷ್ಟವೇನೋ ಆಗಿದೆ. ಆದರೆ ಹಾಗಂತ ಅವಸರಕ್ಕೆ ಬಿದ್ದು ಆಟ ಕೆಡಿಸಿಕೊಳ್ಳುವ ಇಚ್ಛೆ ಅವರಿಗಿಲ್ಲ. ಸಾಲದೆಂಬಂತೆ ಇವತ್ತು ದೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕಿರುವ ಕರ್ನಾಟಕ, ತೆಲಂಗಾಣ ಮತ್ತು ಹಿಮಾಚಲ ಪ್ರದೇಶ ಎಂಬ ಸೇನಾ ನೆಲೆಗಳನ್ನು ಕಳೆದುಕೊಂಡರೆ ಆಗುವ ಅಪಾಯ ವೇನು? ಎಂಬುದು ಖರ್ಗೆಯವರಿಗೆ ಗೊತ್ತಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕದಲ್ಲಿ ಅಧಿಕಾರ ಹಂಚಿಕೆ ಸೂತ್ರವನ್ನು ಇಂಪ್ಲಿಮೆಂಟ್ ಮಾಡಲು ಹೋದರೆ ರಾಜಸ್ಥಾನದಲ್ಲಿ ಈ ಹಿಂದೆ ಅಶೋಕ್ ಗೆಹ್ಲೋಥ್-ಸಚಿನ್ ಪೈಲಟ್ ಮಧ್ಯೆ ಏನಾಯಿತು? ಛತ್ತೀಸ್‌ಘಡದಲ್ಲಿ ಭೂಪೇಶ್ ಸಿಂಗ್ ಭಗೇಲಾ ಮತ್ತು ಟಿ.ಎ.ಸಿಂಗ್ ದೇವ್ ನಡುವಣ ಕದನ ಏನಾಯಿತು? ಅಂತ ಖರ್ಗೆಯವರಿಗೆ ಗೊತ್ತು. ನಿರ್ದಿಷ್ಟ ಅವಧಿಯ ನಂತರ ಸಚಿನ್ ಪೈಲಟ್‌ಗೆ ಅಧಿಕಾರ ಬಿಟ್ಟುಕೊಡಿ ಅಂತ ರಾಜಸ್ಥಾನದ ಸಿಎಂ ಅಶೋಕ್ ಗೆಹ್ಲೋಥ್ ಅವರಿಗೆ ಹೇಳಿದರೆ ಅವರು ಬಿಲ್‌ಕುಲ್ ಒಪ್ಪಲಿಲ್ಲ. ಪರಿಣಾಮವಾಗಿ ಕಾಂಗ್ರೆಸ್ ಹೈಕಮಾಂಡ್‌ಗೆ ಮುಖಭಂಗವಾಯಿತು. ಇದೇ ರೀತಿ ಕೆಲವೇ ಕಾಲದ ಹಿಂದೆ ಡಿಸಿಎಂ ಸಿಂಗ್ ದೇವ್ ಅವರಿಗೆ ಸಿಎಂಗಿರಿ ಬಿಟ್ಟುಕೊಡಿ ಎಂದರೆ ಭಗೇಲಾ ತಿರುಗೇಟು ಹೊಡೆದಿದ್ದರು.

ಹೀಗಾಗಿ ಕೆಲ ದಿನಗಳ ಹಿಂದೆ ಪಕ್ಷದ ವರಿಷ್ಠರ ಸಭೆ ನಡೆದಾಗ ಕರ್ನಾಟಕದ ರಾಜಕೀಯ ಸನ್ನಿವೇಶಗಳ ಬಗ್ಗೆ ಚರ್ಚೆಯಾಗಿದೆ. ಆಗೆಲ್ಲ ನೇರವಾಗಿ ಮಾತನಾಡಿದ ಕೆಲ ನಾಯಕರು ರಾಜಸ್ಥಾನ, ಛತ್ತೀಸ್‌ಘಡದ ಎಪಿಸೋಡುಗಳನ್ನು ನೆನಪಿಸಿದ್ದಾರೆ. ಅಷ್ಟೇ ಅಲ್ಲ, ನಾಳೆ ಅಧಿಕಾರ ಬಿಟ್ಟುಕೊಡಿ ಅಂತ ಸಿಎಂ ಸಿದ್ದರಾಮಯ್ಯನವರಿಗೆ ಹೇಳಿದರೆ, ಅವರು ಅಶೋಕ್ ಗೆಹ್ಲೋಥ್, ಭಗೇಲಾ ಅವರ ತರಹ ತಿರುಗಿ ಬೀಳಬಹುದು. ಎಷ್ಟೇ ಆದರೂ ಅವರು ಮಾಸ್ ಲೀಡರ್. ಹೀಗಾಗಿ ಅಧಿಕಾರ ಬಿಟ್ಟುಕೊಡಿ ಅಂತ ಅವರಿಗೆ ಹೇಳುವುದು ಕಷ್ಟ. ಹಾಗೊಂದು ವೇಳೆ ಅವರು ತಯಾರಿದ್ದರೂ ಅವರ ಜತೆಗಿರುವವರು ಸುಮ್ಮನಿರುವುದಿಲ್ಲ. ಒಂದು ವೇಳೆ ಅವರು ತಿರುಗಿಬಿದ್ದರೆ ಕ್ರಮ ತೆಗೆದುಕೊಳ್ಳುವ ಸ್ಥಿತಿಯಲ್ಲಿ ನಾವೂ ಇಲ್ಲ. ಹೀಗಾಗಿ ಅಧಿಕಾರ ಬಿಟ್ಟುಕೊಡಿ ಅಂತ ಸಿದ್ದರಾಮಯ್ಯ ಅವರಿಗೆ ಹೇಳುವುದು ತುಂಬ ದುಬಾರಿಯಾಗಬಹುದು ಎಂದಿದ್ದಾರೆ. ಯಾವಾಗ ಅವರು ಇಂಥ ಆತಂಕ ವ್ಯಕ್ತಪಡಿಸಿದರೋ, ಅದನ್ನೇ ಮನಸ್ಸಿನಲ್ಲಿಟ್ಟುಕೊಂಡ ಮಲ್ಲಿಕಾರ್ಜುನ ಖರ್ಗೆ ಮೊನ್ನೆ ಕರ್ನಾಟಕಕ್ಕೆ ಬಂದು ಏಕತೆಯ ಮಂತ್ರ ಬೋಧಿಸಿ ಹೋಗಿದ್ದಾರೆ.

## ಚಕ್ರವ್ಯೂಹದಿಂದ ಸಿದ್ದು ಪಾರು?

ಇನ್ನು ತೆಲಂಗಾಣದ ಮುಖ್ಯಮಂತ್ರಿ ರೇವಂತರೆಡ್ಡಿ ಅವರು ತಾವು ಸಿಲುಕಿಕೊಂಡ ಚಕ್ರವ್ಯೂಹದ ಬಗ್ಗೆ ನೋವು ತೋಡಿಕೊಳ್ಳುವ ಕಾಲಕ್ಕೆ ಸರಿಯಾಗಿ, ಕರ್ನಾಟಕದ ಸಿಎಂ ಸಿದ್ದರಾಮಯ್ಯ ತಾವು ಸಿಲುಕಿಕೊಂಡ ಚಕ್ರವ್ಯೂಹದಿಂದ ಪಾರಾಗುವ ಭರವಸೆ ತೋರಿಸಿದ್ದಾರೆ. ಅಂದ ಹಾಗೆ, ರಾಜ್ಯ ಸರಕಾರಗಳ ಗ್ಯಾರಂಟಿ ಯೋಜನೆಗಳೇ ಈ ಚಕ್ರವ್ಯೂಹ. ಮೊನ್ನೆ ಸಂದರ್ಶನವೊಂದರಲ್ಲಿ ಮಾತನಾಡಿದ ರೇವಂತರೆಡ್ಡಿ ಅವರು, ತಾವು ಸಿಲುಕಿಕೊಂಡ ಚಕ್ರವ್ಯೂಹದ ಬಗ್ಗೆ ಬಹಿರಂಗವಾಗಿಯೇ ನೋವು ತೋಡಿಕೊಂಡಿದ್ದರು. ''ಇವತ್ತು ತೆಲಂಗಾಣ ಸರಕಾರ ತನ್ನ ಆದಾಯದ ಪೈಕಿ ದೊಡ್ಡ ಪಾಲನ್ನು ಸರಕಾರಿ ನೌಕರರ ವೇತನ, ಪಿಂಚಣಿಗೆ ಮತ್ತು ಸರಕಾರ ಮಾಡಿದ ಸಾಲದ ಮರುಪಾವತಿಗೆ ಕೊಡುತ್ತಿದೆ. ಉಳಿದ ಸ್ವಲ್ಪ ಹಣ ಅಭಿವೃದ್ಧಿ ಕೆಲಸಕ್ಕೆ ಸಾಲುತ್ತಿಲ್ಲ''

ಅನ್ನುತ್ತಾ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದು ಒಳ್ಳೆಯದು ಎಂಬ ಇಂಗಿತ ವ್ಯಕ್ತಪಡಿಸಿದರು.

ಹೀಗೆ ಅವರು ತಮ್ಮ ಸಂಕಟ ತೋಡಿಕೊಳ್ಳುವ ಕಾಲಕ್ಕೆ ಸರಿಯಾಗಿ ಇತ್ತ ತಮ್ಮ ಹದಿನಾರನೇ ಬಜೆಟ್ ಮಂಡಿಸಿದ ಕರ್ನಾಟಕದ ಸಿಎಂ ಸಿದ್ದರಾಮಯ್ಯ ಚಕ್ರವ್ಯೂಹದಿಂದ ಬಚಾವಾಗುವ ಕುರುಹು ತೋರಿಸಿದ್ದಾರೆ. ಅಂದ ಹಾಗೆ, ಗ್ಯಾರಂಟಿ ಯೋಜನೆಗಳೆಂಬ ಚಕ್ರವ್ಯೂಹದಿಂದ ತುಂಬ ಸಂಕಟಕ್ಕೊಳಗಾದವರು ರಾಜ್ಯದ ಶಾಸಕರು. ಈ ಯೋಜನೆಗಳ ಕಾರಣದಿಂದ ತಮ್ಮ ಕ್ಷೇತ್ರಗಳಿಗೆ ಅನುದಾನ ಸಿಗದೆ ಹೋಗಿದ್ದರಿಂದ ಕಾಂಗ್ರೆಸ್ ಪಕ್ಷದ ಬಹುತೇಕ ಶಾಸಕರು ಬಂಡಾಯದ ಮನಸ್ಥಿತಿಗೆ ಬಂದಿದ್ದರು. ಹಾಗಂತಲೇ ಪಕ್ಷ ಅಧಿಕಾರಕ್ಕೆ ಬಂದಾಗಿನಿಂದ ಇಲ್ಲಿಯವರೆಗೆ ಪ್ರತಿ ಶಾಸಕಾಂಗ ಸಭೆಯಲ್ಲೂ ಗುರುಗುಡುತ್ತಿದ್ದ ಶಾಸಕರು, ಹಲವು ಮಂತ್ರಿಗಳ ಮೇಲೂ ಎರಗುತ್ತಿದ್ದರು. ಸಾಲದೆಂಬಂತೆ ಬಹುತೇಕ ಮಂದಿ ಗೋವಾದ ಮುಖ್ಯಮಂತ್ರಿ, ಬಿಜೆಪಿ ನಾಯಕ ಪ್ರಮೋದ್ ಸಾವಂತ್ ಅವರ ಲಿಂಕು ಸಾಧಿಸಿ, ''ಸೂಕ್ತ ಕಾಲದಲ್ಲಿ ನಾವು ನಿಮ್ಮೊಂದಿಗೆ ಬರಲು ಸಿದ್ಧ'' ಎಂದಿದ್ದರು.

ಹೀಗೆ ರಾಜ್ಯ ಕಾಂಗ್ರೆಸ್‌ನ ಬಹುತೇಕ ಶಾಸಕರು ತಮ್ಮ ಜತೆ ಕೈ ಜೋಡಿಸಿದ್ದರಿಂದ ದಿಲ್ಲಿಯ ಬಿಜೆಪಿ ನಾಯಕರು ಕರ್ನಾಟಕ ಸರಕಾರವನ್ನು ಉರುಳಿಸುವ ಕನಸು ಕಾಣುತ್ತಿದ್ದರು. ಅವರ ಈ ಕನಸಿಗೆ ರಾಜ್ಯ ಬಿಜೆಪಿಯಲ್ಲಿನ ಅನೈಕ್ಯತೆ ಅಡ್ಡಿಯಾಗಿದ್ದು ಒಂದು ಕಡೆಯಾದರೆ, ಮತ್ತೊಂದು ಕಡೆ ಈ ಬಾರಿಯ ಬಜೆಟ್ ಮೂಲಕ ಸಿದ್ದರಾಮಯ್ಯ ಭರ್ಜರಿ ಹೊಡೆತ ಕೊಟ್ಟಿದ್ದಾರೆ. ಅರ್ಥಾತ್, ಈ ಬಾರಿಯ ಬಜೆಟ್‌ನಲ್ಲಿ ರಾಜಧಾನಿ ಬೆಂಗಳೂರಿಗೆ ಎಂಟು ಸಾವಿರ ಕೋಟಿ ರುಪಾಯಿ ಕೊಟ್ಟಿರುವ ಸಿದ್ದರಾಮಯ್ಯ, ಹೆಚ್ಚುವರಿ ಬಜೆಟ್ ಮೂಲಕ ರಾಜ್ಯದ ಪ್ರತಿಯೊಬ್ಬ ಶಾಸಕರಿಗೂ ನಲವತ್ತರಿಂದ ಐವತ್ತು ಕೋಟಿ ರು. ಅನುದಾನ ಕೊಡಲು ಸಜ್ಜಾಗಿದ್ದಾರೆ. ಹೀಗೆ ಮಾಡುವ ಮೂಲಕ ರಾಜ್ಯದ ಪ್ರತಿಯೊಂದು ವಿಧಾನಸಭಾ ಕ್ಷೇತ್ರಗಳಲ್ಲಿ ಹಣ ಹರಿದಾಡುವಂತೆ ಮಾಡಲಿರುವ ಸಿದ್ದರಾಮಯ್ಯ ಎಲ್ಲ ಕ್ಷೇತ್ರಗಳ ಶಾಸಕರಲ್ಲಿ ನೆಮ್ಮದಿ ಮೂಡಿಸಿದ್ದಾರೆ.

ಅಂದ ಹಾಗೆ, ಪ್ರತಿ ವಿಧಾನಸಭಾ ಕ್ಷೇತ್ರಗಳಿಗೂ ಹಣ ಬಿಡುಗಡೆಯಾಗುವುದು ಎಂದರೆ, ಆ ಮೂಲಕ ಶಾಸಕರ ಶಕ್ತಿ ಹೆಚ್ಚಿಸುವುದೆಂದೇ ಅರ್ಥ. ಹೀಗೆ, ಪರದಾಡುತ್ತಿದ್ದವರಿಗೆ ಸಿದ್ದರಾಮಯ್ಯ ದುಡ್ಡು ಕೊಟ್ಟರೆ ಶಾಸಕರ ಅಸಮಾಧಾನ ತೊಲಗುತ್ತದೆ. ಅಷ್ಟೇ ಅಲ್ಲ, ಶಾಸಕರ ಕೈ ಬಲಪಡಿಸಲು ಸಿದ್ದರಾಮಯ್ಯ ಮುಂದಾಗಿದ್ದಾರೆ ಎಂದರೆ ಗ್ಯಾರಂಟಿಗಳ ಚಕ್ರವ್ಯೂಹದಿಂದ ಅವರು ಪಾರಾಗುವ ಲಕ್ಷಣ ತೋರಿದ್ದಾರೆ ಎಂದೇ ಅರ್ಥ.

## ರೇಣುಕಾಚಾರ್ಯ ವಿರುದ್ಧ ಕಿಡಿ

ಈ ಮಧ್ಯೆ ಮಾಜಿ ಸಚಿವ, ಯಡಿಯೂರಪ್ಪ ಬ್ರಿಗೇಡ್‌ನ ಸೇನಾನಿ ಎಂ.ಪಿ.ರೇಣುಕಾಚಾರ್ಯ ಅವರಿಗೆ ಷೋಕಾಸ್ ನೋಟಿಸ್ ಕೊಡಲು ಪಕ್ಷದ ವರಿಷ್ಠರು ನಿರ್ಧರಿಸಿದ್ದಾರಂತೆ. ಅಂದ ಹಾಗೆ, ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ವಿರುದ್ಧ ಯತ್ನಾಳ್ ಗ್ಯಾಂಗು ಹೋರಾಟ ನಡೆಸಿತಲ್ಲ? ಈ ಹೋರಾಟಕ್ಕೀಗ ಹೈಕಮಾಂಡ್ ಬ್ರೇಕ್ ಹಾಕಿದೆ. ಇದಕ್ಕೆ ಪೂರಕವಾಗಿ ಯತ್ನಾಳ್ ಅವರಿಗೆ ಷೋಕಾಸ್ ನೋಟಿಸ್ ನೀಡಿರುವ ಬಿಜೆಪಿ ವರಿಷ್ಠರು, ರಾಜ್ಯಾಧ್ಯಕ್ಷ ಹುದ್ದೆಯ ವಿಚಾರದಲ್ಲಿ ಇನ್ನೊಂದು ತಿಂಗಳು ಯಾರೂ ಚಕಾರವೆತ್ತಬೇಡಿ ಅಂತ ಸೂಚಿಸಿದ್ದರು.

ವಿಜಯೇಂದ್ರ ಅವರೇ ಪಕ್ಷಾಧ್ಯಕ್ಷ ಸ್ಥಾನದಲ್ಲಿ ಮುಂದುವರಿಯಬೇಕೋ ಅಥವಾ ಬೇರೆಯವರು ಈ ಜಾಗಕ್ಕೆ ಬಂದು ಕೂರಬೇಕೋ ಎಂಬುದನ್ನು ನಿರ್ಧರಿಸಲು ನಾವೇ ಸರ್ವೆ ಮಾಡಿ ರಿಪೋರ್ಟು ತರಿಸಿಕೊಳ್ಳುತ್ತೇವೆ. ಆ ರಿಪೋರ್ಟು ಯಾರ ಪರವಾಗಿದೆಯೋ, ಅವರೇ ಪಕ್ಷವನ್ನು ಮುನ್ನಡೆಸುತ್ತಾರೆ. ಅಲ್ಲಿಯವರೆಗೆ ಯಾರೂ ಗೊಂದಲ ಸೃಷ್ಟಿಸಬೇಡಿ ಅಂತ ಅಮಿತ್ ಶಾ ಅವರೇ ಸಿಗ್ನಲ್ಲು ನೀಡಿದ್ದರು. ಆದರೆ ಇಷ್ಟಾದ ನಂತರವೂ ವಿಜಯೇಂದ್ರ ಅವರ ಪರವಾಗಿ, ಯತ್ನಾಳ್ ಗ್ಯಾಂಗಿನ ವಿರುದ್ಧ ರೇಣುಕಾಚಾರ್ಯ ಅಬ್ಬರಿಸುತ್ತಿರುವ ರೀತಿಯು ಬಿಜೆಪಿ ವರಿಷ್ಠರ ಸಿಟ್ಟಿಗೆ ಕಾರಣವಾಗಿದೆ. ಸಾಲದೆಂಬಂತೆ ಯತ್ನಾಳ್ ಗ್ಯಾಂಗು ವರಿಷ್ಠರಿಗೆ ಮೆಸೇಜು ರವಾನಿಸಿ, ''ರೇಣುಕಾಚಾರ್ಯ ಇಷ್ಟೆಲ್ಲ ಕೂಗಾಡುತ್ತಿದ್ದಾರೆ. ಅವರ ಕೂಗಾಟಕ್ಕೆ ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ಸಪೋರ್ಟು ಇದೆ. ಆದರೆ ಇದನ್ನೆಲ್ಲ ಪರಿಗಣಿಸದ ನೀವು ಯತ್ನಾಳ್ ಅವರಿಗೆ ಮಾತ್ರ ನೋಟಿಸ್ ಕೊಟ್ಟಿದ್ದೀರಿ. ಇದ್ಯಾವ ನ್ಯಾಯ?'' ಅಂತ ಕೇಳಿದೆ. ಯಾವಾಗ ಅದು ಈ ಧರ್ಮಸೂಕ್ಷ್ಮದ ಮಾತನಾಡಿತೋ, ವರಿಷ್ಠರು ರೇಣುಕಾಚಾರ್ಯ ವಿರುದ್ಧ ಕೆಂಗಣ್ಣು ಬೀರಿದ್ದಾರೆ. ಮತ್ತಿದರ ಪರಿಣಾಮವಾಗಿ ಯತ್ನಾಳ್ ತರಹವೇ ರೇಣುಕಾಚಾರ್ಯ ಅವರಿಗೂ ಷೋಕಾಸ್ ನೋಟಿಸ್ ಜಾರಿಮಾಡಲು ಸಜ್ಜಾಗಿದ್ದಾರೆ.

**ಲಾಸ್ಟ್ ಸಿಪ್:** ಇನ್ನು ಬೆಂಗಳೂರಿನ ಕೆ.ಆರ್.ಪುರಂನ ಕಾಂಗ್ರೆಸ್ ಕ್ಯಾಂಡಿಡೇಟ್ ಒಬ್ಬರು ರಾಜಧಾನಿಯ ಪವರ್‌ಫುಲ್ ನಾಯಕರೊಬ್ಬರ ಬಳಿ ಹೋಗಿದ್ದರಂತೆ. ಹೀಗೆ ಹೋದವರು ಸ್ಥಳೀಯ ಶಾಸಕ, ಬಿಜೆಪಿಯ ಬೈರತಿ ಬಸವರಾಜು ಅವರ ವಿರುದ್ಧ ದೂರು ನೀಡಿದ್ದಾರೆ. ''ಸರ್, ಬೈರತಿ ಬಸವರಾಜು ಅವರ ಹೊಡೆತಕ್ಕೆ ಸ್ಥಳೀಯ ಕಾಂಗ್ರೆಸ್ ನಾಯಕರು ಸುಸ್ತಾಗಿ ಹೋಗಿದ್ದಾರೆ. ನೀವು ಏನಾದರೂ ಮಾಡಿ ಅವರ ನಟ್ಟು-ಬೋಲ್ಟು ಟೈಟು ಮಾಡಬೇಕು. ಇಲ್ಲದಿದ್ದರೆ ಮುಂದಿನ ಚುನಾವಣೆಯ ಹೊತ್ತಿಗೆ ನಾವು ಮೇಲೆದ್ದು ನಿಲ್ಲುವುದು ಕಷ್ಟ'' ಎಂದಾಗ ರಾಜಧಾನಿಯ ಪವರ್‌ಫುಲ್ ನಾಯಕರು, ''ಏನೇ ಇರಲಿ, ನೀವು ಬೈರತಿ ಬಸವರಾಜು ಅವರ ಜತೆ ಹೊಂದಿಕೊಂಡು ಹೋಗಿ'' ಎಂದಿದ್ದಾರೆ. ಈ ಮಾತು ಕೇಳಿ ಸ್ಥಳೀಯ ನಾಯಕರು ದಂಗುಬಡಿದು ನಿಂತರೆ, ಮಾತು ಮುಂದುವರಿಸಿದ ಪವರ್‌ಫುಲ್ ನಾಯಕರು, ''ನಾಳೆ ಸಿಎಂ ಆಗಲು ನನಗೆ ಶಾಸಕರ ಬೆಂಬಲ ಕಡಿಮೆಯಾದರೆ ಬೈರತಿ ಬಸವರಾಜು ನನ್ನ ಜತೆ ನಿಲ್ಲುತ್ತಾರೆ. ಹೀಗಿರುವಾಗ ಅವರೊಂದಿಗೆ ಮನಸ್ತಾಪ ಮಾಡಿಕೊಳ್ಳಬೇಡಿ ಹೋಗಿ'' ಎಂದಿದ್ದಾರೆ.

## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

# ಮನತಣಿಸಿದ ಬರಹಗಳು

ಮೋಹನ್ ವಿಶ್ವ ಅವರ 'ವೀಕೆಂಡ್ ವಿತ್ ಮೋಹನ್' ಅಂಕಣ (ಮಾ.8) ವಸ್ತುನಿಷ್ಠವಾಗಿ ಮೂಡಿಬಂದಿದೆ. ಕೆಲ ರಾಜಕೀಯ ಪಕ್ಷಗಳು ಶತಾಯಗತಾಯ ಅಧಿಕಾರಕ್ಕೆ ಬರಲು ಮೀಸಲಾತಿ ಎಂಬ ಅತಿಸೂಕ್ಷ್ಮ ವಿಚಾರವನ್ನು ಹೇಗೆ ದುರ್ಬಳಕೆ ಮಾಡಿಕೊಂಡಿವೆ ಎಂಬುದನ್ನು ಅಂಕಣಕಾರರು ತೆರೆದು ತೋರಿಸಿದ್ದಾರೆ. ಜತೆಗೆ, ಸಮಾಜದಲ್ಲಿ ಸೌಹಾರ್ದದಿಂದ ಬಾಳುವ ವಿಭಿನ್ನ ಜಾತಿ-ಧರ್ಮದ ಜನರ ಮಧ್ಯೆ ಕೆಲ ರಾಜಕಾರಣಿಗಳೇ ವಿಷಬೀಜ ಬಿತ್ತಿ ಮೋಜು ನೋಡುತ್ತಾರೆ ಅಂತ ಗೊತ್ತಾಯಿತು. ಮೀಸಲಾತಿಯನ್ನು ನೀಡುವುದೇ ಆದಲ್ಲಿ, ಜಾತಿ-ಧರ್ಮದ ಆಧಾರದಲ್ಲಿ ನೀಡದೆ, ಆರ್ಥಿಕವಾಗಿ ಹಿಂದುಳಿದವರಿಗೆ ಅಲ್ಪಾವಧಿವರೆಗೆ ನೀಡಿದರೆ, ಅದು ದೇಶದ ಸಮಗ್ರ ಅಭಿವೃದ್ಧಿಗೆ ಪೂರಕವಾಗಬಲ್ಲದು. ಸರಿಸುಮಾರು 145 ಕೋಟಿ ಜನರಿರುವ ನಮ್ಮ ದೇಶದಲ್ಲಿ ವಿದ್ವತ್ತಿಗೆ, ಪ್ರತಿಭೆಗೆ ಯಾವ ಕೊರತೆಯೂ ಇಲ್ಲ. ಕೊರತೆಯಿರುವುದು ಉತ್ತಮ ಶಿಕ್ಷಣವನ್ನು ಪಡೆಯುವ ವಿಷಯದಲ್ಲಿ. ಅದನ್ನು ಮುಕ್ತವಾಗಿ, ಉಚಿತವಾಗಿ, ಜಾತಿ-ಮತ ನೋಡದೆ ಸಕಲರಿಗೂ ಒದಗಿಸಿದಲ್ಲಿ ಭಾರತವು ಮತ್ತಷ್ಟು ಪ್ರಬುದ್ಧವಾಗಿ ಬೆಳೆಯುವುದರಲ್ಲಿ ಸಂಶಯವಿಲ್ಲ.

ಇನ್ನು, ಶ್ರೀವತ್ಸ ಜೋಶಿಯವರ 'ತಿಳಿರು ತೋರಣ' ಅಂಕಣವೂ (ಮಾ.9) ವಿಜ್ಞಾನದ ಆವಿಷ್ಕಾರಗಳ ಮಾಹಿತಿ ಭಂಡಾರವೇ ಆಗಿತ್ತು. 1964ರ ಆಗಸ್ಟ್ 19ರಂದು ಬಾಹ್ಯಾಕಾಶಕ್ಕೆ ಹಾರಿಸಿದ 'ಸಿಂಕಾಮ್-3' ಎಂಬ ಉಪಗ್ರಹದ ಕಲ್ಪನಾಕಾರ ಮತ್ತು ವಿಜ್ಞಾನ ಲೇಖಕ ಅರ್ಥರ್ ಚಾರ್ಲ್ಸ್ ಕ್ಲಾರ್ಕ್ ಅವರ ದೂರದರ್ಶಿತ್ವವನ್ನು ಮೆಚ್ಚಲೇಬೇಕು. ಇವರು ಪ್ರಪಂಚಕ್ಕೆ ವೈಜ್ಞಾನಿಕವಾಗಿ ಮುಂದಿನ 50 ವರ್ಷಗಳವರೆಗೆ ಸಿಗುವ ಅನುಕೂಲಗಳನ್ನು ಸಾಕಷ್ಟು ಮುಂಚೆಯೇ ಅಂದಾಜಿಸಿ/ಊಹಿಸಿ ಬರೆದಿಟ್ಟು ಉಪಕಾರ ಮಾಡಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ. ಜನಸಾಮಾನ್ಯರ ಬಗ್ಗೆ ವಿಜ್ಞಾನಿಗಳಿಗೆ ಇರುವ ಕಾಳಜಿ, ಆಪ್ತತೆ, ನಿಸ್ವಾರ್ಥ ಬುದ್ಧಿಗಳು ನಮ್ಮನ್ನು ಆಳುವ ಮತ್ತು ಆಳಲು ಹಂಬಲಿಸುವ ರಾಜಕೀಯ ಪಕ್ಷಗಳಿಗೂ ಇದ್ದಿದ್ದರೆ, ಜನರು ಇನ್ನಷ್ಟು ಸುಖ-ಸಮೃದ್ಧಿ, ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತಿತ್ತು. ದುರದೃಷ್ಟವಶಾತ್, ಇಂದಿಗೂ ನಾವು ಜಾತಿ-ಧರ್ಮ ಆಧರಿತ ಮೀಸಲಾತಿ, ಓಲೈಕೆ ರಾಜಕಾರಣದಂಥ ನಿಷ್ಪ್ರಯೋಜಕ ಸಂಗತಿಗಳಿಗೇ ಒಡ್ಡಿಕೊಂಡು ಒದ್ದಾಡುತ್ತಿದ್ದೇವೆ.

ಸರಿಸುಮಾರು 52-53 ವರ್ಷಗಳ ಹಿಂದೆ, 'ನಾಗರಹಾವು' ಚಿತ್ರದ ಚಿತ್ರೀಕರಣದ ವೇಳೆ ನಡೆದ ಸಾಕಷ್ಟು ಪ್ರಸಂಗಗಳನ್ನು ಯಥಾವತ್ ನಮ್ಮ ಕಣ್ಣ ಮುಂದಿರುವಂತೆ ಕಟ್ಟಿಕೊಟ್ಟಿದೆ 'ರಸದೌತಣ' ಅಂಕಣ (ಮಾ.9). ಸೋಜಿಗವೆಂದರೆ, ನಿರ್ದೇಶಕ ಪುಟ್ಟಣ್ಣ ಕಣಗಾಲರು 1972-73ರ ಕಾಲಘಟ್ಟದಲ್ಲೇ, ಈ ಚಿತ್ರದ ರಾಮಾಚಾರಿ ಪಾತ್ರಕ್ಕೆ 300 ತರುಣರನ್ನು ಸಂದರ್ಶನ (ಇಂದಿನ ಭಾಷೆಯಲ್ಲೇ ಹೇಳುವುದಾದರೆ 'ಆಡಿಷನ್') ಮಾಡಿದ್ದು! ಅವರ ಆ ಶ್ರಮದಿಂದಾಗಿ ವಿಷ್ಣುವರ್ಧನ ಎಂಬ ಅತ್ಯುತ್ತಮ ಕಲಾವಿದನನ್ನು ಕಾಣುವ ಸೌಭಾಗ್ಯ ನಮಗೆಲ್ಲ ಪ್ರಾಪ್ತವಾಯಿತು. ಮಿಕ್ಕಂತೆ, ಒನಕೆ ಓಬವ್ವನ ಪಾತ್ರವನ್ನು ಕಲ್ಪನಾ ಅವರು ನಿರಾಕರಿಸಿದ್ದು, ಜಯಂತಿಯವರನ್ನು ಪುಟ್ಟಣ್ಣನವರೇ ಒಪ್ಪಿಸಿದ್ದು ಹೀಗೆ ಅನೇಕ ಕಥೆ-ಉಪಕಥೆಗಳ ಹಿನ್ನೆಲೆಯ ಹುತ್ತದಿಂದ ಹೊರಬಂದ 'ನಾಗರಹಾವು' ಮುಂದೆ ಅನೇಕ ದಾಖಲೆಗಳನ್ನು ಬರೆದಿದ್ದು ಇತಿಹಾಸ. ಈ ಚಿತ್ರ ಮೊದಲು ಬಿಡುಗಡೆಯಾದಾಗ ನಾನಿನ್ನೂ ಧಾರವಾಡದಲ್ಲಿ 2ನೆಯ ತರಗತಿಯ ವಿದ್ಯಾರ್ಥಿ; 'ಕನ್ನಡನಾಡಿನ ವೀರರಮಣಿಯ, ಗಂಡುಭೂಮಿಯ ವೀರನಾರಿಯ..' ಹಾಡನ್ನು ಇಂದಿಗೂ ಕೇಳಿದರೆ ರೋಮಾಂಚನಗೊಳ್ಳುತ್ತೇನೆ, ನನ್ನ ಮನಸ್ಸು ಐದು ದಶಕದ ಹಿಂದಿನ ಧಾರವಾಡಕ್ಕೆ ಹಾರಿ ಹೋಗುತ್ತದೆ. ಒಳ್ಳೆಯ ಅಂಕಣಗಳನ್ನು ಸಾದರಪಡಿಸುತ್ತಿರುವ ವಿಶ್ವವಾಣಿ ಪತ್ರಿಕೆಗೆ ಒಂದು ದೊಡ್ಡ ಸಲಾಂ!

- ಲಕ್ಷ್ಮೀಕಾಂತ್ ಪಾಟೀಲ್, ಮೈಸೂರು

**ಓದುಗರ ಓಣಿಗೆ ಭೇಟಿ ಕೊಡಿ**
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

# ಪ್ರಪಂಚ ಆಗುತ್ತಿದೆಯೇ ಮನೆಯೊಂದು ಮೂರು ಬಾಗಿಲು?!

**ಒಂದು ಕಾಲಕ್ಕೆ ಚೀನಾ ಮತ್ತು ಕೆಲ ಮಟ್ಟಿಗೆ ಭಾರತವನ್ನೂ ಗುರಿಯಾಗಿಸಿಕೊಂಡು, ಭಯೋತ್ಪಾದನೆಯ ನಿರ್ಮೂಲನೆಯ ನೆಪದಲ್ಲಿ ಅಫ್ಘಾನಿಸ್ತಾನದೊಳಗೆ ನುಸುಳಿ ಅಲ್ಲಿನ ಸರಕಾರವನ್ನು ಬೀಳಿಸಿ ತನ್ನ ಪಾರಮ್ಯ ಸ್ಥಾಪಿಸಿಕೊಂಡು ಏಷ್ಯಾದಲ್ಲಿ ನೆಲೆ ಕಂಡುಕೊಂಡಿದ್ದು ಅಮೆರಿಕ. ಅಫ್ಘಾನಿಸ್ತಾನಕ್ಕೆ ಬೃಹತ್ ಆರ್ಥಿಕ ಮತ್ತು ಶಸ್ತ್ರಾಸ್ತ್ರ ನೆರವು ನೀಡುತ್ತಾ ಬಂದ ಅಮೆರಿಕ, ನೆರೆಯ ಚೀನಾ ಮತ್ತು ಭಾರತದ ವಿರೋಧದ ನಡುವೆಯೂ ತನ್ನ ನೆಲೆಯನ್ನು ಭದ್ರಮಾಡಿಕೊಂಡು, ಎರಡೂ ದೇಶಗಳ ಮೇಲೆ ಕಣ್ಣಿಡುತ್ತಾ ಪರಿಸ್ಥಿತಿಯನ್ನು ಪರೋಕ್ಷವಾಗಿ ನಿಯಂತ್ರಿಸಲು ಯತ್ನಿಸಿತು.**

ವಿಶ್ಲೇಷಣೆ

ರವೀ ಸಜಂಗದ್ದೆ
vveditoped@gmail.com

ಇಂಗ್ಲಿಷ್‌ನಲ್ಲಿ, 'ಯುದ್ಧ ಮತ್ತು ಪ್ರೀತಿಯ ವಿಚಾರದಲ್ಲಿ ಏನೇ ಮಾಡಿದರೂ ಅದೆಲ್ಲವೂ ಸಮಂಜಸ' ಎಂಬರ್ಥದ ನಾಣ್ನುಡಿಯೊಂದಿದೆ. ಪ್ರಪಂಚವನ್ನೇ ಗೆದ್ದು ಮೆರೆಯಬೇಕು, ಅದಾಗದಿದ್ದಲ್ಲಿ ಶತ್ರುವಿನ ಶತ್ರುವನ್ನು ಪೋಷಿಸಿ ಮೇಲುಗೈ ಸಾಧಿಸಬೇಕು ಎಂಬ ಉದ್ದೇಶದಿಂದ ಅಮೆರಿಕ, ಚೀನಾ ಮತ್ತು ರಷ್ಯಾ ದೇಶಗಳು ಕಳೆದ ಕೆಲ ದಶಕಗಳಿಂದ ಮುಸುಕಿನೊಳಗಿನ ಗುದ್ದಾಟ ನಡೆಸುತ್ತಿರುವುದು ವಿಶ್ವಕ್ಕೇ ಗೊತ್ತಿರುವ ಸಂಗತಿ. ಮೊದಲಿಗೆ ನೆರೆಹೊರೆಯ ಎರಡು ರಾಷ್ಟ್ರಗಳ ನಡುವಿನ ಗುದ್ದಾಟಕ್ಕೆ ಮತ್ತಷ್ಟು ಇಂಬು ಕೊಟ್ಟು, ಶತ್ರುವಿನ ಶತ್ರುವನ್ನು ಹತ್ತಿರ ಮಾಡಿಕೊಂಡು, ಹಣ ಮತ್ತು ಶಸ್ತ್ರಾಸ್ತ್ರಗಳ ನೆರವಿತ್ತು, ಪರಸ್ಪರ ಕಾದಾಡುವಂತಾಗುವ ಪರಿಸ್ಥಿತಿ ನಿರ್ಮಿಸುವುದು; ಕೆಲ ದಿನಗಳ ನಂತರ, ಮೂಲಭೂತ ಯೋಜನೆಯಾದ 'ಶತ್ರುವಿನ ನಾಶ' ಅಸಾಧ್ಯ ಮತ್ತು ತುಂಬಾ ದುಬಾರಿ ಎಂಬುದು ಮನವರಿಕೆಯಾದಾಗ, 'ಶಾಂತಿಸ್ಥಾಪನೆ', 'ಕದನವಿರಾಮ' ಎನ್ನುವ ಪ್ರಹಸನ. ಮಧ್ಯಸ್ಥಿಕೆ-ಮಾತುಕತೆ ಮೂಲಕ ತಾನು ವಿಶ್ವದ ಶಾಂತಿಯ ಹರಿಕಾರ ಎಂದು ಬಿಂಬಿಸಿಕೊಂಡು ಮತ್ತಷ್ಟು ಮೈಲೇಜ್ ಪಡೆಯುವಿಕೆ. ಈ ಕೆಟ್ಟ ಚಾಳಿಗಳನ್ನು ಅಮೆರಿಕ ಇನ್ನೂ ಮುಂದುವರಿಸಿದೆ. ತನ್ಮೂಲಕ ಜಗತ್ತಿನೆದುರು ತನ್ನ ದ್ವಂದ್ವನೀತಿಯನ್ನು ಮತ್ತೊಮ್ಮೆ ತೋರಿಸಿದೆ. ಇದೊಂಥರಾ ಯಾರಿಗೂ ಗೊತ್ತಾಗದಂತೆ ಮಗುವನ್ನು ಚಿವುಟಿ ಅಳುವಂತೆ ಮಾಡಿ, ನಂತರ ಆ ಮಗುವನ್ನು ಸಂತೈಸುವಂತೆ ಎಲ್ಲರೆದುರು ಪೋಸು ಕೊಡುವ ಗೀಳು! ರಷ್ಯಾ-ಉಕ್ರೇನ್ ನಡುವಿನ ಯುದ್ಧಕ್ಕೆ ಸಂಬಂಧಿಸಿ ಅಮೆರಿಕ ಸದ್ಯ ನಿರ್ವಹಿಸುತ್ತಿರುವ ಪಾತ್ರ, ತೋರುತ್ತಿರುವ ಧೋರಣೆ ಇದಕ್ಕೆ ತಾಜಾ ಉದಾಹರಣೆ! ಈ ಕುರಿತಾದ ಒಂದಿಷ್ಟು ವಿವರಗಳನ್ನು ಅರಿಯೋಣ.

ಒಂದು ಕಾಲಕ್ಕೆ ಚೀನಾ ಮತ್ತು ಕೆಲ ಮಟ್ಟಿಗೆ ಭಾರತವನ್ನೂ ಗುರಿಯಾಗಿಸಿಕೊಂಡು, ಭಯೋತ್ಪಾದನೆಯ ನಿರ್ಮೂಲನೆಯ ನೆಪದಲ್ಲಿ ಅಫ್ಘಾನಿಸ್ತಾನದೊಳಗೆ ನುಸುಳಿ ಅಲ್ಲಿನ ಸರಕಾರವನ್ನು ಬೀಳಿಸಿ ತನ್ನ ಪಾರಮ್ಯ ಸ್ಥಾಪಿಸಿಕೊಂಡು ಏಷ್ಯಾದಲ್ಲಿ ನೆಲೆ ಕಂಡುಕೊಂಡಿದ್ದು ಇದೇ ಅಮೆರಿಕ. ಅಫ್ಘಾನಿಸ್ತಾನಕ್ಕೆ ಬೃಹತ್ ಆರ್ಥಿಕ ಮತ್ತು ಶಸ್ತ್ರಾಸ್ತ್ರ ನೆರವು ನೀಡುತ್ತಾ ಬಂದ ಅಮೆರಿಕ, ನೆರೆಯ ಚೀನಾ ಮತ್ತು ಭಾರತದ ವಿರೋಧದ ನಡುವೆಯೂ ತನ್ನ ನೆಲೆಯನ್ನು ಭದ್ರಮಾಡಿಕೊಂಡು, ಎರಡೂ ದೇಶಗಳ ಮೇಲೆ ಕಣ್ಣಿಡುತ್ತಾ ಪರಿಸ್ಥಿತಿಯನ್ನು ಪರೋಕ್ಷವಾಗಿ ನಿಯಂತ್ರಿಸಲು ನಿರಂತರ ಯತ್ನಿಸಿತು. ಆದರೆ ಇವೆಲ್ಲಾ ಕಾರ್ಯಸಾಧುವಲ್ಲ ಎಂದು ಕ್ರಮೇಣ ಮನಗಂಡು, ತನ್ನ ಮಿಲಿಟರಿ ಪಡೆಯನ್ನು ವಾಪಸ್ ಕರೆಸಿಕೊಂಡಿತು. ಆಗ ನಡೆದ ಗಲಾಟೆಯಲ್ಲಿ ಅನೇಕರು ಹತರಾದರು. ಶಾಂತಿಸ್ಥಾಪನೆಯ ಹೆಸರಲ್ಲಿ ಅಮೆರಿಕ ಮಾಡಿದ್ದು ಶುದ್ಧ ಅಪಸವ್ಯವನ್ನೇ. ಉಗ್ರವಾದ ನಿರ್ಮೂಲನೆಯ ಹೆಸರಲ್ಲಿ ದಶಕಗಳಷ್ಟು ಸಮಯ ಮತ್ತು ಹಣವನ್ನು ವ್ಯಯಿಸಿ, ಕೊನೆಗೆ ಅಫ್ಘಾನಿಸ್ತಾನದ ಅಧಿಕಾರವನ್ನು ಅದೇ ಭಯೋತ್ಪಾದಕರ ಕೈಗೆ ಕೊಟ್ಟು ಅಲ್ಲಿಂದ ಹೇಡಿಯಂತೆ ಓಡಿತು ಅಮೆರಿಕ. ಇದರ ವ್ಯತಿರಿಕ್ತ ಪರಿಣಾಮವನ್ನು ಅಲ್ಲಿನ ಜನ ಈಗಲೂ ಅನುಭವಿಸುತ್ತಿದ್ದಾರೆ.

ಅಮೆರಿಕದ ದ್ವಂದ್ವನೀತಿ, ಅನೇಕ ವಿಚಾರಗಳಲ್ಲಿನ 'ಡಬಲ್ ಸ್ಟಾಂಡರ್ಡ್'ಗೆ ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು. ತನ್ನ ವ್ಯವಹಾರ ವ್ಯಾಪ್ತಿಗೆ ಹೊರತಾದ ಇತರ ಸಣ್ಣ, ಆರ್ಥಿಕವಾಗಿ ಅಷ್ಟೇನೂ ಬಲಾಢ್ಯವಲ್ಲದ ರಾಷ್ಟ್ರಗಳನ್ನು ಪೋಷಿಸಿ, ತನ್ಮೂಲಕ ತನ್ನ ಶತ್ರುರಾಷ್ಟ್ರಗಳ ಮೇಲೆ ಸವಾರಿ ಮಾಡಲೆತ್ನಿಸುವುದು ಅಮೆರಿಕದ ಚಾಳಿ; ಅಂತೆಯೇ, ಉಕ್ರೇನ್ ದೇಶಕ್ಕೆ ಕೆಲವು ವರ್ಷಗಳಿಂದ ನೆರವು ನೀಡುತ್ತಾ ಅದನ್ನು ರಷ್ಯಾದ ಎದುರು ಕಟ್ಟುವ ಕಸರತ್ತಿನಲ್ಲಿ ಅಮೆರಿಕ ವ್ಯಸ್ತವಾಗಿದೆ. ಈ ಗಾಳಕ್ಕೆ ಸಿಲುಕಿದ ಉಕ್ರೇನ್ ದೇಶವು ಅಮೆರಿಕ ಹೆಣೆದ ಬಲೆಯಲ್ಲಿ ಇರಲೂ ಆಗದೆ, ಹೊರಗೆ ಬರಲೂ ಆಗದೆ, ತನ್ನ ಗೋರಿಯನ್ನು ತಾನೇ ತೋಡಿಕೊಂಡು ಪತರಗುಟ್ಟುತ್ತಿದೆ. ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ, ಅಫ್ಘಾನಿಸ್ತಾನದಂತೆ ಉಕ್ರೇನ್ ದೇಶವನ್ನೂ ನಡುನೀರಿನಲ್ಲಿ ಬಿಡಲು ಅಮೆರಿಕ ಅಣಿಯಾದಂತೆ ಭಾಸವಾಗುತ್ತಿದೆ.

ಹಿಂದಿನ ಬೈಡೆನ್ ಸರಕಾರವು ರಷ್ಯಾವನ್ನು ಇಕ್ಕಟ್ಟಿಗೆ ಸಿಲುಕಿಸಲು, ಅಲ್ಲಿನ ತೈಲನಿಕ್ಷೇಪಗಳ ಉದ್ಯಮ ಮತ್ತು ಆದಾಯದ ಮೇಲೆ ಬರೆ ಎಳೆಯಲು, ತನ್ಮೂಲಕ ವಿಶ್ವದಲ್ಲಿನ ತನ್ನ ಸಾರ್ವಭೌಮತ್ವವನ್ನು ಹೆಚ್ಚಿಸಿಕೊಳ್ಳಲು ರಷ್ಯಾದೆದುರು ಉಕ್ರೇನ್ ದೇಶವನ್ನು ಎತ್ತಿಕಟ್ಟಿತು. ಪರಸ್ಪರ ಯುದ್ಧಕ್ಕೂ ಪ್ರೇರೇಪಿಸಿ ಅದರಲ್ಲಿ ಯಶ ಕಂಡಿತು. ಕಳೆದ 3 ವರ್ಷದಿಂದ ನಡೆಯುತ್ತಿರುವ ಈ ಯುದ್ಧದಲ್ಲಿ ಅಪಾರ ಸಾವು-ನೋವು, ಕಷ್ಟ-ನಷ್ಟಗಳು ಸಂಭವಿಸಿವೆ. ಅಮೆರಿಕವೇ ಈ ಎಲ್ಲ ದುರಂತಗಳ ನೇರ ಪ್ರಾಯೋಜಕ ಮತ್ತು ಏಕೈಕ ಹೊಣೆಗಾರ. ಆದರೆ, 'ಊರು ಕೊಳ್ಳೆ ಹೊಡೆದ ಮೇಲೆ ಕೋಟೆಬಾಗಿಲು ಹಾಕಿದರು' ಎಂಬ ಗಾದೆಯಂತೆ, ಎಲ್ಲವೂ ಧ್ವಂಸವಾದ ಮೇಲೆ ಈಗ ಕದನವಿರಾಮದ, ಶಾಂತಿಸ್ಥಾಪನೆಯ ಮಾತಾಡುತ್ತಿದೆ ಅಮೆರಿಕ. ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿಯನ್ನು ಶ್ವೇತಭವನಕ್ಕೆ ಕರೆಸಿ ಅಕ್ಷರಶಃ ಬೆದರಿಕೆ ಹಾಕಿ, ತಾವು ಹೇಳಿದಂತೆ ನಡೆದುಕೊಳ್ಳದಿದ್ದರೆ ಉಳಿಗಾಲವಿಲ್ಲ ಎಂದು ಧಮಕಿ ಹಾಕಿದ್ದಾರೆ ಅಮೆರಿಕದ ಅಧ್ಯಕ್ಷ ಟ್ರಂಪ್! ಉಕ್ರೇನನ್ನು ತಾನೇ ಪುಸಲಾಯಿಸಿ, ರಷ್ಯಾದೊಂದಿಗೆ ಯುದ್ಧಮಾಡಲು ಪ್ರೇರೇಪಿಸಿದ ಅಮೆರಿಕವು, ಈಗ ಯುದ್ಧ ನಿಲ್ಲಿಸುವಂತೆ ಉಕ್ರೇನ್ ಮೇಲೆ ಒತ್ತಡ ಹೇರಿ ರಷ್ಯಾವನ್ನು ಒಂದಷ್ಟು ಹತ್ತಿರ ಮಾಡಿಕೊಳ್ಳುವ, ಆ ಮೂಲಕ ಚೀನಾಕ್ಕೆ ಸೆಡ್ಡು ಹೊಡೆಯುವ ಆಲೋಚನೆ ಮಾಡಿರುವುದು ಮೇಲ್ನೋಟಕ್ಕೆ ತೋರುತ್ತದೆ.

ಉಕ್ರೇನ್ ಮೇಲೆ ಹತೋಟಿ ಸಾಧಿಸಲು ಅಮೆರಿಕ ಕಸರತ್ತು ಮಾಡುತ್ತಿರುವುದರ ಹಿಂದಿನ ಪ್ರಮುಖ ಕಾರಣವೆಂದರೆ, ಉಕ್ರೇನ್‌ನ ಉದ್ದಗಲಕ್ಕೂ ಇರುವ 37 ವಿಶಿಷ್ಟ ಮತ್ತು ಅಪರೂಪದ ಖನಿಜ ನಿಕ್ಷೇಪಗಳು. ಅಲ್ಲಿ ಲೀಥಿಯಂ, ಟೈಟಾನಿಯಂ, ಗ್ರಾಫೈಟ್, ಲಾಂಥನಂ, ಸೆರಿಯಂ, ಎರ್ಬಿಯಂ ಖನಿಜ ನಿಕ್ಷೇಪಗಳು ಹೇರಳವಾಗಿವೆ. ಆದರೆ ಈ ಪೈಕಿ ಹೆಚ್ಚಿನವು ಮತ್ತು ಅವುಗಳಿಂದಾಗುವ ಸರಬರಾಜು ಸದ್ಯಕ್ಕೆ ಚೀನಾದ ನಿಯಂತ್ರಣದಲ್ಲಿವೆ! 'ರಷ್ಯಾ ಜತೆಗಿನ ಯುದ್ಧ ಸ್ಥಗಿತ ಮತ್ತು ಉಕ್ರೇನಿನ ಖನಿಜಗಳನ್ನು ಕೊಳ್ಳುವ ಸಂಬಂಧದ ಒಪ್ಪಂದ'ಕ್ಕೆ ಸಹಿ ಮಾಡುವ ಸಂಬಂಧ ಝೆಲೆನ್ಸ್ಕಿ ಅವರನ್ನು ಟ್ರಂಪ್ ಸರಕಾರ ಶ್ವೇತಭವನಕ್ಕೆ ಆಹ್ವಾನಿಸಿತ್ತು. ಆದರೆ ಅಲ್ಲಿ ಒಂದಷ್ಟು ಏರುದನಿಯ ಮಾತುಕತೆ ನಡೆದು ವೈಮನಸ್ಸಿನಲ್ಲಿ ಪ್ರಹಸನ ಮುಗಿಯಿತು. ಟ್ರಂಪ್ ತಮ್ಮ ಕಚೇರಿಗೆ ಮತ್ತೊಂದು ದೇಶದ ಮುಖ್ಯಸ್ಥರನ್ನು ಆಹ್ವಾನಿಸಿ ಹೀಗೆ ನಡೆಸಿಕೊಂಡಿದ್ದು ರಾಜತಾಂತ್ರಿಕ ನೀತಿಯಡಿ ಸಮಂಜಸವಲ್ಲ.

ಚುನಾವಣಾ ವೇಳೆಯ ವಾಗ್ದಾನಗಳನ್ನು ಈಡೇರಿಸುವ ನಿಟ್ಟಿನಲ್ಲಿ ಟ್ರಂಪ್ ಕಾರ್ಯಪ್ರವೃತ್ತರಾದಂತೆ ಭಾಸವಾಗುತ್ತಿದೆ. ಎಲ್ಲಾ ವಾಗ್ದಾನಗಳು ಕಾರ್ಯಸಾಧ್ಯವಲ್ಲ ಎಂಬ ಅರಿವಿದ್ದರೂ, ಎಲ್ಲವನ್ನೂ ನೆರವೇರಿಸಿಯೇ ಸಿದ್ಧ ಎಂಬ ಧೋರಣೆಯನ್ನು ತಳೆದಿದೆ ಟ್ರಂಪ್ ಸರಕಾರ. 'ಅಮೆರಿಕದ ದುಡ್ಡು ಅನ್ಯದೇಶಗಳ ಉದ್ಧಾರಕ್ಕೆ ವಿನಿಯೋಗವಾಗುವುದು ನಿಲ್ಲಬೇಕು ಮತ್ತು ಪರದೇಶಗಳಿಗೆ ನೀಡಿದ ಆರ್ಥಿಕ ನೆರವನ್ನು ಅವುಗಳಿಂದ ವಸೂಲು ಮಾಡಬೇಕು', 'ಅಮೆರಿಕದಲ್ಲಿ ಅಮೆರಿಕನ್ನರಿಗೆ ಮೊದಲ ಆದ್ಯತೆಯ ಮೇಲೆ ಉದ್ಯೋಗ ಸಿಗಬೇಕು', 'ಪ್ರಪಂಚದೆಲ್ಲೆಡೆಯ ಯುದ್ಧಗಳನ್ನು ನಿಲ್ಲಿಸಬೇಕು', 'ನ್ಯಾಟೋ ಶಾಂತಿ ಒಪ್ಪಂದದ ವಿಸರ್ಜನೆ' ಹೀಗೆ ತಮ್ಮ ವಾಗ್ದಾನಗಳ ಜಾರಿಗೆ ಟ್ರಂಪ್ ಕಾರ್ಯಪ್ರವೃತ್ತರಾಗಿರುವುದರಿಂದ, ಇತರ ದೇಶಗಳಿಂದ ಒಂದಷ್ಟು ಸದ್ದು, ಪರ-ವಿರೋಧದ ನಿಲುವುಗಳು ವ್ಯಕ್ತವಾಗುತ್ತಿವೆ. ಇತರ ದೇಶಗಳ ನಡುವಿನ ಭೂರಾಜಕೀಯದ ವಿಷಯದಲ್ಲಿ ಮೂಗು ತೂರಿಸಿ, ಒಂದು ಕಾಲಕ್ಕೆ ತಾನೇ ರೂಪಿಸಿದ್ದ ಒಪ್ಪಂದ ಮತ್ತು ನಿಲುವುಗಳಿಗೆ ಸಂಪೂರ್ಣ ವ್ಯತಿರಿಕ್ತ ರೀತಿಯಲ್ಲಿ ಟ್ರಂಪ್ ಸರಕಾರ ನಡೆದುಕೊಳ್ಳುತ್ತಿರುವುದರಿಂದಾಗಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜತಾಂತ್ರಿಕ ಸಮನ್ವಯ ಮತ್ತು ಬಾಂಧವ್ಯ ಹದಗೆಡುತ್ತಿದೆ.

ಉಕ್ರೇನ್ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ, ತನ್ನ ವ್ಯಾಪ್ತಿಯಲ್ಲಿ ಅನೇಕ ಕಸರತ್ತುಗಳನ್ನು ನಡೆಸುತ್ತಿದೆ, ಅಮೆರಿಕದ ಜತೆಗಿನ ಸಂಬಂಧ ಒಂದಷ್ಟು ಹಳಸುತ್ತಿದ್ದಂತೆ ಇತರ ದೇಶಗಳ ನೆರವನ್ನು ಯಾಚಿಸುತ್ತಿದೆ. ಇದಕ್ಕೆ ಸ್ಪಂದಿಸಿರುವ ಬ್ರಿಟನ್ ದೇಶವು ಉಕ್ರೇನ್‌ಗೆ 2 ಮಿಲಿಯನ್ ಡಾಲರ್ ನೆರವನ್ನು ಘೋಷಿಸಿದೆ. ಈ ಅನುದಾನದಿಂದ 5,000 ರಕ್ಷಣಾ ಕ್ಷಿಪಣಿಗಳನ್ನು ಉಕ್ರೇನ್ ಖರೀದಿಸಬಹುದು! ಶ್ವೇತಭವನದಲ್ಲಿ ಝೆಲೆನ್ಸ್ಕಿ ಅವರನ್ನು ಟ್ರಂಪ್ ಸರಕಾರ ಅವಮಾನಿಸಿದ ಬಳಿಕ ಉಕ್ರೇನ್ ಬೆನ್ನಿಗೆ ನಿಂತಿರುವ ಬ್ರಿಟನ್ ಮತ್ತು ಐರೋಪ್ಯ ರಾಷ್ಟ್ರಗಳ ನಾಯಕರು, ಅಮೆರಿಕ ಮತ್ತು ರಷ್ಯಾಕ್ಕೆ ಒಂದಷ್ಟು ಎಚ್ಚರಿಕೆ ಸಂದೇಶಗಳನ್ನು ರವಾನಿಸಿದ್ದಾರೆ. ಒಂದೊಮ್ಮೆ ಸದ್ಯದ ಕದನವಿರಾಮ ಒಪ್ಪಂದವನ್ನು ರಷ್ಯಾ ಕಡೆಗಣಿಸಿ ದಾಳಿಗೆ ಮುಂದಾದರೆ, ತಕ್ಕ ಪ್ರತಿದಾಳಿ ನಡೆಸಲು ಉಕ್ರೇನ್ ದೇಶವನ್ನು ಸನ್ನದ್ಧವಾಗಿಸುವುದು ಈ ರಾಷ್ಟ್ರಗಳ ಅಜೆಂಡಾ! ಒಟ್ಟಿನಲ್ಲಿ, ಪಕ್ಕದ ಮನೆಗೆ ಬಿದ್ದ ಬೆಂಕಿಯಲ್ಲಿ ಚಳಿ ಕಾಯಿಸಿಕೊಳ್ಳಲು ಬ್ರಿಟನ್ ಮತ್ತು ಐರೋಪ್ಯ ರಾಷ್ಟ್ರಗಳೂ ಅಖಾಡಕ್ಕಿಳಿದಿವೆ!

'ಅಪ್ಪ-ಅಮ್ಮನ ಜಗಳದಲಿ ಕೂಸು ಬಡವಾಯಿತು' ಎಂಬ ಮಾತಿನಂತೆ, ಸಬಲರ ಮೇಲಾಟದ ಪಟ್ಟುಗಳು, ವ್ಯೂಹಾತ್ಮಕ ತಂತ್ರ-ಪ್ರತಿತಂತ್ರಗಳ ಆಟಾಟೋಪಗಳ ನಡುವೆ ಶಾಂತಿ-ಸಂಯಮ-ಮಾನವೀಯತೆಗಳು ಬಡಕಲಾಗುತ್ತಿರುವುದು ಈ ಶತಮಾನದ ದುರಂತ. ಯಾವುದೇ ದೇಶದ ಜನಸಾಮಾನ್ಯರಿಗೆ ಯುದ್ಧ ಬೇಡವೇ ಬೇಡ, ಅದು ಅಯಾಚಿತ ಹೇರಿಕೆ. ರಾಜತಾಂತ್ರಿಕ ಬಾಂಧವ್ಯಗಳ ಸಮತೋಲನ ಹದಗೆಟ್ಟು ಇಡೀ ಪ್ರಪಂಚವೇ ವಿಕ್ಷಿಪ್ತ ಕಾಲಘಟ್ಟದೆಡೆಗೆ ಅಡಿಯಿಡುತ್ತಿರುವಂತೆ ಸದ್ಯಕ್ಕೆ ಭಾಸವಾಗುತ್ತಿದೆ. ಈ ಮೇಲಾಟದ ಹೋರಾಟ ಜಗದಗಲ ಆತಂಕ ಮೂಡಿಸಿದೆ. ಭಾರತವು 'ವಿಶ್ವದೆಲ್ಲೆಡೆ ಶಾಂತಿ ನೆಲೆಸುವಂತೆ ಮಾಡುವ' ಏಕೈಕ ಕಾರ್ಯಸೂಚಿಯೊಂದಿಗೆ ಮುಂದಾಳತ್ವ ವಹಿಸಿಕೊಂಡು, ಈ ಕಲುಷಿತ ವಾತಾವರಣವನ್ನು ತಿಳಿಗೊಳಿಸಲು ಇದು ಸುಸಮಯ! ಅದು ಆದಷ್ಟು ಬೇಗ ಕೈಗೂಡಲಿ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

## ಭಟ್ಟರ್ ಸ್ಕಾಚ್

- **ನರಸಿಂಗರಾವ್, ಮೈಸೂರು**
ಭಟ್ರೇ, ಗಿರ್ ಸಫಾರಿಗೆ ಹೋಗಿದ್ದ ಮೋದಿ ಅರಣ್ಯಾಧಿಕಾರಿಗಳ ಜತೆ ಫೋಟೋ ತೆಗೆಸಿಕೊಳ್ಳದೇ ಸಿಂಹದ ಜತೆ ಫೋಟೋ ತೆಗೆಸಿಕೊಂಡರಲ್ಲ?
– **ಎಷ್ಟಾದರೂ ಪುರುಷಸಿಂಹ ವನಸಿಂಹ ಸ್ನೇಹಿತರಲ್ಲವೇ?**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಔರಂಗಜೇಬ ತನ್ನ ಅಪ್ಪ ಶಹಜಹಾನನಂತೆ ಯಾಕೆ ತಾಜ್ ಮಹಲ್ ಕಟ್ಟಲಿಲ್ಲ?
– **ಆಗ ಅವನ ಜೇಬು ಖಾಲಿ ಇತ್ತಲ್ಲ!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ನೀವು ಕ್ಷಮೆ ಕೇಳುವಂಥ ಯಾವ ತಪ್ಪನ್ನು ಮಾಡಿದ್ದೀರಿ?
– **ಒಮ್ಮೊಮ್ಮೆ ಬೇರೆಯವರ ಸಮಾಧಾನಕ್ಕಾಗಿ ಕ್ಷಮೆ ಕೇಳಬೇಕಾಗುತ್ತದೆ!**

- **ಹರೀಶ ಭಟ್, ಮಂಗಳೂರು**
ಭಟ್ರೇ, ಹುಟ್ಟುವಾಗ ಇರುವುದಕ್ಕಿಂತ ಹೆಚ್ಚು ಸುಂದರವಾಗಿ ಮಾರ್ಪಡಲು ಸಾಧ್ಯವಾ?
– **ದಿನಾಲೂ ನಿನ್ನ ಮೇಕಪ್ ತಿಂದು ಪರೀಕ್ಷಿಸಬೇಕಿತ್ತು!**

- **ಗೋವಿಂದ ಕಬ್ಬೂರು, ಧಾರವಾಡ**
ಭಟ್ರೇ, ಹೆಂಗಸರನ್ನು ಹೆಚ್ಚು ಹೊಗಳಬಾರದು ಅಂತಾರಲ್ಲ?
– **ಆಗ ಅವರು ತಮ್ಮನ್ನು ತೆಗಳುತ್ತಿದ್ದಾರೆಂದು ಭಾವಿಸುತ್ತಾರೆ!**

- **ಸುಧಾ ಹರೀಶ, ತುಮಕೂರು**
ಭಟ್ರೇ, ಕೆಲವರು ಇದ್ದಕ್ಕಿದ್ದಂತೆ ಸುಮ್ಮನಾಗುತ್ತಾರೆ ಯಾಕೆ?
– **ಹೊಸ ಸ್ಕೆಚ್ ಹಾಕುವ ಮುನ್ನ ಮೌನವಾಗಿರುತ್ತಾರೆ ಅಷ್ಟೇ, ಉದಾ: ಪ್ರಕಾಶ ರೈ!**

- **ಶ್ರೀಧರ ಸಕೀನಹಳ್ಳಿ, ಕುಣಿಗಲ್**
ಭಟ್ರೇ, ಎಣ್ಣೆಗೆ ಯಾಕೆ ಎಲ್ಲರೂ ಮಹತ್ವ ಕೊಡ್ತಾರೆ?
– **ಸಲಾಡ್ ತಿಂದು ಸಾಧಿಸಿದವರು ಯಾರಿದ್ದಾರೆ ಹೇಳು?!**

- **ರುದ್ರೇಶ ಪಟ್ಟಣ, ಧಾರವಾಡ**
ಭಟ್ರೇ, ಮೂರ್ಖತನಕ್ಕೆ ಗಡಿ ಇಲ್ಲ ಅಂತಾರಲ್ಲ?
– **ನಿಜ, ಆದರೆ ಅದು ಯಾರನ್ನಾದರೂ ಪರಿಚಯ ಮಾಡಿಕೊಳ್ಳಬಲ್ಲದು!**

- **ಕೆ.ಜಿ.ರವಿ, (ಇಮೇಲ್ ಮೂಲಕ)**
ಭಟ್ರೇ, ಕೆಟ್ಟ ಹವಾಮಾನ ಅನ್ನೋದು ಇಲ್ಲ ಅಂತಾರಲ್ಲ?
– **ಹೂಂ.. ಕೆಟ್ಟದಾಗಿರೋದು ಆಗ ನಮ್ಮ ಡ್ರೆಸ್ಸಿಂಗ್ ಅಷ್ಟೇ!**

- **ಕಾವೇರಿ ಉಪ್ಪೂರು, ಮಂಗಳೂರು**
ಭಟ್ರೇ, ಯಶಸ್ಸಿನ ದಾರಿಯನ್ನು ನೋಡಿದ್ದೀರಾ?
– **ಹೂಂ.. ಅದು ಯಾವತ್ತೂ ನಿರ್ಮಾಣ ಹಂತದಲ್ಲಿಯೇ ಇರುತ್ತದೆ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಜಪಾನಿಯರನ್ನು ನೋಡಿ, ನಮ್ಮ ಜನ ಕಲಿಯಬೇಕಾದ ಪಾಠವೇನು?
– **ನಮ್ಮ ಜನ ನೋಡುತ್ತಾರೆ, ಆದರೆ ಪಾಠ ಕಲಿಯುವುದಿಲ್ಲ!**

# ವಿನಾಕಾರಣ ಜೈಲಿನಲ್ಲಿ ಬಾಡಿದ ಸ್ನೇಹಲತೆ

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

1970ರಲ್ಲಿ ಕನ್ನಡ ಚಿತ್ರ ರಂಗದಲ್ಲಷ್ಟೇ ಅಲ್ಲ, ರಾಷ್ಟ್ರವುಟ್ಟದಲ್ಲೂ ಸುದ್ದಿ ಮಾಡಿದ ಚಲನಚಿತ್ರ 'ಸಂಸ್ಕಾರ'. ಆ ವರ್ಷ ಇದು ರಾಷ್ಟ್ರ ಪ್ರಶಸ್ತಿಗೂ ಭಾಜನವಾಗಿತ್ತು. ಕನ್ನಡದ ಕೆಲ ಘಟಾನುಘಟಿ ಚಿಂತಕರು, ಲೇಖಕರು ಈ ಚಿತ್ರದಲ್ಲಿ ಪಾಲ್ಗೊಂಡಿದ್ದರು. ಯು.ಆರ್.ಅನಂತ ಮೂರ್ತಿಯವರ ಕಥೆಯನ್ನು ಆಧರಿಸಿ ನಿರ್ಮಾಣ ಗೊಂಡ ಈ ಚಿತ್ರದಲ್ಲಿ ಗಿರೀಶ್ ಕಾರ್ನಾಡ್ ಸಂಭಾಷಣೆಯನ್ನು ಬರೆದು ಅಭಿನಯವನ್ನೂ ಮಾಡಿದ್ದರು. ಅವರೊಂದಿಗೆ ಪಿ. ಲಂಕೇಶ್ ಕೂಡ ಅಭಿನಯಿಸಿದ್ದರು. ಪಟ್ಟಾಭಿರಾಮ ರೆಡ್ಡಿ ಚಿತ್ರದ ನಿರ್ಮಾಪಕರೂ, ನಿರ್ದೇಶಕರೂ ಆಗಿದ್ದರು. ಆದರೆ ಈ ಲೇಖನ ಇವರ್‍ಯಾರ ಕುರಿತಾಗಿಯೂ ಅಲ್ಲ, ಆ ಸಿನಿಮಾದ ಕುರಿತಾಗಿಯೂ ಅಲ್ಲ, ಆ ಚಲನಚಿತ್ರದ ನಾಯಕಿಯ ಕುರಿತಾದದ್ದು.

1932ರಲ್ಲಿ ಅವಳು ಹುಟ್ಟಿದಾಗ ಭಾರತ ದೇಶ ಇನ್ನೂ ಬ್ರಿಟಿಷರ ಆಳ್ವಿಕೆಯಲ್ಲಿತ್ತು. ಸಾಲದು ಎಂಬಂತೆ, ಮನೆಯಲ್ಲಿ ಬೇಕಾದಷ್ಟು ಬಡತನವೂ ಇತ್ತು. ದೊಡ್ಡವಳಾಗುತ್ತಿದ್ದಂತೆ, ಬ್ರಿಟಿಷರು ಭಾರತೀಯರಿಗೆ ನೀಡುವ ಕಿರುಕುಳ, ಅದರಿಂದ ತನ್ನ ಸುತ್ತಮುತ್ತಲಿನ ಜನರು ಪಡುತ್ತಿರುವ ಕಷ್ಟ, ಆಪ್ತರ ನೋವು, ದುಃಖ ಇತ್ಯಾದಿ ಸಂಗತಿಗಳನ್ನೆಲ್ಲ ನೋಡುತ್ತಾ–ನೋಡುತ್ತಾ ಅವಳ ಮನಸ್ಸು ಕೂಡ ದಿನದಿನವೂ ಕಲ್ಲಾಗತೊಡಗಿತ್ತು. ಆವಳು ಒಳಗೊಳಗೇ ಕುದಿಯುತ್ತಿದ್ದಳು. ಅವಳ ಕಲ್ಲು ಮನಸ್ಸು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಅಣಿಯಾಗುತ್ತಿತ್ತು.

ಹೋರಾಟದ ಮೊದಲನೆಯ ಹೆಜ್ಜೆ ಎಂಬಂತೆ, ಸಣ್ಣ ವಯಸ್ಸಿನಲ್ಲಿಯೇ ಭಾರತೀಯ ಉಡುಗೆಯಾದ ಸೀರೆ ಉಡಲು ಆರಂಭಿಸಿದಳು. ಕೈಗೆ ಬಳೆ, ಕಿವಿಗೆ ಓಲೆ, ಮೂಗುತಿ ತೊಡುತ್ತಿದ್ದಳು. ಹಣೆಗೆ ದೊಡ್ಡ ಕುಂಕುಮ ಇಟ್ಟುಕೊಳ್ಳುತ್ತಿದ್ದಳು. ಸಾಲದು ಎಂಬಂತೆ, ತನ್ನ ಕ್ರಿಶ್ಚಿಯನ್ ಹೆಸರನ್ನೂ ಬದಲಾಯಿಸಿ, 'ಸ್ನೇಹಲತಾ' ಎಂದು ಇಟ್ಟುಕೊಂಡಳು. ತನ್ನ ಬಾಲ್ಯದ ದಿನಗಳಲ್ಲೇ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಾಗವಹಿಸುತ್ತಿದ್ದಳು. ನಾಟಕ ಅವಳ ಹೋರಾಟದ ಮಾಧ್ಯಮವಾಯಿತು. ನಾಟಕವಾದರೂ ಎಂಥದ್ದು? ದೇಶಭಕ್ತಿ, ರಾಷ್ಟ್ರೀಯತೆಯ ಕುರಿತಾದದ್ದು.

ಈ ನಡುವೆ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಬೆಳೆದು ದೊಡ್ಡವರಾಗಿದ್ದ ಸ್ನೇಹಲತಾ ನಾಟಕದಲ್ಲಿ ಅಭಿನಯಿಸುವುದನ್ನು ಮುಂದುವರಿಸಿದ್ದರು. ನಾಟಕ ಅವರಿಗೆ ಆಸಕ್ತಿಯೂ, ಪ್ರೀತಿಯೂ, ಹೊಟ್ಟೆಪಾಡೂ ಆಗಿತ್ತು. 1960ರಲ್ಲಿ 'ದಿ ಮದ್ರಾಸ್ ಪ್ಲೇಯರ್ಸ್' ನಾಟಕ ತಂಡ ರಚನೆಯಾದ ಸಂದರ್ಭದಲ್ಲಿ ಸ್ನೇಹಲತಾ ಕೂಡ ಕೈಜೋಡಿಸಿದರು. ಆ ನಾಟಕ ಕಂಪನಿ ಸುಮಾರು ಐವತ್ತು ವರ್ಷ ನಡೆಯಿತು. 2010ರಲ್ಲಿ ಕಂಪನಿ ಮುಚ್ಚಿಹೋಗುವುದಕ್ಕೂ ಮೊದಲು ಸುಮಾರು ಇನ್ನೂರ ಐವತ್ತಕ್ಕೂ ಹೊಸ ನಾಟಕವನ್ನು ತಂಡದವರು ರಂಗಕ್ಕೆ ತಂದಿದ್ದರು.

ತಂಡದಲ್ಲಿರುವಾಗ ಸ್ನೇಹಲತಾ ಕಥೆ ಬರೆಯುವುದು, ಸಂಭಾಷಣೆ ಹೆಣೆಯುವುದು, ನಾಟಕಗಳನ್ನು ನಿರ್ದೇಶಿಸುವುದು, ನಾಟಕಕ್ಕೆ ಬೇಕಾದ ವಸ್ತುಗಳನ್ನು ಹೊಂದಿಸುವುದು ಇತ್ಯಾದಿಗಳಲ್ಲೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಆ ತಂಡದ ನಾಟಕವನ್ನು ನೋಡಲು ತೆಲುಗು ಮತ್ತು ಕನ್ನಡದ ನಿರ್ಮಾಪಕರಾದ ಪಟ್ಟಾಭಿರಾಮ ರೆಡ್ಡಿ ಕಾಯಮ್ಮಾಗಿ ಬರುತ್ತಿದ್ದರು. ಅವರು ತಮ್ಮ ಸಿನಿಮಾಕ್ಕೆ ಬಹುತೇಕ ಕಲಾವಿದರನ್ನು ಈ ನಾಟಕ ತಂಡದಿಂದಲೇ ಆಯ್ದುಕೊಳ್ಳುತ್ತಿದ್ದರು. ಅಲ್ಲಿಯೇ ಸ್ನೇಹಲತಾ ಮತ್ತು ಪಟ್ಟಾಭಿರಾಮ್ ಒಬ್ಬರಿಗೊಬ್ಬರು ಪರಿಚಿತರಾದರು. ಮಾಮೂಲಿ ಸಿನಿಮಾದ ಕಥೆಯಂತೆಯೇ ಅವರಿಬ್ಬರ ಜೀವನದಲ್ಲಿಯೂ ನಡೆಯಿತು. ಪರಿಚಯ ಪ್ರೇಮಕ್ಕೆ ತಿರುಗಿ, ಎರಡೂ ಪರಿವಾರದವರ ವಿರೋಧದ ನಡುವೆ ಇಬ್ಬರ ಮದುವೆಯೂ ಆಯಿತು. ಆದರೆ, ಸಾಮಾನ್ಯವಾಗಿ ಮದುವೆಯ ನಂತರ ನಟಿಯರು ಅಭಿನಯದಿಂದ ದೂರ ಉಳಿದು ಮಕ್ಕಳು, ಮನೆ ನೋಡಿಕೊಳ್ಳುವ ಕಾಲದಲ್ಲಿ, ಸ್ನೇಹಲತಾ ಮದುವೆಯ ನಂತರ ಸಿನಿಮಾಗಳಲ್ಲಿ ಅಭಿನಯಿಸಲು ಆರಂಭಿಸಿದರು.

ಸ್ನೇಹಲತಾ ಅಭಿನಯದ ಬಹುತೇಕ ಸಿನಿಮಾಗಳಿಗೆ ಪತಿ ಪಟ್ಟಾಭಿರಾಮ್ ರೆಡ್ಡಿಯವರೇ ನಿರ್ಮಾಪಕರಾಗಿರುತ್ತಿದ್ದರು. ಮೊದಲಿಂದಲೂ ಸಮಾಜದಲ್ಲಿರುವ ಪಿಡುಗು, ಅನಿಷ್ಟಗಳ ವಿರುದ್ಧ ಹೋರಾಟ ಮಾಡಿಕೊಂಡು ಬಂದ ಸ್ನೇಹಲತಾಗೆ ಅಂಥ ವಸ್ತುಗಳೇ ಹೆಚ್ಚು ಇಷ್ಟವಾಗುತ್ತಿದ್ದವು. 'ಸಂಸ್ಕಾರ' ಅದರ ಪರಿಣಾಮವಾಗಿಯೇ ಹುಟ್ಟಿಕೊಂಡ ಸಿನಿಮಾ. ಆ ಸಿನಿಮಾ ತಯಾರಾದರೂ ನಾಲ್ಕು ವರ್ಷಗಳ ಕಾಲ ಬಿಡುಗಡೆಯ ಭಾಗ್ಯ ಒದಗಿಬಂದಿರಲಿಲ್ಲ. ಮದ್ರಾಸ್ ಸೆನ್ಸಾರ್ ಮಂಡಳಿ ಚಲನಚಿತ್ರ ಪ್ರದರ್ಶನಕ್ಕೆ ಪರವಾನಗಿ ನೀಡದಿದ್ದಾಗ, ನ್ಯಾಯಾಲಯದ ಮೆಟ್ಟಿಲೇರಿ ಅನುಮತಿ ಪಡೆಯುವಾಗ ನಾಲ್ಕು ವರ್ಷಗಳೇ ಸಂದುಹೋಗಿದ್ದವು.

ಒಮ್ಮೆ ಚಿತ್ರ ತೆರೆಗೆ ಬಂದದ್ದೇ ತಡ, ಅದಕ್ಕೆ ಒಂದರ ಹಿಂದೆ ಒಂದರಂತೆ ಪ್ರಶಸ್ತಿಗಳ ಸರಮಾಲೆ ಒದಗಿಬಂದವು. ಆಂಧ್ರದ ಮೂಲೆಯಲ್ಲಿ ಹುಟ್ಟಿದ್ದ ಬಡ ಹುಡುಗಿ ಸ್ನೇಹಲತಾ ರಾಷ್ಟ್ರ ಮಟ್ಟದ ನಟಿಯಾಗಿ ಮಾತ್ರವಲ್ಲ, ಸಾಮಾಜಿಕ ಕಾರ್ಯಕರ್ತೆಯಾಗಿಯೂ ಬೆಳೆದು ನಿಂತರು.

ಇಂತಿರ್ಪ ದಿನಗಳಲ್ಲಿ ಸ್ನೇಹಲತಾ ಅವರಿಗೆ ಜಾರ್ಜ್ ಫರ್ನಾಂಡಿಸ್ ಅವರ ಪರಿಚಯವಾಯಿತು. ಯೆಸ್, ಮೂಲತಃ ಕರ್ನಾಟಕದವರಾಗಿದ್ದು, ಮುಂಬೈಗೆ ಹೋಗಿ, ಅಲ್ಲಿಯ ಕಾರ್ಮಿಕ ಮುಖಂಡರಾಗಿ, ಮುಂದೆ ಉತ್ತರ ಭಾರತಕ್ಕೆ ಹೋಗಿ, ಅದರಲ್ಲೂ ಬಿಹಾರದಲ್ಲಿ ತಮ್ಮ ನೆಲೆಯನ್ನು ಸ್ಥಾಪಿಸಿಕೊಂಡು, ನಮ್ಮ ದೇಶದ ರೈಲ್ವೆ ಮಂತ್ರಿಯಾಗಿಯೂ, ರಕ್ಷಣಾಮಂತ್ರಿಯಾಗಿಯೂ ಹೆಸರು ಮಾಡಿದ ಜಾರ್ಜ್ ಫರ್ನಾಂಡಿಸ್. ಆದರೆ ಅವರೊಂದಿಗಿನ ಪರಿಚಯವೇ ಮುಂದೊಂದು ದಿನ ತನ್ನ ದಾರುಣ ಸ್ಥಿತಿಗೆ ಕಾರಣವಾಗಬಹುದೆಂದು ಆ ಕ್ಷಣದಲ್ಲಿ ಸ್ನೇಹಲತಾ ಅವರಿಗೆ ಅರಿವಿರಲಿಲ್ಲ.

25 ಜೂನ್ 1975ರವರೆಗೂ ಸ್ನೇಹಲತಾ ಜೀವನದಲ್ಲಿ ಎಲ್ಲವೂ ಸರಿಯಾಗಿ ಇತ್ತು. ಆ ದಿನ, ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯನ್ನು ಘೋಷಿಸಿದರು. ತುರ್ತು ಪರಿಸ್ಥಿತಿಯಲ್ಲಿ ಯಾರೂ ದೇಶದ ವಿರುದ್ಧವಾಗಲಿ, ಸರಕಾರದ ವಿರುದ್ಧವಾಗಲಿ ಮಾತನಾಡುವಂತಿರಲಿಲ್ಲ. ಮಾತನಾಡಿದವರನ್ನು (ಮುಂದೆ ಮಾತನಾಡಬಹುದಾದವರನ್ನು) ಅಂದಿನ ಸರಕಾರ ಬಂಧಿಸುತ್ತಿತ್ತು. ಅದಕ್ಕಾಗಿ ಸರಕಾರದ ಕಣ್ಣು ತಪ್ಪಿಸಿ ಕೆಲವರು ಅಡಗಿ ಕುಳಿತರು. ಅಂಥವರಲ್ಲಿ ಜಾರ್ಜ್ ಫರ್ನಾಂಡಿಸ್ ಕೂಡ ಒಬ್ಬರಾಗಿದ್ದರು. ಅಂದಿನ ಸರಕಾರ ಫರ್ನಾಂಡಿಸ್ ಅವರನ್ನು ಹುಡುಕುತ್ತಿತ್ತು. ಅವರನ್ನು ಸೆರೆಮನೆಗೆ ಹಾಕುವುದು ಅಂದಿನ ಸರಕಾರದ ಪ್ರಮುಖ ವಿಷಯಗಳಲ್ಲಿ ಒಂದಾಗಿತ್ತು. ಏಕೆಂದರೆ, ತುರ್ತು ಪರಿಸ್ಥಿತಿ ಹೇರುವುದಕ್ಕಿಂತ ಮೊದಲೇ ಅವರು ಸರಕಾರದ ಕಣ್ಣಿಗೆ ಬಿದ್ದಿದ್ದರು. ಕಾರ್ಮಿಕರ ಮುಖಂಡರಾಗಿದ್ದ ಸಂದರ್ಭದಲ್ಲೇ ಅವರು ರೈಲ್ವೆ ಕಾರ್ಮಿಕರ ಸಂಬಳ ಹೆಚ್ಚಿಸಬೇಕು, ನೌಕರರಿಗೆ ಉತ್ತಮ ಸೌಲಭ್ಯ ಒದಗಿಸಿಕೊಡಬೇಕು ಎಂದು ಸರಕಾರದ ವಿರುದ್ಧ ಆಂದೋಲನ ಮಾಡಿದ್ದರು. ಆ ಕಾಲದಲ್ಲಿ ಅದೊಂದು ದೊಡ್ಡ ಆಂದೋಲನವಾಗಿದ್ದು, ವಿಶ್ವದಾದ್ಯಂತ ಸುದ್ದಿ ಮಾಡಿತ್ತು. ಇದರಿಂದ ಸರಕಾರಕ್ಕೆ ಮುಜುಗರವಾಗಿತ್ತು. ಅದೇ ರೀತಿಯ ಒಂದು ಆಂದೋಲನವನ್ನು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸರಕಾರದ ವಿರುದ್ಧ ಮಾಡಲು ಫರ್ನಾಂಡಿಸ್ ತಯಾರಿ ನಡೆಸಿದ್ದರು. ಈ ವಿಷಯವನ್ನು ಅವರು ಸ್ನೇಹಲತಾ ಅವರಿಗೂ ತಿಳಿಸಿದ್ದರು. ಆದರೆ ಸ್ನೇಹಲತಾ ಅವರು ಜಾರ್ಜ್ ಫರ್ನಾಂಡಿಸ್ ಜತೆ ಕೈಜೋಡಿಸಲು ಹಿಂದೇಟು ಹಾಕಿದ್ದರು. ಏಕೆಂದರೆ ಫರ್ನಾಂಡಿಸ್ ಅವರ ಹೋರಾಟ ತೀವ್ರವಾಗಿರುತ್ತಿತ್ತು, ಸ್ನೇಹಲತಾ ಅವರಿಗೆ ಶಾಂತಿಯುತ ಹೋರಾಟದಲ್ಲಿ ಭರವಸೆಯಿತ್ತು.

ಸ್ನೇಹಲತಾ ಮತ್ತು ಜಾರ್ಜ್ ಫರ್ನಾಂಡಿಸ್ ನಡುವಿನ ಸ್ನೇಹದ ವಿಷಯ ಇಂದಿರಾ ಗಾಂಧಿಯವರಿಗೆ ಚೆನ್ನಾಗಿ ತಿಳಿದಿತ್ತು. ಆದ್ದರಿಂದ ಜಾರ್ಜ್ ಫರ್ನಾಂಡಿಸ್ ಅವರನ್ನು ಬಂಧಿಸುವ ಪ್ರಯತ್ನದಲ್ಲಿ ಅವರು ಸ್ನೇಹಲತಾ ಮೇಲೆ ಬಲೆ ಬೀಸಿದ್ದರು. ಸ್ನೇಹಲತಾರನ್ನು ಬಂಧಿಸಿದರೆ ಜಾರ್ಜ್ ಫರ್ನಾಂಡಿಸ್ ಸುಳಿವು ಸಿಗುತ್ತದೆ ಎಂಬ ಆಶಯ ಅಂದಿನ ಸರಕಾರಕ್ಕಿತ್ತು.

ಜೈಲಿನಲ್ಲಿ ಸ್ನೇಹಲತಾ ಅವರನ್ನು ಒಂದು ಸಣ್ಣ ಕತ್ತಲೆಯ ಕೋಣೆಯಲ್ಲಿ ಇಡಲಾಗಿತ್ತು. ಅಲ್ಲಿ ಮಲಮೂತ್ರ ವಿಸರ್ಜನೆಗೆಂದು ಒಂದು ಸಣ್ಣ ರಂಧ್ರ, ಬಿಟ್ಟರೆ ಮತ್ತೇನೂ ಇರಲಿಲ್ಲ. ಇಲಿ, ಹೆಗ್ಗಣ, ಸೊಳ್ಳೆ, ಕ್ರಿಮಿಗಳೆಲ್ಲ ಆ ರಂಧ್ರದಿಂದ ಕೊಠಡಿಯೊಳಗೆ ಬರುತ್ತಿದ್ದವು. ಸ್ವಚ್ಛತೆಯ ಕೊರತೆಯಿಂದ ವಾಸನೆಯೂ ಸಾಕಷ್ಟು ಬರುತ್ತಿತ್ತು. ಸ್ನೇಹಲತಾ ಅವರಿಗೆ ಅಸ್ತಮಾ ಇದ್ದ ಕಾರಣ ಆ ಕೊಠಡಿಯಲ್ಲಿ ಉಸಿರಾಡುವುದೂ ಕಷ್ಟವಾಗುತ್ತಿತ್ತು. ಸಾಲದು ಎಂಬಂತೆ ಪ್ರತಿನಿತ್ಯ ಅವರಿಗೆ ವಿಚಾರಣೆಯ ನೆಪದಲ್ಲಿ ಮೂರನೇ ದರ್ಜೆಯ ಪೊಲೀಸ್ ಟಾರ್ಚರ್ ನೀಡಲಾಗುತ್ತಿತ್ತು. ವಿಚಾರಣೆಗೆ ಬಂದ ತಕ್ಷಣ ಅವರ ಮೈ ಮೇಲಿನ ಬಟ್ಟೆ ಬಿಚ್ಚಿಸಲಾಗುತ್ತಿತ್ತು. ವಿರೋಧಿಸಿದರೆ, ಹೊಡೆತ, ಒದೆತ, ಲಾಟಿ ಏಟು ಬೀಳುತ್ತಿತ್ತು. ಎಲ್ಲರ ಎದುರೂ ಅವರನ್ನು ನಿರ್ವಸ್ತ್ರರನ್ನಾಗಿಯೇ ಗಂಟೆಗಟ್ಟಲೆ ನಿಲ್ಲಿಸಲಾಗುತ್ತಿತ್ತು. ಪ್ರತಿನಿತ್ಯ ಹೊಸ ಹೊಸ ಶಿಕ್ಷೆ ಕೊಟ್ಟು ಬಾಯಿ ಬಿಡಿಸುವ ಪ್ರಯತ್ನವನ್ನು ಪೊಲೀಸರು ಮಾಡುತ್ತಿದ್ದರು. ಪೊಲೀಸರಿಗೆ ಸ್ನೇಹಲತಾ ಅವರಿಂದ ಜಾರ್ಜ್ ಫರ್ನಾಂಡಿಸ್ ಮಾಹಿತಿ ಬೇಕಿತ್ತು. ಆದರೆ ಸ್ನೇಹಲತಾಗೆ ಫರ್ನಾಂಡಿಸ್ ಎಲ್ಲಿದ್ದಾರೆ ಎಂಬ ಮಾಹಿತಿ ಇರದ ಕಾರಣ, ಅವರಿಂದ ಉತ್ತರ ಬರುತ್ತಿರಲಿಲ್ಲ.

ಪೊಲೀಸರ ಟಾರ್ಚರ್ ಸಹಿಸಲಾಗದೇ ಸ್ನೇಹಲತಾ ಬಾಯಿಂದ ಚೀತ್ಕಾರ ಹೊರಬರುತ್ತಿತ್ತು. ಇದು ಪಕ್ಕದ ಗಂಡಸರ ವಿಭಾಗದ ಸೆಲ್‌ನಲ್ಲಿರುವವರಿಗೂ ಕೇಳಿಸುತ್ತಿತ್ತು. ಆದರೆ ಅದು ಯಾರ ಕೂಗು ಎಂದು ಅವರಿಗೂ ಅರ್ಥವಾಗುತ್ತಿರಲಿಲ್ಲ. ಸ್ನೇಹಲತಾ ಇರುವ ಮಹಿಳೆಯರ ವಿಭಾಗದ ಜೈಲಿನಲ್ಲಿ 3–4 ಜನ ಮಹಿಳೆಯರು ಮಾತ್ರ ಇದ್ದರು. ಅವರನ್ನೆಲ್ಲ ದಿನದ ಶುಚಿತ್ವದ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿತು. ಪಕ್ಕದ ಗಂಡಸರ ಖಾನೆಯಲ್ಲಿರುವವರೊಂದಿಗೆ ಮಾತನಾಡುವುದಾಗಲಿ, ಇತರ ಸಂಪರ್ಕ ಸಾಧಿಸುವುದಾಗಲಿ ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಅಂದ ಹಾಗೆ, ಪಕ್ಕದ ಗಂಡಸರ ಖಾನೆಯಲ್ಲಿ ಅಟಲ್ ಬಿಹಾರಿ ವಾಜಪೇಯಿ, ಲಾಲ್‌ಕೃಷ್ಣ ಆಡ್ವಾಣಿಯವರಂಥ ದಿಗ್ಗಜರಿದ್ದರು. ಅವರಿಗೂ ಈ ಹೆಣ್ಣಿನ ಚೀತ್ಕಾರ ಕೇಳಿಸುತ್ತಿತ್ತು. ಅವರೂ ಅಸಹಾಯಕರಾಗಿದ್ದರು.

ಸ್ನೇಹಲತಾ ಅವರಿಗೆ ಅಸ್ತಮಾ ಇತ್ತು. ಸರಿಯಾಗಿ ಔಷಧಿ ದೊರಕದ ಕಾರಣ, ಜತೆಗೆ ಅವರು ಅನುಭವಿಸುತ್ತಿದ್ದ ಯಾತನೆಯಿಂದಾಗಿ ಅಸ್ತಮಾ ಉಲ್ಬಣಗೊಂಡಿತ್ತು. ಅವರು ತೀರಾ ಅಸ್ವಸ್ಥರಾಗಿ ನಿತ್ರಾಣರಾಗಿದ್ದರು. ಆಗಬೇಕಾದದ್ದೆ, ಯಾಕೆಂದರೆ ಈ ಪ್ರಕ್ರಿಯೆ ಸತತ ಎಂಟು ತಿಂಗಳವರೆಗೆ ನಡೆಯಿತು. ಈ ನಡುವೆ ಅಸ್ತಮಾ ಅತಿಯಾದಾಗ ಸ್ನೇಹಲತಾ ಆಗಾಗ ಎಚ್ಚರ ತಪ್ಪುತ್ತಿದ್ದದ್ದೂ ಉಂಟು. ಅತ್ತ ಮನೆಯವರಿಗೆಲ್ಲ ಜೈಲಿನಲ್ಲಿ ಏನು ನಡೆಯುತ್ತಿದೆ, ಸ್ನೇಹಲತಾ ಹೇಗಿದ್ದಾರೆ ಎನ್ನುವ ಸಂಪೂರ್ಣ ಮಾಹಿತಿ ಸಿಗುತ್ತಿರಲಿಲ್ಲ. ಕೆಲವೊಮ್ಮೆ ಭೇಟಿಗಾಗಿ ಹೋದಾಗಲೂ ಜೈಲಿನ ಅಧಿಕಾರಿಗಳು ಇವತ್ತಲ್ಲ, ನಾಳೆ ಬನ್ನಿ ಎಂದು ಹಿಂದಿರುಗಿ ಕಳಿಸುತ್ತಿದ್ದರು. ಕೆಲವೊಮ್ಮೆ ಭೇಟಿಯಾದರೂ ಸ್ನೇಹಲತಾ ಮಾತನಾಡುವ ಮೊದಲೇ ಮನೆಯವರನ್ನು ವಾಪಸ್ ಕಳಿಸುತ್ತಿದ್ದರು.

ಒಂದು ದಿನ ಜೈಲಿನಿಂದ ಸ್ನೇಹಲತಾ ಮನೆಯವರಿಗೆ ಟೆಲಿಫೋನ್ ಕರೆ ಬಂದಿತ್ತು. ಸ್ನೇಹಲತಾ ಅವರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ, ನೀವು ಬಂದು ನೋಡಬಹುದು ಎಂಬ ಸಂದೇಶವನ್ನು ಜೈಲಿನ ಅಧಿಕಾರಿಗಳು ಕೊಟ್ಟಿದ್ದರು. ಮನೆಯವರು ಆಸ್ಪತ್ರೆಗೆ ಹೋಗಿ ನೋಡಿದಾಗ, ಅಸ್ಥಿಪಂಜರಕ್ಕೆ ತೊಗಲನ್ನು ಸುತ್ತಿಕೊಂಡಂತೆ ಸ್ನೇಹಲತಾ ಮಂಚದ ಮೇಲೆ ಬಿದ್ದುಕೊಂಡಿದ್ದರು. ಅವರ ಮೈ–ಮುಖದ ತುಂಬ ಗಾಯಗಳಾಗಿದ್ದವು. ಅಲ್ಲಿಗೇ ಮುಗಿಯಲಿಲ್ಲ. ಅವರ ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಆಗುತ್ತಿದ್ದಂತೆಯೇ ಬೆಂಗಳೂರು ಜೈಲಿಗೆ ಅವರನ್ನು ಪುನಃ ಸಾಗಿಸಲಾಯಿತು. ನಂತರದ ದಿನಗಳಲ್ಲಿ ಸ್ನೇಹಲತಾ ಅವರ ಆರೋಗ್ಯದಲ್ಲಿ ಸುಧಾರಣೆ ಆಗಲೇ ಇಲ್ಲ. ಅಸ್ತಮಾದಿಂದಾಗಿ ಅವರ ಶ್ವಾಸಕೋಶ ನಿತ್ರಾಣವಾಗಿತ್ತು. ದಿನದಿಂದ ದಿನಕ್ಕೆ ಅವರ ಹೃದಯವೂ ಸತ್ವ ಕಳೆದುಕೊಳ್ಳುತ್ತಿತ್ತು.

1977 ಜನವರಿ 15ರಂದು ಪೆರೋಲ್ ಮೇಲೆ ಅವರನ್ನು ಜೈಲಿನಿಂದ ಹೊರಗೆ ಕಳಿಸಿದರು. ಆದರೆ ಐದು ದಿನದಲ್ಲಿ, ಅಂದರೆ ಜನವರಿ 20ರಂದು ಸ್ನೇಹಲತಾ ಮರಣವನ್ನಪ್ಪಿದರು. ವಿಚಿತ್ರವೆಂದರೆ, ಆ ಎಂಟು ತಿಂಗಳಲ್ಲಿ ಸ್ನೇಹಲತಾ ಅವರನ್ನು ಜೈಲಿನಲ್ಲಿಟ್ಟು ವಿಚಾರಣೆ ನಡೆಸಿದ ಪೊಲೀಸರು ಅವರ ಮೇಲೆ ಚಾರ್ಜ್‌ಶೀಟನ್ನೇ ದಾಖಲಿಸಲಿಲ್ಲ. ಪೊಲೀಸರಿಗೆ ಸ್ನೇಹಲತಾ ವಿರುದ್ಧ ಯಾವ ದಾಖಲೆಯೂ ಸಿಗಲಿಲ್ಲ. ಅದಕ್ಕಾಗಿ ಅವರ ಹೆಸರು ಚಾರ್ಜ್‌ಶೀಟ್‌ನಲ್ಲಿ ಬರಲೇ ಇಲ್ಲ. ಎಂಟು ತಿಂಗಳು ಹಿಂಸೆ ಕೊಟ್ಟಿದ್ದು ಮಾತ್ರ ಇತಿಹಾಸದ ಪುಟಗಳಲ್ಲಿ ದಾಖಲಾಗಿ ಉಳಿಯಿತು. ಸ್ನೇಹಲತಾ ಅವರ ಹೆಸರು ತುರ್ತು ಪರಿಸ್ಥಿತಿಯ ಕಾಲದಲ್ಲಿ ಹುತಾತ್ಮರಾದ ಮೊದಲ ಮಹಿಳೆ ಎಂದು ದಾಖಲಾಯಿತು. ಜೈಲಿನಲ್ಲಿ ಇರುವಾಗ ಅವರು ಪ್ರತಿನಿತ್ಯ ಡೈರಿ ಬರೆಯುತ್ತಿದ್ದರು. ಅವರ ಜೈಲಿನ ಅನುಭವಗಳ A Prison Diary ಕೃತಿಯನ್ನು ಕರ್ನಾಟಕ ಮಾನವ ಹಕ್ಕುಗಳ ಆಯೋಗ ಪ್ರಕಟಿಸಿದೆ.

ವರ್ಷಗಳ ಹಿಂದೆ ಅಂದಿನ ಮಂತ್ರಿ ಸ್ಮೃತಿ ಇರಾನಿ ಸದನದಲ್ಲಿ ಈ ವಿಷಯ ಪ್ರಸ್ತಾಪಿಸಿದಂದಿನಿಂದ ಈ ಕುರಿತು ಮಾಹಿತಿ ಸಂಗ್ರಹಿಸಿದ್ದೆ. ಇತ್ತೀಚೆಗೆ ಕಂಗನಾ ರಣಾವತ್ ಅವರ 'ಎಮರ್ಜೆನ್ಸಿ' ಚಿತ್ರ ನೋಡುವಾಗ ಸ್ನೇಹಲತಾ ರೆಡ್ಡಿ, ಜಾರ್ಜ್ ಫರ್ನಾಂಡಿಸ್ ಎಲ್ಲ ನೆನಪಾದರು.

ಇರಲಿ, ಇಂದಿರಾ ಗಾಂಧಿಯವರಂಥ, ಸ್ನೇಹಲತಾ ರೆಡ್ಡಿಯವರಂಥ, ಇವರಿಬ್ಬರ ವರ್ಗಕ್ಕೂ ಸೇರದ ಸ್ತ್ರೀಯರಿಗೆ ಮಹಿಳಾದಿನದ ಶುಭಾಶಯಗಳು.

## ನಾರದ ಸಂಚಾರ

ಕಲಹಪ್ರಿಯ
naadigru@gmail.com

### ಇಲ್ಲೂ 'ಬಿಲ್-ವಿದ್ಯಾ' ಪ್ರವೀಣರು!

ಖೋಟಾ ಬಿಲ್ ಸೃಷ್ಟಿಸಿ ಸರಕಾರಕ್ಕೆ ಸಲ್ಲಿಸಿ ಹಣವನ್ನು ಮನಸೋ ಇಚ್ಛೆ 'ಗುಳುಂ' ಮಾಡುವ 'ಬಿಲ್–ವಿದ್ಯಾ' ಪ್ರವೀಣರು ನಮ್ಮ ನಡುವೆ ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಆದರೆ ಆಸ್ಪತ್ರೆಗಳಲ್ಲೂ ಇಂಥವರು ಇರುವುದು ಜನಸಾಮಾನ್ಯರಿಗೆ ಅಷ್ಟಾಗಿ ತಿಳಿದಿರಲಿಲ್ಲ. ಮಧ್ಯಪ್ರದೇಶದ ರತ್ಲಂನ ಒಂದು ಖಾಸಗಿ ಆಸ್ಪತ್ರೆಯವರು ತಾವು ಕೂಡ ಈ ವಿದ್ಯೆಯಲ್ಲಿ ಪರಿಣತರು ಎಂಬುದನ್ನು ಸಾಬೀತುಪಡಿಸಿದ್ದಾರೆ. ಒಂದು ಪುಟ್ಟ ವ್ಯತ್ಯಾಸವೇನಪ್ಪಾ ಅಂದ್ರೆ, ಇವರು ಇಲ್ಲದ ಕಾಯಿಲೆಯನ್ನು ಇದೆ ಎಂದು ಬಂಡಲ್ ಬಿಟ್ಟು, ರೋಗಿಯ ಕುಟುಂಬಸ್ಥರಿಂದ ಹಣ ಪೀಕಿಸಲು ಸರ್ಕಸ್ ಮಾಡಿದ್ದಾರೆ, ಅಷ್ಟೇ.

ನಡೆದಿದ್ದು ಇಷ್ಟೇ. ರತ್ಲಂನ ನಿವಾಸಿಯೊಬ್ಬ ಗಾಯಗೊಂಡು, ಚಿಕಿತ್ಸೆಗೆಂದು ಖಾಸಗಿ ಆಸ್ಪತ್ರೆಯ ಮೊರೆಹೋದ. ತಪಾಸಣೆ ಮಾಡಿದ ವೈದ್ಯರು ಅವನನ್ನು ಉಪಾಯವಾಗಿ ಐಸಿಯು ಘಟಕಕ್ಕೆ ದಾಖಲಿಸಿ, ನಂತರ ಅಲ್ಲಿಂದ ಹೊರಬಂದು ಆತನ ಕುಟುಂಬಿಕರಿಗೆ, ''ನೋಡೀಪ್ಪಾ, ನಿಮ್ಮವರಿಗೆ ಬೆನ್ನುಮೂಳೆ ಮುರಿದುಹೋಗಿರೋದ್ರಿಂದ ಕೋಮಾಗೆ ಜಾರಿಬಿಟ್ಟಿದ್ದಾರೆ, ಅವರಿಗೆ ಹೆಚ್ಚಿನ ಚಿಕಿತ್ಸೆಯ ಅಗತ್ಯವಿದೆ, ಆದಷ್ಟು ಬೇಗ ಹಣ ಹೊಂದಿಸಿ'' ಅಂತ ಹೇಳಿ, ಗಾಯಕ್ಕೆ ಪಟ್ಟಿ ಕಟ್ಟೋ ಬದಲು ಮಾತಲ್ಲೇ 'ಪಟ್ಟಿ ಕಟ್ಟಿ'ದ್ದಾರೆ. ಆ ಕುಟುಂಬದವರೋ ಎದ್ದೆವೋ ಬಿದ್ದೆವೋ ಅಂತ ಹರಸಾಹಸ ಮಾಡಿ 1 ಲಕ್ಷ ರುಪಾಯಿ ಹೊಂದಿಸಿ ಆಸ್ಪತ್ರೆಗೆ ಕಟ್ಟಿದ್ದಾರೆ. ಈ ವಿಷಯವು ಐಸಿಯುನಲ್ಲಿದ್ದ ರೋಗಿಗೆ ಅದ್ಹೆಂಗೋ ತಿಳಿದು, ತನಗೆ ಆಮ್ಲಜನಕ ಪೂರೈಸುತ್ತಿದ್ದ ನಳಿಕೆಯ ಸಮೇತವೇ ಐಸಿಯುನಿಂದ ಓಡಿಬಂದು, ಜನರಿಗೆ ಈ ಅನ್ಯಾಯವನ್ನು ತಿಳಿಸಿ ಬೊಂಬಡಾ ಬಜಾಯಿಸಿದ್ದಾನೆ! ಇದನ್ನು ಕೇಳಿದ ಜನರು ಮೂಗಿನ ಮೇಲೆ ಬೆರಳಿಟ್ಟುಕೊಂಡು, ''ಅಯ್ಯೋ ಶಿವನೇ, ಹೀಗೂ ಉಂಟೇ?'' ಎಂದು ನಿಬ್ಬೆರಗಾದರಂತೆ.

ಜೀವರಕ್ಷಣೆಯ ಹೊಣೆಹೊರಬೇಕಾದ ಹಾಗೂ ಜನರ ಕಣ್ಣೀರು ಒರೆಸುವ ಮಾನವೀಯ ಕಾರ್ಯದಲ್ಲಿ ಸಹಭಾಗಿಗಳಾಗಬೇಕಾದ ಕೆಲ ಆಸ್ಪತ್ರೆಗಳು ಹೇಗೆ ಅದಕ್ಕೆ ವ್ಯತಿರಿಕ್ತವಾದ ಕೆಲಸದಲ್ಲಿ ತೊಡಗಿಕೊಂಡಿವೆ ಎನ್ನಲು ಇದೊಂದು ನಿದರ್ಶನ ಸಾಕು. ಈ ಘಟನೆಯನ್ನು ಅವಲೋಕಿಸಿದಾಗ, ಕಲಹಪ್ರಿಯ ನಾರದರಿಗೆ ಸಾಹಸಸಿಂಹ ವಿಷ್ಣುವರ್ಧನ್ ಅಭಿನಯದ 'ವಿಷ್ಣುಸೇನೆ' ಹಾಗೂ ಚಿರಂಜೀವಿ ಅಭಿನಯದ 'ಟ್ಯಾಗೋರ್' ಸಿನಿಮಾಗಳು ನೆನಪಿಗೆ ಬಂದವು. ನಿಮಗೆ?!

### ನೀರು ಹನಿಯೋದು ನಿಂತಿಲ್ಲ

ಕಾಂಗ್ರೆಸ್ ಪಕ್ಷವು ಕರ್ನಾಟಕ ವಿಧಾನಸಭಾ ಚುನಾವಣೆಯನ್ನು ಗೆದ್ದ ತರುವಾಯದಲ್ಲಿ, ನಿಗದಿತ ಅವಧಿಯ ನಂತರ ಮುಖ್ಯಮಂತ್ರಿಗಳ ಅಧಿಕಾರ ಹಂಚಿಕೆ/ಹಸ್ತಾಂತರದ ಮಾತುಕತೆ ನಡೆದಿದ್ದು ನಿಜವೇ? ಕರ್ನಾಟಕದಲ್ಲಿ ಮುಖ್ಯಮಂತ್ರಿಗಳ ಬದಲಾವಣೆ ಆಗಲಿದೆಯೇ? ಎಂಬ ಪ್ರಶ್ನೆಗಳು ಪಕ್ಷದ ಸಾಮಾನ್ಯ ಕಾರ್ಯಕರ್ತರನ್ನು ಈಗಲೂ ಕಾಡುತ್ತಿವೆ. ಆದರೆ ಈ ಬಗ್ಗೆ ಸರಿಯಾದ ಉತ್ತರ ಅಥವಾ ಸಮರ್ಥನೆ ಸಂಬಂಧಪಟ್ಟವರಿಂದ ಇನ್ನೂ ಹೊಮ್ಮಿಲ್ಲವಾದ್ದರಿಂದ ಎಲ್ಲವೂ ಗೋಜಲು ಗೋಜಲು ಆಗಿಬಿಟ್ಟಿದೆ. ಈ ಮಧ್ಯೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು, ''ಸಿದ್ದರಾಮಯ್ಯ ಅವರೇ ಸಿಎಂ ಹುದ್ದೆಯಲ್ಲಿ ಮುಂದುವರಿಯುತ್ತಾರೆ, ಮುಂದಿನ ವರ್ಷವೂ ಅವರೇ ಬಜೆಟ್ ಮಂಡಿಸುತ್ತಾರೆ'' ಎಂಬ ಬಾಣವನ್ನು ಬಿಟ್ಟಿದ್ದಾರೆ.

ಇನ್ನು ರಾಜ್ಯ ಬಿಜೆಪಿ ಘಟಕದ ಕಥೆಯನ್ನಂತೂ ಕೇಳೋದೇ ಬ್ಯಾಡ; ರಾಜ್ಯಾಧ್ಯಕ್ಷರ ಬದಲಾವಣೆ ಕುರಿತು ಪಕ್ಷದ ವಿಭಿನ್ನ ಬಣಗಳಿಂದ ಏನಾದರೊಂದು ಸುದ್ದಿ ಹಬ್ಬುತ್ತಲೇ ಇದೆ ಅಥವಾ ನಾಯಕರೆನಿಸಿಕೊಂಡವರು ಈ ಸಂಬಂಧವಾಗಿ ಏನೇನೋ ಹೇಳಿಕೆಗಳನ್ನು ನೀಡುತ್ತಿದ್ದಾರೆ. ''ಬಿಜೆಪಿ ರಾಜ್ಯಾಧ್ಯಕ್ಷರ ಸ್ಥಾನದಿಂದ ವಿಜಯೇಂದ್ರರನ್ನು ಬದಲಾಯಿಸುವುದು ಯತ್ನಾಳ್ ಹಣೆಯಲ್ಲಿ ಬರೆದಿಲ್ಲ'' ಎಂಬ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರ ಹೇಳಿಕೆ ಇದಕ್ಕೊಂದು ಸ್ಯಾಂಪಲ್. ಒಟ್ಟಿನಲ್ಲಿ, ಸಿಎಂ ಬದಲಾಗ್ತಾರೋ ಇಲ್ವೋ? ಬಿಜೆಪಿ ರಾಜ್ಯಾಧ್ಯಕ್ಷರಾಗಿ ಮತ್ತೊಬ್ಬರ ಪ್ರತಿಷ್ಠಾಪನೆಯಾಗುತ್ತೋ ಇಲ್ವೋ? ಎಂಬ ಪ್ರಶ್ನೆಗಳು ಇನ್ನೂ ಕೆಲ ಕಾಲದವರೆಗೆ 'ಯಕ್ಷಪ್ರಶ್ನೆ'ಗಳಾಗೇ ಉಳಿಯಲಿವೆ ಅನ್ನೋದು ತ್ರಿಲೋಕ ಸಂಚಾರಿ ನಾರದರ ಊಹೆ!

# ಸುನಾಮಿಯ ಹಾಗೆ ಹರಿದುಬಂದ ಹಿಂದೂ ಹೆದ್ದೆರೆ...

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ನಮ್ಮ ಪೂರ್ವಜರು, 'ಗಂಗೇಚ ಯಮುನೇಚೈವ ಗೋದಾವರಿ ಸರಸ್ವತಿ, ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು' ಎಂದಿದ್ದಾರೆ. ನಮ್ಮ ನದಿಗಳಿಗಿರುವ ಮಹತ್ವ, ಪಾವಿತ್ರ್ಯ ಅಂಥದ್ದು.

ಸಮುದ್ರಕ್ಕೆ ಹೋಲಿಕೆಯು ಸಮುದ್ರದಿಂದ ಮಾತ್ರವೇ ಸಾಧ್ಯ. ಅದೇ ರೀತಿಯಲ್ಲಿ, ಮಹಾಕುಂಭಮೇಳದ ಹೋಲಿಕೆಯನ್ನು ಮತ್ತೊಂದು ಮಹಾಕುಂಭಮೇಳದಿಂದ ಮಾತ್ರ ಮಾಡಲು ಸಾಧ್ಯ. ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ 45 ದಿನಗಳ ಕಾಲ ನಡೆದ ಮಹಾಕುಂಭಮೇಳವು ಫೆಬ್ರವರಿ 26ರ ಶಿವರಾತ್ರಿಯಂದು ಸಂಪನ್ನಗೊಂಡಿದೆ. ಈ ಪರ್ವಕಾಲದಲ್ಲಿ 66 ಕೋಟಿಗೂ ಹೆಚ್ಚು ಜನ ಶ್ರದ್ಧಾವಂತರು ಇಲ್ಲಿನ 'ಗಂಗಾ–ಯಮುನಾ–ಸರಸ್ವತೀ' ನದಿಗಳ ತ್ರಿವೇಣಿ ಸಂಗಮದಲ್ಲಿ ಮಿಂದೆದ್ದರು. 144 ವರ್ಷಕ್ಕೊಮ್ಮೆ ಬರುವ ಮಹಾಕುಂಭಮೇಳವು ಸಮಸ್ತ ಹಿಂದೂ ಸಮಾಜದಲ್ಲಿ ಅದ್ಭುತ ಸಂಚಲನ ಸೃಷ್ಟಿಸಿ, ಊಹೆಗೂ ನಿಲುಕದ ಯಶಸ್ಸನ್ನು ಸಾಧಿಸಿತು. ಜಾತಿ–ಮತ–ಪಂಥ–ವರ್ಗ ಎಂಬ ಭೇದವಿಲ್ಲದೆ ಪ್ರಯಾಗ್‌ರಾಜ್‌ನೆಡೆಗೆ ಧಾವಿಸಿ ಬಂದ ಜನರು ಸಂಗಮದಲ್ಲಿ ಮಿಂದು ಪಾವನರಾದರು. ಒಟ್ಟಿನಲ್ಲಿ, ಹಿಂದೂ ಸಮಾಜವು ಒಮ್ಮೆಗೇ ತನ್ನ 'ವಿರಾಟ್ ರೂಪ'ವನ್ನು ಜಗತ್ತಿನೆದುರು ಪ್ರಕಟಿಸಿ, ಎಲ್ಲರನ್ನೂ ಆಶ್ಚರ್ಯಚಕಿತಗೊಳಿಸಿತು.

ಮಹಾಕುಂಭಮೇಳದಲ್ಲಿ ಭಾಗವಹಿಸಿದಷ್ಟು ಸಂಖ್ಯೆಯ ಜನರು ಮತ್ತೊಂದು ಕಾರ್ಯಕ್ರಮದಲ್ಲಿ ಭಾಗವಹಿಸಿರುವ ನಿದರ್ಶನ ಜಗತ್ತಿನ ಇತಿಹಾಸದಲ್ಲಿಯೇ ಇಲ್ಲವೆನ್ನಬೇಕು. 2024ರ ಹಜ್ ವಾರ್ಷಿಕ ಯಾತ್ರೆಯಲ್ಲಿ ಭಾಗಿಯಾಗಿದ್ದವರ ಸಂಖ್ಯೆ ಕೇವಲ 18 ಲಕ್ಷ. 2019ರಲ್ಲಿ ಪ್ರಯಾಗ್‌ರಾಜ್‌ನಲ್ಲಿ ನಡೆದಿದ್ದ ಅರ್ಧಕುಂಭದಲ್ಲಿಯೇ 24 ಕೋಟಿ ಸನಾತನಿಗಳು ಪಾಲ್ಗೊಂಡಿದ್ದರು.

2025ರ ಮಹಾಕುಂಭವು ಈ ಎಲ್ಲ ದಾಖಲೆಗಳನ್ನು ಧೂಳಿಪಟ ಮಾಡಿ ಹೊಸ ಇತಿಹಾಸ ರಚಿಸಿದೆ. ಉತ್ತರ ಪ್ರದೇಶ ಸರಕಾರವು ಆರಂಭದಲ್ಲಿ, 40 ಕೋಟಿ ಜನರು ಭಾಗವಹಿಸಬಹುದು ಎಂದು ನಿರೀಕ್ಷಿಸಿತ್ತು. ಆದರೆ ಮಹಾಕುಂಭ ಶುರುವಾಗಿದ್ದೇ ಆಗಿದ್ದು, ಜನಸಾಗರದ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಹೋಗಿ, ಸರಕಾರದ ನಿರೀಕ್ಷೆಯನ್ನೂ ಅದು ದಾಟಿಕೊಂಡು ಹೋಯಿತು! ಶತಮಾನದ ಈ ಅಂತಿಮ ಮಹಾಕುಂಭದಲ್ಲಿ ಸನಾತನಿಗಳು ಮಾತ್ರವಲ್ಲದೆ, ಅನ್ಯದೇಶಗಳಿಂದಲೂ ಗಣನೀಯ ಸಂಖ್ಯೆಯಲ್ಲಿ ಜನರು ಬಂದು ಪವಿತ್ರ ಸಂಗಮದಲ್ಲಿ ಪುಣ್ಯಸ್ನಾನಕ್ಕೆ ಮುಗಿಬಿದ್ದಿದ್ದು ಇದಕ್ಕೆ ಕಾರಣವೆನ್ನಬಹುದು. ತಾವು ಮೈಗೂಡಿಸಿಕೊಂಡಿದ್ದ ಬಲವಾದ ಧಾರ್ಮಿಕ ನಂಬಿಕೆಯ ಫಲವಾಗಿ ಸನಾತನಿಗಳು ಮಹಾಕುಂಭಕ್ಕೆ ಸ್ವಯಂಪ್ರೇರಣೆಯಿಂದ ಬಂದರು. ಹಾಗಂತ ಈ ಕುಂಭದಲ್ಲಿ ಭಾಗವಹಿಸಲು ಯಾರಿಗೂ 'ವೈಯಕ್ತಿಕ' ಆಹ್ವಾನವೇನೂ ಇರಲಿಲ್ಲ; ಆದರೆ ಬಂದವರೆಲ್ಲರೂ ಸ್ವಂತ ಕೈಯಿಂದ ಸಾವಿರಾರು ರುಪಾಯಿ ಖರ್ಚುಮಾಡಿಕೊಂಡು ಬಂದವರೇ ಆಗಿದ್ದರು!

ಮಹಾಕುಂಭಮೇಳವನ್ನು ಮೂರು ಆಯಾಮದಲ್ಲಿ ವಿಶ್ಲೇಷಣೆ ಮಾಡುವ ಅಗತ್ಯವಿದೆ. ಮೊದಲನೆಯದಾಗಿ, ಸುನಾಮಿಯ ಅಲೆಯಂತೆ ಹರಿದುಬಂದ ಶ್ರದ್ಧಾಳುಗಳು; ಎರಡನೆಯದಾಗಿ, ಕುಂಭಮೇಳದ ನಿರ್ವಹಣೆಯಲ್ಲಿ ಸರಕಾರಿ ಆಡಳಿತ ಯಂತ್ರ ಹಾಗೂ ಸ್ವಯಂಸೇವಾ ಸಂಸ್ಥೆಗಳು ವಹಿಸಿದ ಪಾತ್ರ; ಮೂರನೆಯದಾಗಿ, ವಿಘ್ನ ಸಂತೋಷಿಗಳ ನಕಾರಾತ್ಮಕತೆ.

ಮಹಾಕುಂಭಮೇಳಕ್ಕೆ ಬರುವ ಶ್ರದ್ಧಾಳುಗಳಿಗೆ ಬೃಹತ್ ಮಟ್ಟದಲ್ಲಿ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿತ್ತು. ಸುಮಾರು 10,000 ಎಕರೆ ಪ್ರದೇಶದಲ್ಲಿ ವಿಸ್ತಾರವಾದ ಪಟ್ಟಣದ ನಿರ್ಮಾಣ, ಒಂದೂವರೆ ಲಕ್ಷದಷ್ಟು ಟೆಂಟುಗಳು, 15,000 ಸಫಾಯಿ ಕರ್ಮಚಾರಿಗಳಿಂದ ನಿರ್ವಹಿಸಲ್ಪಡುವ ಒಂದೂವರೆ ಲಕ್ಷ ಹಸಿರು ಶೌಚಾಲಯಗಳು, 1240 ಕಿ.ಮೀ. ಉದ್ದದ ಪೈಪ್‌ಲೈನ್‌ಗಳು ಮತ್ತು 50,000ಕ್ಕೂ ಹೆಚ್ಚು ಕೊಳಾಯಿನೀರಿನ ಸಂಪರ್ಕಗಳು, 20,000ಕ್ಕೂ ಹೆಚ್ಚು ವಾಹನಗಳನ್ನು ನಿಲ್ಲಿಸಲು ಸ್ಥಳ ಹೀಗೆ ಒಂದಾ ಎರಡಾ? ಸಾಲದೆಂಬಂತೆ, ಸಂಗಮ ಪ್ರದೇಶದ 550 ಚ.ಕಿ.ಮೀ. ವ್ಯಾಪ್ತಿಯಲ್ಲಿನ ರಸ್ತೆಗಳಿಗೆ 'ಚೆಕ್ಕರ್ ಪ್ಲೇಟ್' ಎಂದು ಕರೆಯಲಾಗುವ ಎರಡೂವರೆ ಲಕ್ಷಕ್ಕೂ ಹೆಚ್ಚು ಕಬ್ಬಿಣದ ಹಲಗೆಗಳನ್ನು ಅಳವಡಿಸಲಾಗಿತ್ತು.

ಕುಂಭಮೇಳಕ್ಕೆ ದೇಶದೆಲ್ಲೆಡೆಯಿಂದ ಲಕ್ಷ ಲಕ್ಷ ಸಂಖ್ಯೆಯಲ್ಲಿ ಜನರು ಹರಿದುಬಂದಿದ್ದರಿಂದ ಪ್ರಯಾಗ್‌ರಾಜ್‌ನ ರಸ್ತೆಗಳೆಲ್ಲಾ ತುಂಬಿ ತುಳುಕುತ್ತಿದ್ದವು. ಬಹುತೇಕರು ತಲೆಯ ಮೇಲೆ ಬಟ್ಟೆ–ಬರೆಗಳ ಮೂಟೆಯನ್ನು ಹೊತ್ತು ಮಕ್ಕಳ ಕೈಹಿಡಿದುಕೊಂಡು ಸಂಗಮದತ್ತ ಸಾಗುತ್ತಿದ್ದ ದೃಶ್ಯದ ವೀಕ್ಷಣೆ ರೋಮಾಂಚಕಾರಿಯಾಗಿತ್ತು. ಸಣ್ಣ ಮಕ್ಕಳನ್ನು ಎತ್ತಿಕೊಂಡು ಬಂದವರು ಕೂಡ 25 ಕಿ.ಮೀ. ಹೆಜ್ಜೆಹಾಕಿ ಸಂಗಮದಲ್ಲಿ ಸ್ನಾನ ಮಾಡಿ ಸಾರ್ಥಕತೆಯನ್ನು ಪಡೆದರು. ವಯಸ್ಸಿನ ಅಂತರವಿಲ್ಲದೆ ಪ್ರತಿಯೊಬ್ಬರೂ ನಡೆಯುವುದು ಅನಿವಾರ್ಯವಾಗಿತ್ತು. ಹೀಗಾಗಿ ಪ್ರಯಾಗದ ರಸ್ತೆಗಳಲ್ಲಿ ವಾಹನ ಮಾಯವಾಗಿ ಕೇವಲ ಜನರ ತಲೆಗಳಷ್ಟೇ ತುಂಬಿಹೋಗಿದ್ದವು. ಈ ಜನಪ್ರವಾಹವು ಸಂಭ್ರಮದಿಂದ ಸಾಗುತ್ತಿದ್ದಾಗಿನ ಚಿತ್ರ ನನ್ನ ಮನದಲ್ಲಿ ಅಚ್ಚಳಿಯದೆ ಉಳಿಯುವುದು.

ಸಂಗಮದ ಬಳಿ ಶ್ರದ್ಧಾಳುಗಳು ಭಕ್ತಿಪೂರ್ವಕವಾಗಿ ಗಂಗೆಯ ಪೂಜೆಯನ್ನು ಮಾಡಿ ಕುಟುಂಬ ಸಮೇತ ಸ್ನಾನ ಮಾಡುತ್ತಿದ್ದಾಗ ಅವರಲ್ಲಿ ಕಾಣುತ್ತಿದ್ದ ಧನ್ಯತಾ ಭಾವವನ್ನು ವರ್ಣಿಸಲಾಗದು. ನಡೆದುಬಂದ ದಣಿವಿಲ್ಲ, ಜನದಟ್ಟಣೆಯ ಬೇಸರವಿಲ್ಲ. ಅಲ್ಲಿ ಕಂಡಿದ್ದು ಸಂಗಮದಲ್ಲಿ ಸ್ನಾನ ಮಾಡಿದ್ದರ ಸಾರ್ಥಕತೆಯ ಭಾವ ಮಾತ್ರ. ಹಣೆಗೆ ಅರಿಶಿನ, ಶಿವನ ತ್ರಿಶೂಲದ ಚಿಹ್ನೆಯೊಂದಿಗಿನ ಸೆಲ್ಫಿ ಸಂಭ್ರಮದ ದೃಶ್ಯ ಅದ್ಭುತವಾಗಿತ್ತು.

ಬಸ್ಸಿನಲ್ಲಿ ಬಂದಿದ್ದ ಯಾತ್ರಿಕರು ಪ್ರಯಾಗಕ್ಕೆ ಹೋಗುವ ದಾರಿಯುದ್ದಕ್ಕೂ ಬಟ್ಟೆ ಒಗೆದುಕೊಳ್ಳಲು, ಅಡುಗೆ ಸಿದ್ಧಪಡಿಸಿಕೊಳ್ಳಲು ಸೂಕ್ತ ಜಾಗ ದೊರೆತ ಕೂಡಲೇ ಅಲ್ಲಿಯೇ ಬೀಡುಬಿಡುತ್ತಿದ್ದರು. ಸರಕಾರಿ ಕಚೇರಿಗಳ ಕಾಂಪೌಂಡುಗಳಲ್ಲೂ ಇದಕ್ಕೆ ಅವಕಾಶ ನೀಡಲಾಗಿತ್ತು. ಅನೇಕ ಸ್ವಯಂಸೇವಾ ಸಂಸ್ಥೆಗಳು ಶ್ರದ್ಧಾಳುಗಳಿಗೆ ರಾತ್ರಿ ಉಳಿಯಲು ಉಚಿತ ವ್ಯವಸ್ಥೆ ಮಾಡಿದ್ದವು, ಊಟ–ತಿಂಡಿ–ಚಹಾ ಕೊಡುವ ಭಂಡಾರಗಳು ಯಥೇಚ್ಛವಾಗಿದ್ದವು. ಹಸಿದು ಹಿಂದಿರುಗಿದವರು ಯಾರೊಬ್ಬರೂ ಇರಲಿಲ್ಲ, ಪ್ರವೀಣ್ ತೊಗಾಡಿಯಾರವರ 'ಅಹೆಡ್ ಹಿಂದೂ ಪರಿಷದ್', ಇಸ್ಕಾನ್, ಶಂಕರಮಠ, ತಮಿಳುನಾಡಿನ ಮಠಗಳು, ಅದಾನಿ–ರಿಲಯನ್ಸ್ ಮುಂತಾದ ಉದ್ದಿಮೆದಾರರು, ಸ್ವಯಂಸೇವಾ ಸಂಸ್ಥೆಗಳು, ಅಖಾಡಗಳ ವತಿಯಿಂದ ದಿನಕ್ಕೆ ಲಕ್ಷಾಂತರ ಜನರಿಗೆ ಊಟ ಸಿಗುತ್ತಿತ್ತು. ಈ ಮೇಳದ ನಿಜವಾದ ಹೀರೋಗಳೆಂದರೆ, ಉತ್ತರ ಪ್ರದೇಶ ರಾಜ್ಯ ಪೊಲೀಸರು ಮತ್ತು ಇತರ ಭದ್ರತಾ ಸಿಬ್ಬಂದಿಗಳು. ಕುಂಭಮೇಳ ಆರಂಭಕ್ಕೆ ಮೂರೂವರೆ ತಿಂಗಳು ಮುನ್ನವೇ ಪೊಲೀಸರು ಕರ್ತವ್ಯನಿರತರಾಗಿದ್ದರು. ಮೇಳವನ್ನು ಯಶಸ್ವಿಯಾಗಿಸಲು ಒಟ್ಟು 75,000 ಪೊಲೀಸರು ಪಟ್ಟಿರುವ ಶ್ರಮ ವರ್ಣನೆಗೆ ನಿಲುಕದ್ದು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು ಪೊಲೀಸರಿಗೆ 'ಲಾಠಿ ಇಲ್ಲ, ಸೀಟಿ ಮಾತ್ರ' ಅಂತ ಸ್ಪಷ್ಟ ಸೂಚನೆ ನೀಡಿದ್ದರಂತೆ. ಮೇಳದಲ್ಲಿನ ಯಾತ್ರಾರ್ಥಿಗಳ ಜಮಾವಣೆಯನ್ನು ಮತ್ತು ವಾಹನ ಸಂಚಾರ ದಟ್ಟಣೆಯನ್ನು ಪೊಲೀಸರು ನಿರ್ವಹಿಸಬೇಕಿತ್ತು, ಅವಘಡ, ದೊಂಬಿ, ಗಲಾಟೆಗೆ ಆಸ್ಪದವಿಲ್ಲದಂತೆ ಜನಸಾಗರವನ್ನು ನಿಯಂತ್ರಿಸಬೇಕಾದ ಜವಾಬ್ದಾರಿ ಅವರದಾಗಿತ್ತು. ಹೀಗಾಗಿ ಕರ್ತವ್ಯದಿಂದ ಕೊಂಚವೇ ವಿಮುಖವಾಗಿ ಮೈಮರೆಯುವುದಕ್ಕೆ ಅಲ್ಲಿ ಆಸ್ಪದವೇ ಇರಲಿಲ್ಲ. ಯಾವ ಕ್ಷಣದಲ್ಲಿ ಏನು ಆಪತ್ತು ಸಂಭವಿಸುವುದೋ ಎಂಬ ಗ್ರಹಿಕೆಯಲ್ಲೇ ಕಾರ್ಯನಿರ್ವಹಿಸಬೇಕಾದ ನಿರಂತರ ಒತ್ತಡ ಪೊಲೀಸರಿಗಿತ್ತು. ಸ್ವಲ್ಪ ಹೆಚ್ಚು–ಕಮ್ಮಿ ಆದರೂ ಅವರ ಕೆಲಸಕ್ಕೆ ಕುತ್ತು ಬರುತ್ತಿತ್ತು, ಹೀಗಾಗಿ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಪ್ರಶಂಸಾರ್ಹ ಸಂಗತಿಯೆಂದರೆ, 45 ದಿನಗಳಲ್ಲಿ ಪೊಲೀಸರು ತಮ್ಮ ಲಾಠಿಗೆ ಕೆಲಸವನ್ನೇ ಕೊಡಲಿಲ್ಲ, ಅತಿ ಕ್ಲಿಷ್ಟ ಸಂದರ್ಭದಲ್ಲಿಯೂ ಸಂಯಮದ ವರ್ತನೆ ತೋರುತ್ತಿದ್ದರು. ತಮ್ಮ ಸೌಜನ್ಯಭರಿತ ವರ್ತನೆಯಿಂದಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಕುಂಭದಲ್ಲಿ ಕಾಣೆಯಾದ 50 ಸಾವಿರ ಜನರನ್ನು ಕೃತಕ ಬುದ್ಧಿಮತ್ತೆ ಬೆಂಬಲಿತ ಕ್ಯಾಮರಾದ ಸಹಾಯದಿಂದ ಅವರ ಮನೆಯವರೊಂದಿಗೆ ಸೇರಿಸಿದ ಈ ಪೊಲೀಸರ ಕಾರ್ಯದಕ್ಷತೆಗೆ ಬೆಲೆಕಟ್ಟಲಾಗದು.

ಇನ್ನು, ಕುಂಭ ಪ್ರದೇಶದ ನೈರ್ಮಲ್ಯ ಕಾಪಾಡುತ್ತಿದ್ದ ಸ್ವಚ್ಛತಾ ಕಾರ್ಮಿಕರ ಸೇವೆಯೂ ಅನನ್ಯವಾಗಿತ್ತು. ಮೇಳದಲ್ಲಿ ತಾತ್ಕಾಲಿಕವಾಗಿ ಸ್ಥಾಪಿಸಲಾಗಿದ್ದ ಒಂದೂವರೆ ಲಕ್ಷ ಶೌಚಾಲಯಗಳನ್ನು ಸುಮಾರು 15,000 ಸಫಾಯಿ ಕರ್ಮಚಾರಿಗಳು ಪ್ರತಿ ಗಂಟೆಗೊಮ್ಮೆ ಸ್ವಚ್ಛಗೊಳಿಸುತ್ತಿದ್ದರು. ಸುಮಾರು 10 ಸಾವಿರ ಎಕರೆ ವ್ಯಾಪ್ತಿಯ ಈ ಪ್ರದೇಶದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಬಹುದೊಡ್ಡ ಸವಾಲಾಗಿತ್ತು. ಅದನ್ನು ಲೋಪವಿಲ್ಲದ ಹಾಗೆ ನಿರ್ವಹಿಸಿದ್ದು ಈ ಕರ್ಮಚಾರಿಗಳು. ಪ್ರಯಾಗ್‌ರಾಜ್ ನಗರದ 15 ಲಕ್ಷ ನಿವಾಸಿಗಳನ್ನೂ ಇಲ್ಲಿ ಹೀರೋಗಳೆಂದೇ ಕರೆಯಬೇಕು. ಏಕೆಂದರೆ, ಕುಂಭಮೇಳದ 45 ದಿನಗಳು ಜನನಿಬಿಡತೆ ಮತ್ತು

ವಾಹನ ದಟ್ಟಣೆಯ ನಡುವೆ ಕೊಂಚವೂ ಬೇಸರಿಸದೆ ತಮ್ಮ ದೈನಂದಿನ ಕರ್ತವ್ಯಗಳನ್ನು ಅವರು ನಿರ್ವಹಿಸಿಕೊಂಡು ಹೋಗುತ್ತಿದ್ದರು. ತಮಗಾಗುತ್ತಿದ್ದ ಎಲ್ಲ ರೀತಿಯ ಅನಾನುಕೂಲತೆಗಳನ್ನು ಸಹಿಸಿಕೊಂಡು ಕುಂಭಮೇಳದ ಯಶಸ್ಸಿಗೆ ಸಹಕರಿಸಿದ್ದು ಇವರೇ. ಇನ್ನು ರೈಲ್ವೆ ಇಲಾಖೆಯು ಕಳೆದ ಒಂದು ವರ್ಷದಿಂದ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಮತ್ತು ರೈಲು ನಿಲ್ದಾಣಗಳನ್ನು ಉನ್ನತೀಕರಿಸಲು 5,000 ಕೋಟಿ ರು. ಹಣವನ್ನು ವೆಚ್ಚ ಮಾಡಿತು; ಕುಂಭದ 45 ದಿನಗಳಲ್ಲಿ 16,000 ರೈಲುಗಳು ಐದು ಕೋಟಿ ಯಾತ್ರಾರ್ಥಿಗಳನ್ನು ಕರೆತಂದು ಕುಂಭದ ಯಶಸ್ಸಿಗೆ ಮಹತ್ತರ ಕೊಡುಗೆ ನೀಡಿದವು.

45 ದಿನಗಳ ಕುಂಭಮೇಳ ಸಂದರ್ಭವು ಉತ್ತರ ಪ್ರದೇಶದ ಆರ್ಥಿಕತೆಗೆ ಮತ್ತು ಮೂಲಸೌಕರ್ಯ ವಲಯಕ್ಕೆ ಗಣನೀಯವಾದ ಕೊಡುಗೆಯನ್ನು ನೀಡಿದೆ. ಕುಂಭಮೇಳದ ಆಚರಣೆಗೆಂದು ಉತ್ತರ ಪ್ರದೇಶ ಸರಕಾರ ಮತ್ತು ಕೇಂದ್ರ ಸರಕಾರ ವೆಚ್ಚ ಮಾಡಿದ ಹಣ ಕೇವಲ 12 ಸಾವಿರ ಕೋಟಿ ರುಪಾಯಿ, ಆದರೆ ಗಳಿಸಿದ ಅಂದಾಜು ಆದಾಯ 3 ಲಕ್ಷ ಕೋಟಿ ರುಪಾಯಿ. ಕುಂಭಮೇಳದ ಸಂದರ್ಭವನ್ನು ಬಳಸಿಕೊಂಡು ಪ್ರಯಾಗರಾಜ್‌ನಲ್ಲಿ ಹಲವಾರು ಶಾಶ್ವತ ಯೋಜನೆಗಳನ್ನು ಕೈಗೊಂಡಿರುವುದು ಗಮನಾರ್ಹ.

ವಿವಿಧ ಉದ್ದಿಮೆದಾರರಿಗೆ ಹಾಗೂ ಸ್ವಯಂ–ಉದ್ಯೋಗಿಗಳಿಗೆ ಈ ಸಂದರ್ಭದಲ್ಲಿ ಆರ್ಥಿಕವಾಗಿ ಅತಿ ಹೆಚ್ಚಿನ ಲಾಭವಾಯಿತು. ಭಕ್ತಾದಿಗಳ ಹಣೆಗೆ ತಿಲಕವಿಟ್ಟು ದಿನಕ್ಕೆ ಕನಿಷ್ಠ 60 ಸಾವಿರ ರುಪಾಯಿಯಿಂದ ಗರಿಷ್ಠ ಒಂದೂವರೆ ಲಕ್ಷ ರುಪಾಯಿವರೆಗೆ ಸಂಪಾದನೆ ಮಾಡಿದವರಿದ್ದಾರೆ. ಪ್ರಯಾಗ ನಿವಾಸಿಗಳು ಮನೆಗಳನ್ನು 'ಹೋಮ್ ಸ್ಟೇ' ಆಗಿ ಪರಿವರ್ತಿಸಿ ಹಣ ಸಂಪಾದಿಸಿದರು. ಕಾಲೇಜು ವಿದ್ಯಾರ್ಥಿಗಳು ಸಂಗಮ ಪ್ರದೇಶಕ್ಕೆ ಬೈಕ್‌ನಲ್ಲಿ ಜನರನ್ನು ಕರೆದೊಯ್ಯುವ ಕೆಲಸ ಕೈಗೊಂಡು, ದಿನಕ್ಕೆ ಕೈತುಂಬಾ ಸಂಪಾದಿಸಿದರು. ಸಚಿನ್ ಎಂಬ ವಿದ್ಯಾರ್ಥಿಯನ್ನು ನಾನು ವಿಚಾರಿಸಿದಾಗ, ''ಪರೀಕ್ಷೆಯ ಫೀಸು ಕಟ್ಟಬೇಕಿತ್ತು, ಯಾತ್ರಾರ್ಥಿಗಳನ್ನು ಮೋಟರ್ ಸೈಕಲ್‌ನಲ್ಲಿ ಸಂಗಮಕ್ಕೆ ಕರೆದೊಯ್ದು 2 ಲಕ್ಷ ರು. ಸಂಪಾದಿಸಿರುವೆ'' ಎಂದು ಹೆಮ್ಮೆಯಿಂದ ಹೇಳಿದ. ಇಲ್ಲಿ ಬೇವಿನ ಕಡ್ಡಿ ಮಾರಿ 60 ಸಾವಿರ ರು. ಸಂಪಾದಿಸಿದವರೂ ಇದ್ದಾರೆ.

ಮೇಳದ ಪ್ರದೇಶದಲ್ಲಿ ಫುಡ್ ಕೋರ್ಟ್‌ಗಳಿಗೆ ಬೇಡಿಕೆ ಇರಲಿಲ್ಲ, ಕಾರಣ ನೂರಾರು ಕಡೆ ಕರೆಕರೆದು ಉಚಿತವಾಗಿ ಊಟ–ತಿಂಡಿ–ಚಹಾ ಕೊಡುತ್ತಿದ್ದರು, ದುಡ್ಡು ಕೊಟ್ಟು ಖರೀದಿಸುವವರು ನಗಣ್ಯ ಪ್ರಮಾಣದಲ್ಲಿದ್ದರು. ಹೀಗಾಗಿ ಕರ್ನಾಟಕ ಮೂಲದ ಹೋಟೆಲ್ ಮಾಲೀಕರೊಬ್ಬರು ಕುಂಭ ನಗರಿಯಲ್ಲಿ ಹೋಟೆಲ್ ತೆರೆದವರು ಒಂದೇ ವಾರದಲ್ಲಿ ವಾಪಸ್ ಬಂದರು. ಮತ್ತೊಂದು ವಿಶೇಷವೆಂದರೆ, 10 ರುಪಾಯಿಗೆ ಬಿಸಿಬಿಸಿ ಚಹಾವನ್ನು ಮಾರುತ್ತಿದ್ದವರು, ಬೇಡಿಕೆ ಹೆಚ್ಚಾಗಿದ್ದರೂ ದೇವರ ಸೇವೆಯೆಂದು ಬೆಲೆಯನ್ನು ಮಾತ್ರ ಹೆಚ್ಚಿಸಲಿಲ್ಲ. ಬೇಡಿಕೆ ಹೆಚ್ಚಾಯಿತೆಂದು ವಿಮಾನ ಪ್ರಯಾಣದ ದರಗಳನ್ನು ಗಗನಕ್ಕೇರಿಸಿದವರು, ಈ ಬಡ ಚಹಾ ಮಾರಾಟಗಾರರಿಂದ ಪಾಠ ಕಲಿಯಬೇಕು.

**(ಮುಂದುವರಿಯುವುದು)**

**(ಲೇಖಕರು ಬಿಜೆಪಿಯ ವಕ್ತಾರರು)**

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 305

## ಸಮಾಚಾರ ಸಣ್ಣದಲ್ಲ

### ಧ್ವನಿವರ್ಧಕ ಜೋರು: ಇಮಾಂ ವಿರುದ್ಧ ದೂರು

**ಸಂಭಾಲ್:** ಉತ್ತರ ಪ್ರದೇಶದಲ್ಲಿ ಅಬ್ಬರದ ಅಜಾನ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ಸಂಭಾಲ್ ಹಿಂಸಾಚಾರದ ನಂತರ, ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸಂಭಾಲ್ನ ಶಾಹಿ ಜಾಮಾ ಮಸೀದಿಯಲ್ಲಿ ಧ್ವನಿವರ್ಧಕದ ಮೂಲಕ ಅಜಾನ್ ನೀಡಲಾಗುತ್ತಿಲ್ಲ. ಏತನ್ಮಧ್ಯೆ, ಸಂಭಾಲ್ನ ಚಂದೌಸಿ ಪ್ರದೇಶದಲ್ಲಿ, ಪೊಲೀಸರು ಮಸೀದಿಯ ಇಮಾಮ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಜೋರಾಗಿ ಅಜಾನ್ ನುಡಿಸಿದ ನಂತರ ಧ್ವನಿವರ್ಧಕವನ್ನು ವಶಪಡಿಸಿಕೊಂಡಿದ್ದಾರೆ.

### ಉ.ಪ್ರ: ಪತ್ರಕರ್ತನ ಬೈಕ್‌ಗೆ ಡಿಕ್ಕಿ, ಗುಂಡು

**ಲಖನೌ:** ಉತ್ತರ ಪ್ರದೇಶದ ಸೀತಾಪುರದ ಲಖನೌ- ದೆಹಲಿ ಹೆದ್ದಾರಿಯಲ್ಲಿ ಹಿಂದಿ ದಿನಪತ್ರಿಕೆ ಸ್ಥಳೀಯ ವರದಿಗಾರ, ಆರ್‌ಟಿಐ ಕಾರ್ಯಕರ್ತ ರಾಘವೇಂದ್ರ ಬಾಜಪೈ(35) ಅವರನ್ನು ಹಿಂಬಾಲಿಸಿ ಬಂದ ದುಷ್ಕರ್ಮಿಗಳು, ಮೊದಲು ಬಾಜಪೈ ಮೋಟಾರ್ ಬೈಕ್ ತಮ್ಮ ವಾಹನದಿಂದ ಡಿಕ್ಕಿ ಹೊಡೆಸಿದ್ದಾರೆ. ಬಳಿಕ 3 ಬಾರಿ ಗುಂಡು ಹಾರಿಸಿ ಪತ್ರಕರ್ತನನ್ನು ಹತ್ಯೆ ಮಾಡಿದ್ದಾರೆ. ಜಿಲ್ಲಾಸ್ಪತ್ರೆ ವೈದ್ಯರು ಪತ್ರಕರ್ತನ ಮೃತದೇಹದಿಂದ 3 ಗುಂಡುಗಳನ್ನು ಹೊರತೆಗೆದಿದ್ದಾರೆ. ಶನಿವಾರ ಮಧ್ಯಾಹ್ನ ಫೋನ್ ಕರೆ ಬಂದ ನಂತರ ಬಾಜಪೈ ಮನೆಯಿಂದ ಹೊರಹೋದರು. ಬಳಿಕ ಮಧ್ಯಾಹ್ನ 3.15ರಲ್ಲಿ ಹೆದ್ದಾರಿಯಲ್ಲಿ ಹತರಾದರು. ಕೊಲೆ ಹಿಂದಿನ ಉದ್ದೇಶ ತಿಳಿಯಲು ಪೊಲೀಸರು ತನಿಖೆ ನಡೆಸಿದ್ದಾರೆ. ಹಂತಕರ ಸೆರೆಗೆ 4 ಪೊಲೀಸ್ ತಂಡ ರಚಿಸಲಾಗಿದೆ.

### ಟ್ಯಾಂಕ್ ಶುಚಿ ವೇಳೆ 4 ಕಾರ್ಮಿಕರ ಸಾವು

**ಮುಂಬೈ:** ಮುಂಬೈನಲ್ಲಿ ನಿರ್ಮಾಣ ಹಂತದಲ್ಲಿದ್ದ ಬೃಹತ್ ವಸತಿ ಸಂಕೀರ್ಣವೊಂದರಲ್ಲಿನ ನೆಲದಾಳದ ನೀರಿನ ಟ್ಯಾಂಕ್(ಸಂಪ್) ಅನ್ನು ಭಾನುವಾರ ಸ್ವಚ್ಛಗೊಳಿಸಲು ಒಳಕ್ಕೆ ಇಳಿದಿದ್ದ 4 ಸ್ವಚ್ಛತಾ ಕಾರ್ಮಿಕರು ಉಸಿರುಗಟ್ಟಿ ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಾಗಪಡ ಪ್ರದೇಶದ ಡಿಮ್‌ಟಿಮ್ಕರ್ ರಸ್ತೆಯಲ್ಲಿನ ಬಿಸ್ಮಿಲ್ಲಾ ಸ್ಪೇಸ್ ವಸತಿ ಸಂಕೀರ್ಣ ಕಟ್ಟಡದಲ್ಲಿ ಭಾನುವಾರ ಮಧ್ಯಾಹ್ನ 12.30ರ ವೇಳೆ ಅವಘಡ ನಡೆದಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ತೆರಳಿ ನಾಲ್ವರೂ ಕಾರ್ಮಿಕರನ್ನು ಸಂಪ್‌ನೊಳಗಿಂದ ಹೊರತೆಗೆದು ಆಸ್ಪತ್ರೆಗೆ ಕರೆದೊಯ್ದರು. ಆದರೆ ನಾಲ್ವರೂ ಅಷ್ಟರಲ್ಲಾಗಲೇ ಅಸುನೀಗಿದ್ದರು. ವೈದ್ಯರು ನಾಲ್ವರ ಸಾವು ದೃಢಪಡಿಸಿದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಸುತ್ತಿದ್ದಾರೆ.

### ತ್ರಿವೇಣಿ ಸಂಗಮದಲ್ಲಿನ ನೀರು ಸ್ನಾನಕ್ಕೆ ಯೋಗ್ಯ

**ದೆಹಲಿ:** ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಜ.13ರಿಂದ ಫೆ.26ರವರೆಗೂ ಜರುಗಿದ ಮಹಾಕುಂಭಮೇಳ ಸಂದರ್ಭದಲ್ಲಿ ಗಂಗಾ-ಯಮುನಾ-ಸರಸ್ವತಿ(ಗುಪ್ತಗಾಮಿನಿ) ನದಿಗಳ ತ್ರಿವೇಣಿ ಸಂಗಮದಲ್ಲಿನ ನೀರು ಸ್ನಾನಕ್ಕೆ ಯೋಗ್ಯವಾಗಿಯೇ ಇತ್ತು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಭಾನುವಾರ ಹೊಸ ವರದಿಯನ್ನು ಪ್ರಕಟಿಸಿದೆ. ತ್ರಿವೇಣಿ ಸಂಗಮ ಸ್ಥಳದಲ್ಲಿನ ನದಿ ನೀರಿನ ಗುಣಮಟ್ಟವನ್ನು ಮತ್ತೊಮ್ಮೆ ಪರೀಕ್ಷೆಗೊಳಪಡಿಸಿ ಹೊಸ ಅಂಕಿ ಅಂಶಗಳನ್ನು ಒಳಗೊಂಡ ವರದಿಯನ್ನು ಸಿದ್ಧಪಡಿಸಿ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಗೆ(ಎನ್‌ಜಿಟಿ) ಸಲ್ಲಿಸಿರುವುದಾಗಿ ತಿಳಿದುಬಂದಿದೆ. ಈ ನದಿಗಳ ಪಾತ್ರದಲ್ಲಿನ ನೀರನ್ನು ಬೇರೆ ಬೇರೆ ದಿನಗಳಲ್ಲಿ ವಿಭಿನ್ನ ಸ್ಥಳಗಳಲ್ಲಿ ಸಂಗ್ರಹಿಸಿ ಆ ಮಾದರಿಗಳನ್ನು ಪ್ರಯೋಗಾಲಯ ಪ್ರಯೋಗಕ್ಕೆ ಕಳುಹಿಸಿಕೊಟ್ಟು ವರದಿ ಪಡೆಯಲಾಗಿದೆ ಎಂದೂ ಸಿಪಿಸಿಬಿ ಹೊಸ ವರದಿಯಲ್ಲಿ ತಿಳಿಸಿದೆ.

### 3ನೇ ಮಗುವಿಗೆ ಜನ್ಮ ತಾಯಿಗೆ ₹50,000

**ಅಮರಾವತಿ:** ಆಂಧ್ರಪ್ರದೇಶದ ಮುಖ್ಯಮಂತ್ರಿ ಮತ್ತು ಟಿಡಿಪಿ ಅಧ್ಯಕ್ಷ ಚಂದ್ರಬಾಬು ನಾಯ್ಡು, ರಾಜ್ಯದಲ್ಲಿ ಜನಸಂಖ್ಯೆ ಇಳಿಮುಖವಾಗಿರುವುದರಿಂದ ನವದಂಪತಿ ಹೆಚ್ಚಿನ ಮಕ್ಕಳನ್ನು ಹೊಂದಬೇಕು ಎಂದು ಸಲಹೆ ನೀಡಿದ ಬೆನ್ನಲ್ಲೇ ವಿಜಯನಗರ ಕ್ಷೇತ್ರದ ಟಿಡಿಪಿ ಸಂಸದ ಕಾಳಿಸೆಟ್ಟಿ ಅಪ್ಪಲನಾಯ್ಡು, 3ನೇ ಮಗುವಿಗೆ ಜನ್ಮ ನೀಡುವ ವನಿತೆಗೆ 50,000 ರು. ಆರ್ಥಿಕ ನೆರವು ನೀಡಲಾಗುವುದೆಂದು ಭಾನುವಾರ ಘೋಷಿಸಿದ್ದಾರೆ. ಈ ಪ್ರೋತ್ಸಾಹಧನವನ್ನು ಸಂಸದರ ಸಂಬಳದಿಂದಲೇ ನಗದಾಗಿ ನೀಡುವುದಾಗಿ ಸಂಸದ ಕಾಳಿಶೆಟ್ಟಿ ಹೇಳಿದ್ದಾರೆ. ಗಂಡು ಮಗು ಜನಿಸಿದರೆ ತಾಯಿಗೆ ಹಸುವನ್ನು ಉಡುಗೊರೆಯಾಗಿ ನೀಡಲಾಗುವುದು ಎಂದೂ ಸಂಸದರು ಪ್ರಕಟಿಸಿದ್ದಾರೆ. ಈ ಸಂದೇಶ ಜಾಲತಾಣದಲ್ಲಿ ವೈರಲ್ ಆಗಿದೆ. ಸಚಿವರ ಕೊಡುಗೆಯನ್ನು ಮಹಿಳೆಯರು ಕ್ರಾಂತಿಕಾರಿ ಎಂದು ಪ್ರಶಂಸಿಸಿದ್ದಾರೆ. ಸಿಎಂ ಚಂದ್ರಬಾಬು ನಾಯ್ಡು ಕೂಡಾ ಶ್ಲಾಘಿಸಿದ್ದಾರೆ.

{ ಗುಲಾಬ್‌ರಾವ್ ಪಾಟೀಲ್ } ಮಹಾರಾಷ್ಟ್ರ ಸಚಿವ

ಮಹಿಳೆಯರು ವ್ಯಾನಿಟಿ ಬ್ಯಾಗ್, ಪರ್ಸ್‌ನಲ್ಲಿ ಲಿಪ್‌ಸ್ಟಿಕ್, ಕನ್ನಡಿಯಷ್ಟೇ ಅಲ್ಲ, ಆತ್ಮರಕ್ಷಣೆಗಾಗಿ ಚಾಕು, ಖಾರದಪುಡಿ ಇಟ್ಟುಕೊಳ್ಳಬೇಕು. ಮಹಿಳಾ ಸಬಲೀಕರಣ ಬಗ್ಗೆ ನಾವೆಲ್ಲಾ ಎಷ್ಟೇ ಮಾತನಾಡಿದರೂ ದುಷ್ಕೃತ್ಯಗಳು ನಡೆಯುತ್ತಲೇ ಇವೆ. ಪರಿಸ್ಥಿತಿ ಹೀಗಿರುವಾಗ ಆತ್ಮರಕ್ಷಣೆಗಾಗಿ ಚಾಕು, ಪೆಪ್ಪರ್ ಸ್ಪ್ರೇಯರ್ ಇಟ್ಟುಕೊಂಡಿರಬೇಕು ಎಂದು ಸೋದರಿಯರಲ್ಲಿ ವಿನಂತಿ ಮಾಡುವೆ.

---

13.5 ಕಿ.ಮೀ ಸುರಂಗದ ಒಂದು ಭಾಗ ಕುಸಿತ | ಉಳಿದ 7 ಮಂದಿ ಬಗ್ಗೆ ಇನ್ನೂ ಸಿಗದ ಮಾಹಿತಿ | ಕೇರಳದ ಪೊಲೀಸ್ ಶ್ವಾನಪಡೆ ಕಾರ್ಯಾರಂಭ

# ಶ್ರೀಶೈಲ ಸುರಂಗ ದುರಂತ: 16ನೇ ದಿನ ಒಬ್ಬರ ಶವ ಪತ್ತೆ

**ಶ್ರೀಶೈಲಂ:** ತೆಲಂಗಾಣದ 'ಶ್ರೀಶೈಲಂ ಎಡದಂಡೆ ಕಾಲುವೆ'(ಎಸ್‌ಎಲ್‌ಬಿಸಿ)ಯ ಸುರಂಗ ನಿರ್ಮಾಣ ಕಾಮಗಾರಿಯಲ್ಲಿ 13.5 ಕಿಮೀ ಉದ್ದದ ಸುರಂಗದೊಳಗೆ ಒಂದು ಭಾಗದಲ್ಲಿ ಮೇಲ್ಭಾಗ ಫೆ.22ರಂದು ದಿಢೀರ್ ಕುಸಿದಿದ್ದರಿಂದ ಇಬ್ಬರು ಇಂಜಿನಿಯರ್‌ಗಳು, ಜಾರ್ಖಂಡ್‌ನ ನಾಲ್ವರು ಕಾರ್ಮಿಕರು ಸೇರಿದಂತೆ 8 ಮಂದಿ ಒಳಗಡೆ ಅವಶೇಷಗಳಡಿ ಸಿಲುಕಿಕೊಂಡಿದ್ದವರಲ್ಲಿ ಒಬ್ಬರ ಮೃತದೇಹ ಭಾನುವಾರ ಕಾಣಿಸಿದೆ.

15 ದಿನಗಳಿಂದ ಸತತವಾಗಿ ವಿವಿಧ ಬಗೆಯಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸಿದರೂ ಕುಸಿದ ಸುರಂಗದೊಳಗೆ ಸಿಲುಕಿಕೊಂಡಿರುವ 8 ಮಂದಿಯ ರಕ್ಷಣೆ ಸಾಧ್ಯವೇ ಆಗಿಲ್ಲ. ಭಾನುವಾರ ಬೆಳಗ್ಗೆ ರಕ್ಷಣಾ ಕಾರ್ಯಾಚರಣೆ ಮುಂದುವರಿಸಿದ್ದಾಗ ಮಣ್ಣು-ಬಂಡೆಗಳನ್ನು ಸರಿಸುತ್ತಾ ಹೋದಂತೆ ಯಂತ್ರವೊಂದು ಕಾಣಿಸಿದೆ. ಯಂತ್ರದ ಮೇಲೆ ಆವರಿಸಿದ್ದ ಅವಶೇಷಗಳನ್ನು ತೆಗೆಯುತ್ತಿದ್ದಾಗ ಮಾನವ ಕೈಯೊಂದು ಕಾಣಿಸಿಕೊಂಡಿದೆ. ಆ ಮೂಲಕ ಒಬ್ಬರ ಮೃತದೇಹ ಪತ್ತೆಯಾದಂತಾಗಿದೆ.

ಆದರೆ, ಯಂತ್ರದ ಉಪಕರಣಗಳ ಮಧ್ಯೆ ಸಿಲುಕಿಕೊಂಡಿರುವ ಮೃತದೇಹದ ಕೈಗಳಷ್ಟೇ ಕಾಣಿಸಿದ್ದರಿಂದ ದೇಹ ಯಾರದ್ದು ಎಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ. ಮೃತದೇಹವನ್ನು ಹೊರಗೆ ತೆಗೆಯಲು ಯಂತ್ರವನ್ನು ತುಂಡರಿಸಬೇಕಿರುವುದರಿಂದ ರಕ್ಷಣಾ ಕಾರ್ಯಾಚರಣೆ ಪಡೆಯ ಸಿಬ್ಬಂದಿ ವಿದ್ಯುತ್ ಚಾಲಿತ ಗರಗಸ, ಲೋಹ ಕತ್ತರಿಸುವ ಯಂತ್ರಗಳನ್ನು ಬಳಸಿಕೊಂಡು ಯಂತ್ರವನ್ನು ತುಂಡರಿಸಿ ಬಿಡಿಭಾಗಗಳನ್ನು ಹೊರತೆಗೆಯಲು ಆರಂಭಿಸಿದ್ದಾರೆ ಎಂದು ಸಚಿವ ಉತ್ತಮ್ ಕುಮಾರ್ ರೆಡ್ಡಿ ಸುದ್ದಿಗಾರರಿಗೆ ಭಾನುವಾರ ತಿಳಿಸಿದ್ದಾರೆ.

### ರಕ್ಷಣಾ ಕಾರ್ಯಕ್ಕೆ ರೊಬೊಗಳ ಬಳಕೆ

ಶ್ರೀಶೈಲಂ ಸುರಂಗ ಕುಸಿತ ಘಟನೆ ಒಂದು ರಾಷ್ಟ್ರ ಮಟ್ಟದ ದುರಂತವಾಗಿದೆ ಎಂದಿರುವ ಸಚಿವ ಉತ್ತಮ ಕುಮಾರ್ ರೆಡ್ಡಿ, ಸುರಂಗದಲ್ಲಿ ಕುಸಿತವಾಗಿರುವ ಸ್ಥಳದಲ್ಲಿ ಅವಶೇಷಗಳನ್ನು ತೆರವುಗೊಳಿಸುವ ಕಾರ್ಯಕ್ಕೆ ನೆರವಾಗಲೆಂದು ರೊಬೊಗಳನ್ನೂ ಬಳಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಶನಿವಾರ ತಿಳಿಸಿದ್ದರು.

ಅವಘಡ ನಡೆದ ನಂತರದ 15 ದಿನಗಳಲ್ಲಿ ರಾಷ್ಟ್ರಮಟ್ಟದ 11 ಬಗೆಯ ರಕ್ಷಣಾ ಕಾರ್ಯಾಚರಣೆ ತಂಡಗಳು ಹಲವು ಬಗೆಯಲ್ಲಿ ಶ್ರಮಿಸಿವೆ. ಆದರೂ 8 ಮಂದಿಯನ್ನು ಪತ್ತೆ ಮಾಡಲಾಗಿಲ್ಲ. ಸುರಂಗ ಕುಸಿದಿರುವೆಡೆ ಅವಶೇಷಗಳನ್ನು ತೆಗೆದು ಸಾಗಿಸುವುದೇ 13.5 ಕಿಮೀ ಉದ್ದದ ಈ ಸುರಂಗದೊಳಗೆ ಸವಾಲಿನ ಕೆಲಸವಾಗಿದೆ. ಈ ಕಷ್ಟದ ಕೆಲಸವನ್ನು ಮಾಡಿ ಮುಗಿಸಲು ರೊಬೊಗಳು ಬಳಸಿಕೊಳ್ಳಲು ಯೋಜಿಸಲಾಗಿದೆ ಎಂದರು.

### ಬೆಲ್ಜಿಯಂ ತಳಿ ಶ್ವಾನಪಡೆ ನೆರವು

ಇನ್ನೊಂದೆಡೆ, ಕೇರಳದಿಂದ ಕರೆಸಿಕೊಳ್ಳಲಾಗಿದ್ದ, ಕಡವೇರ್ ಶ್ವಾನದಳದ ಎರಡು ನುರಿತ ಶ್ವಾನಗಳನ್ನು ಬಳಸಿಕೊಂಡು ಮಣ್ಣಿನಡಿ ಸಿಲುಕಿಕೊಂಡಿರುವ ಉಳಿದ 7 ಮಂದಿಯನ್ನು ಪತ್ತೆ ಮಾಡಲು ರಕ್ಷಣಾ ಕಾರ್ಯಾಚರಣೆ ತಂಡ ಶ್ರಮಿಸುತ್ತಿದೆ.



ಬೆಲ್ಜಿಯಂದ ದೇಶದ ವಿಶಿಷ್ಟ ತಳಿಗಳಾದ ಈ ಶ್ವಾನಗಳು ವಾಸನೆ ಹಿಡಿದು ಪತ್ತೆ ಮಾಡುವುದರಲ್ಲಿ ಭಾರೀ ಸಾಮರ್ಥ್ಯ ಹೊಂದಿವೆ. ಮಣ್ಣಿನಡಿಯಲ್ಲಿ 15 ಅಡಿಗಳಷ್ಟು ಆಳದಲ್ಲಿ ಮಾನವರು ಸಿಕ್ಕಿಬಿದ್ದಿದ್ದರೂ ನಿಖರವಾಗಿ ಆ ಜಾಗವನ್ನು ಗುರುತಿಸಬಲ್ಲಷ್ಟು ವಾಸನೆ ಗ್ರಹಿಸುವುದರಲ್ಲಿ ನೈಪುಣ್ಯ ಹೊಂದಿವೆ.

### ತೆಲಂಗಾಣ ಸುರಂಗ ದುರಂತ

- ಅವಘಡ ಎಲ್ಲಿ: ತೆಲಂಗಾಣದ ನಾಗರಕರ್ನೂಲ್ ಜಿಲ್ಲೆ ದೋಮಲಪೆಂಟದಲ್ಲಿ.
- ಅವಘಡ: ಶ್ರೀಶೈಲಂ ಎಡದಂಡೆ ಕಾಲುವೆ ಸುರಂಗದಲ್ಲಿ 3 ಮೀ. ಅಗಲ ಛಾವಣಿ ಕುಸಿತ
- ಎಷ್ಟು ದಿನ ಆಗಿದೆ: ಫೆ.22ರಂದು ಕುಸಿತವಾಗಿದ್ದು ಮಾ.9ಕ್ಕೆ 16 ದಿನಗಳಾಗಿವೆ
- ಏನಾಗಿದೆ: ಇಬ್ಬರು ಇಂಜಿನಿಯರ್ ಸೇರಿ 8 ಮಂದಿ ಅವಶೇಷಗಳಡಿ ಸಿಲುಕಿದ್ದಾರೆ

### 3 ಮಂದಿ ಇರುವ ಜಾಗ ಪತ್ತೆ: ಸಚಿವ

'ಕೇರಳದ ಕಡವೇರ್ ಶ್ವಾನಗಳನ್ನು ರಕ್ಷಣಾ ಕಾರ್ಯಾಚರಣೆಗೆ ಬಳಸಿಕೊಳ್ಳಲಾಗುತ್ತಿದೆ. ಭಾನುವಾರ ಒಂದು ಕಡೆಯಲ್ಲಿ ಮೂವರು ಸಿಲುಕಿಕೊಂಡಿರುವ ಬಗ್ಗೆ ಶ್ವಾನಗಳು ವಾಸನೆ ಹಿಡಿದು ಸುಳಿವು ನೀಡಿವೆ. ಆ

ಜಾಗದಲ್ಲಿ ರಕ್ಷಣಾ ಕಾರ್ಯಾಚರಣೆ ತಂಡವು ಅವಶೇಷಗಳನ್ನು ತೆಗೆದು ಸಿಲುಕಿಕೊಂಡಿರುವವರ ಪತ್ತೆಗಾಗಿ ಕೆಲಸ ಆರಂಭಿಸಿದೆ' ಎಂದು ತೆಲಂಗಾಣ ನೀರಾವರಿ ಮತ್ತು ನಾಗರಿಕ ಪಡಿತರ ಪೂರೈಕೆ ಸಚಿವ ಉತ್ತಮ್ ಕುಮಾರ್ ರೆಡ್ಡಿ ಭಾನುವಾರ ಸುದ್ದಿಗಾರರಿಗೆ ಹೇಳಿದ್ದಾರೆ.

ಸುರಂಗದ ಕೊನೆಯ ಭಾಗದಲ್ಲಿ ಡಿ-2 ಪಾಯಿಂಟ್ ಬಳಿ ಶ್ವಾನಗಳು ಕಾರ್ಮಿಕರ ಇರುವಿಕೆಯ ಜಾಗವನ್ನು ನಿಖರವಾಗಿ ಗುರುತಿಸಿವೆ. ಈ ಜಾಗ ಅವಘಡ ನಡೆದ ಸ್ಥಳದಿಂದ 100 ಮೀ. ದೂರದಲ್ಲಿದೆ ಎಂದು ಸಚಿವರು ವಿವರ ನೀಡಿದ್ದಾರೆ.

ಸುರಂಗ ಕುಸಿತ ದುರಂತದಲ್ಲಿ ಸಂಕಷ್ಟಕ್ಕೀಡಾಗಿರುವ ಕುಟುಂಬಗಳ ಜತೆಗೆ ರಾಜ್ಯ ಸರಕಾರ ಸಂಪರ್ಕದಲ್ಲಿದೆ. ಅವರಿಗೆ ಅಗತ್ಯವಾದ ನೆರವನ್ನು ಒದಗಿಸುತ್ತಿದೆ. ಇಲ್ಲಿನ ರಕ್ಷಣಾ ಕಾರ್ಯಾಚರಣೆಯ ಮಾಹಿತಿಯನ್ನೂ ಕಾಲಕಾಲಕ್ಕೆ ತಿಳಿಸುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ.

---

## ಸಿರಿಯ ಪ್ರತೀಕಾರ ಹತ್ಯೆ: 2 ದಿನಕ್ಕೆ 1018 ಬಲಿ

**ಬೈರೂತ್:** ಸಿರಿಯದಲ್ಲಿನ ಭದ್ರತಾ ಪಡೆಗಳು ಮತ್ತು ಪದಚ್ಯುತ ಅಧ್ಯಕ್ಷ ಬಷರ್ ಅಲ್ ಅಸ್ಸಾದ್ ಬೆಂಬಲಿತ ಬಂಡುಕೋರರ ಸಶಸ್ತ್ರ ಪಡೆಗಳ ನಡುವೆ ಸಂಘರ್ಷ ಮುಂದುವರಿದೇ ಇದೆ. ಎರಡೂ ಕಡೆಯವರು ಪ್ರತಿಕಾರವಾಗಿ ಹತ್ಯಾಕಾಂಡ ನಡೆಸುತ್ತಿದ್ದು, ಕಳೆದೆರಡು ದಿನಗಳಲ್ಲಿ ಸೈನಿಕರು, ಬಂಡುಕೋರರು, ನಾಗರಿಕರು ಸೇರಿದಂತೆ ಸಾವಿರಕ್ಕೂ ಅಧಿಕ ಜೀವಗಳು ಬಲಿಯಾಗಿವೆ.

ಎರಡೂ ಬಣಕ್ಕೂ ಸೇರದ ಸಂಘರ್ಷ ಮೇಲ್ವಿಚಾರಣೆ ನಡೆಸುತ್ತಿರುವ ಬ್ರಿಟನ್ ಮೂಲದ ಸಿರಿಯನ್ ಮಾನವ ಹಕ್ಕುಗಳ ಗುಂಪು ಈ ಮಾಹಿತಿಯನ್ನು ಭಾನುವಾರ ಹಂಚಿಕೊಂಡಿದೆ. 14 ವರ್ಷಗಳ ಹಿಂದೆ ಸಿರಿಯದಲ್ಲಿ ಆಂತರಿಕ ಸಂಘರ್ಷ ಶುರುವಾದಾಗಿನಿಂದ ಈವರೆಗೆ ನಡೆದ ಹಿಂಸಾಚಾರ ಘಟನೆಗಳಲ್ಲಿಯೇ ಇದು ಅತ್ಯಂತ ಮಾರಕ ಎಂದು ವ್ಯಾಖ್ಯಾನಿಸಿದೆ.

ಸರಕಾರದ ಸೇನಾಪಡೆ, ಮಾಜಿ ಅಧ್ಯಕ್ಷರ ಬೆಂಬಲದ ಬಂಡುಕೋರರ ಪಡೆಯ ನಡುವೆ ನಡೆದ ಗುಂಡಿನ ದಾಳಿಯಲ್ಲಿ ಸರಕಾರದ ಭದ್ರತಾ ಪಡೆಯ 125 ಸದಸ್ಯರು ಮತ್ತು ಮಾಜಿ ಅಧ್ಯಕ್ಷ ಅಸ್ಸಾದ್‌ಗೆ ಸಂಬಂಧಿಸಿದ ಸಶಸ್ತ್ರ ಗುಂಪುಗಳ 148 ಹೋರಾಟಗಾರರು ಹಾಗೂ 745 ನಾಗರಿಕರು ಸೇರಿದಂತೆ ಒಟ್ಟು 1018 ಮಂದಿ ಮೃತರಾಗಿದ್ದಾರೆ. ಸುನ್ನಿಗಳು ಮತ್ತು ಅಲಾವೈಟ್‌ಗಳ ನಡುವಿನ ಪ್ರತೀಕಾರದ ಹತ್ಯಾಕಾಂಡವಾಗಿದೆ ಎಂದು ಹೇಳಿದೆ.

ಸಂಘರ್ಷ ತೀವ್ರವಾಗಿರುವ ಹಿನ್ನೆಲೆ ಲಟಾಕಿಯಾ ನಗರದ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್-ಕುಡಿಯುವ ನೀರಿನ ಸಂಪರ್ಕ ಕಡಿತಗೊಂಡಿದೆ ಎಂದು ತಿಳಿದುಬಂದಿದೆ.

ಸಿರಿಯದ ಲಟಕಿಯ ಪ್ರಾಂತ್ಯದಲ್ಲಿ ಸೆರೆ ಸಿಕ್ಕ ಬಂಡುಕೋರ ಗುಂಪಿನ ವ್ಯಕ್ತಿಯನ್ನು ಭದ್ರತಾ ಪಡೆ ಯೋಧರು ಭಾನುವಾರ ಕರೆದೊಯ್ದರು.

ಅಲಾವೈಟ್‌ಗಳನ್ನು, ಹೆಚ್ಚಿನಂಸ ಪುರುಷರನ್ನು ಬೀದಿಗಳಲ್ಲಿ, ಅವರ ಮನೆಯ ಬಾಗಿಲಲ್ಲಿಯೇ ನಿಲ್ಲಿಸಿ ಬಂಡುಕೋರರು ಗುಂಡಿಕ್ಕುತ್ತಿದ್ದಾರೆ. ಬಳಿಕ ಅಲಾವೈಟ್‌ಗಳ ಮನೆಗಳನ್ನು ಲೂಟಿ ಮಾಡುತ್ತಿದ್ದಾರೆ. ಕೆಲವೆಡೆ ಅಲಾವೈಟ್‌ಗಳಿರುವ ಇಡೀ ಪ್ರದೇಶಕ್ಕೇ ಬೆಂಕಿ ಹಚ್ಚಲಾಗುತ್ತಿದೆ ಎಂದು ಸಿರಿಯ ಕರಾವಳಿ ಪ್ರದೇಶದ ನಿವಾಸಿಗಳು ತಾವಿರುವ ಅಡಗುತಾಣದಿಂದಲೇ ಸುದ್ದಿಸಂಸ್ಥೆಗೆ ವಿವರ ನೀಡಿದ್ದಾರೆ.

## ಉಕ್ರೇನ್: ರಷ್ಯಾ ಗ್ಯಾಸ್ ಪೈಪ್‌ಲೈನ್ ದಾಳಿ ತಂತ್ರ

**ಕುರಸ್ಕ್:** ರಷ್ಯಾದ ಸೇನಾಪಡೆಗಳು ಉಕ್ರೇನ್ ವಿರುದ್ಧದ ಯುದ್ಧವನ್ನು ಮುಂದುವರಿಸಿದ್ದು, ಹಲವು ಬಗೆಯಲ್ಲಿ ದಾಳಿ ಮಾಡುತ್ತಿವೆ. ಟ್ಯಾಂಕ್‌ಗಳು, ಯುದ್ಧ ವಿಮಾನಗಳು, ಡ್ರೋನ್‌ಗಳನ್ನು ಬಳಸಿ ಉಕ್ರೇನ್‌ನ ವಿವಿಧ ಪ್ರದೇಶಗಳ ಮೇಲೆ ದಾಳಿ ನಡೆಸುತ್ತಿರುವ ರಷ್ಯಾ ಸೇನೆ, ಭಾನುವಾರ ಅಡುಗೆ ಅನಿಲದ ಕೊಳವೆ ಮಾರ್ಗ ಬಳಸಿಕೊಂಡು ಕುರಸ್ಕ್ ಪ್ರದೇಶದ ಮೇಲೆ ಹಿಂಬದಿಯಿಂದ ದಾಳಿ ನಡೆಸಿದೆ ಎಂದು ಸೇನಾಪಡೆ ಮೂಲಗಳು ತಿಳಿಸಿವೆ.

ರಷ್ಯಾ, ವರ್ಷ ಮೀರಿದ ಉಕ್ರೇನ್ ಮೇಲಿನ ಯುದ್ಧದಲ್ಲಿ ಅನಿಲ ಸರಬರಾಜು ಪೈಪ್‌ಲೈನ್‌ಗಳನ್ನೂ ಬಳಸಿಕೊಂಡು ದಾಳಿ ನಡೆಸಿರುವುದು ಇದೇ ಮೊದಲು ಎನ್ನಲಾಗಿದೆ. ಈ ವಿಚಾರದಿಂದ ದಿಗ್ಭ್ರಮೆಗೆ ಒಳಗಾಗಿರುವ ಉಕ್ರೇನ್ ಸೇನೆ, ರಷ್ಯಾ ಸೇನೆಯ ವಿಭಿನ್ನ ದಾಳಿಗೆ ತಕ್ಷಣದ ಪ್ರತಿಕ್ರಿಯೆ ನೀಡಲಾಗದೇ ಹೋಗಿದೆ ಎಂದು ತಿಳಿದುಬಂದಿದೆ.

ರಷ್ಯಾದ ಪಶ್ಚಿಮ ಭಾಗದಲ್ಲಿನ ಕುರಸ್ಕ್ ಪ್ರದೇಶದಲ್ಲಿ ನೆಲೆಗೊಂಡಿದ್ದ ಉಕ್ರೇನ್ ಸೈನಿಕರನ್ನು ಜಾಗ ಖಾಲಿ ಮಾಡುವಂತೆ ಮಾಡಲು ರಷ್ಯಾ ಈ ಅನಿಲ ಪೈಪ್‌ಲೈನ್ ದಾಳಿ ತಂತ್ರ ಹೆಣೆದಿದೆ ಎಂದು ಬ್ಲಾಗರ್‌ಗಳು ವರದಿ ಬಿತ್ತರಿಸಿದ್ದಾರೆ. ರಷ್ಯಾದ ಕುರಸ್ಕ್ ಪ್ರಾಂತ್ಯದ 1,300 ಚದರ ಕಿ.ಮೀ. ಪ್ರದೇಶವನ್ನು ಉಕ್ರೇನ್‌ನ ಸಾವಿರಾರು ಸೈನಿಕರು 2024ರ ಆಗಸ್ಟ್‌ನಲ್ಲಿಯೇ ಕೈವಶ ಮಾಡಿಕೊಂಡಿದ್ದರು. ಅವರನ್ನು ಆ ಜಾಗದಿಂದ ಸ್ಥಳಾಂತರಗೊಳ್ಳುವಂತೆ ಮಾಡಲೆಂದೇ ರಷ್ಯಾ ಈ ವಿಭಿನ್ನ ಯುದ್ಧತಂತ್ರವನ್ನು ಬಳಸಿಕೊಂಡಿದೆ ಎಂದು ವಿಶ್ಲೇಷಿಸಲಾಗಿದೆ.

### ರಷ್ಯಾ ರಾತ್ರಿ ಕ್ಷಿಪಣಿ ದಾಳಿಗೆ 25 ಸಾವು

ಉಕ್ರೇನ್‌ನ ಡೊನೆಟ್ಸ್ಕ್ ಪ್ರದೇಶದ ಡೊಬ್ರೊಪಿಲ್ಯಾ ಕೇಂದ್ರದ ಮೇಲೆ ರಷ್ಯಾ 2 ಬ್ಯಾಲಿಸ್ಟಿಕ್(ಖಂಡಾಂತರ) ಕ್ಷಿಪಣಿಗಳನ್ನು ಬಳಸಿ ಶುಕ್ರವಾರ ರಾತ್ರಿ ತೀವ್ರ ಸ್ವರೂಪದ ದಾಳಿ ನಡೆಸಿದ್ದರಿಂದ ಉಕ್ರೇನ್‌ನಲ್ಲಿ 25 ಮಂದಿ ಸಾವಿಗೀಡಾಗಿದ್ದು, ಐವರು ಮಕ್ಕಳು ಸೇರಿದಂತೆ 30 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಅಲ್ಲದೇ ಈ ಕ್ಷಿಪಣಿ ದಾಳಿಯಿಂದ 85 ಮಹಡಿಗಳ ಬೃಹತ್ ಅಪಾರ್ಟ್‌ಮೆಂಟ್ ಕಟ್ಟಡ, ಆಡಳಿತ ಕಟ್ಟಡ ಮತ್ತು ಅಗ್ನಿಶಾಮಕ ವಾಹನ ಹಾನಿಗೊಳಗಾಗಿವೆ ಎಂದು ಉಕ್ರೇನಿಯನ್ ಅಧಿಕಾರಿಗಳು ಶನಿವಾರ ತಿಳಿಸಿದ್ದಾಗಿ ಅಸೋಸಿಯೇಟೆಡ್ ಪ್ರೆಸ್ (ಎಪಿ) ವರದಿ ಮಾಡಿದೆ.

---

## ಸಮಾರಂಭಕ್ಕೆ ಪ್ಲಾಸ್ಟಿಕ್ ಬಾಟಲ್ ನಿಷೇಧ: ಹೈ

**ತಿರುವನಂತಪುರಂ:** ಮದುವೆ ಸಮಾರಂಭಗಳಲ್ಲಿ ಊಟಕ್ಕೆ ವಿಪರೀತ ಎನ್ನುವಷ್ಟು ಪ್ರಮಾಣದಲ್ಲಿ ನೀರಿನ ಪ್ಲಾಸ್ಟಿಕ್ ಬಾಟಲ್ ಬಳಕೆ ಆಗುತ್ತಿರುವುದರಿಂದ ಪರಿಸರ ಮಾಲಿನ್ಯ ಹೆಚ್ಚುತ್ತಿದೆ ಎಂದು ಕಳವಳ ವ್ಯಕ್ತಪಡಿಸಿರುವ ಕೇರಳ ಹೈಕೋರ್ಟ್, ರಾಜ್ಯದಲ್ಲಿ ಇನ್ನು ಮುಂದೆ

ಮದುವೆ ಸೇರಿದಂತೆ ಯಾವುದೇ ಕಾರ್ಯಕ್ರಮ, ಸಮಾರಂಭಗಳಲ್ಲಿ ಕುಡಿಯುವ ನೀರು ಒದಗಿಸಲು ಪ್ಲಾಸ್ಟಿಕ್ ಬಾಟಲ್ ಬಳಕೆ ನಿಷೇಧಿಸಿ ಆದೇಶ ಹೊರಡಿಸಿದೆ. ಪರಿಸರ ಕಾಳಜಿ ತೋರುವಂತೆ ಜನರಿಗೆ ತಿಳಿಹೇಳಿದೆ. ಮರುಬಳಕೆ ಮಾಡಲಾಗದ ಪ್ಲಾಸ್ಟಿಕ್ ನಿವಾರಿಸಲು ಕಠಿಣ ಕ್ರಮ ಅಗತ್ಯ ಎಂದು ಪೀಠ ಹೇಳಿದೆ.

ಘನತ್ಯಾಜ್ಯ ನಿರ್ವಹಣಾ ನಿಯಮ-2016ಕ್ಕೆ ಸಂಬಂಧಿಸಿ ಸುಮೋಟೊ ಪ್ರಕರಣದ ವಿಚಾರಣೆ ನಡೆಸುತ್ತಿದ್ದ ನ್ಯಾಯಾಲಯ, ಪ್ಲಾಸ್ಟಿಕ್ ನೀರಿನ ಬಾಟಲ್ ನಿಷೇಧವನ್ನು ಪ್ರಾಯೋಗಿಕವಾಗಿ ಹೇಗೆ ಜಾರಿಗೆ ತರಬಹುದು? ಎಂದೂ ಸರಕಾರವನ್ನು ಪ್ರಶ್ನೆ ಮಾಡಿದೆ

ಮದುವೆ-ಆರತಕ್ಷತೆ ಕಾರ್ಯಕ್ರಮಗಳಲ್ಲಿ 500 ಎಂಎಲ್ ಬಾಟಲ್ ನೀರು ಬಳಕೆಗೆ ನಿಷೇಧವಿದೆ. ಗುಡ್ಡಗಾಡು ಪ್ರದೇಶಗಳಲ್ಲಿ ಪ್ಲಾಸ್ಟಿಕ್ ನಿಷೇಧಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. 100ಕ್ಕೂ ಹೆಚ್ಚು ಜನ ಸೇರುವ ಕಾರ್ಯಕ್ರಮಗಳಲ್ಲಿ ಪ್ಲಾಸ್ಟಿಕ್ ಬಳಕೆಗೆ ಅನುಮತಿ ಅಗತ್ಯ ಎಂಬ ಕಾಯಿದೆ ಇದೆ. ಸ್ಥಳೀಯ ಆಡಳಿತ ಸಂಸ್ಥೆಗಳು ಈ ಪರವಾನಗಿ ನೀಡುವ ಅಧಿಕಾರವನ್ನು ಹೊಂದಿವೆ. ಇದೇ ಬಗೆಯಲ್ಲಿ ಪ್ಲಾಸ್ಟಿಕ್ ಬಾಟಲ್ ನಿಷೇಧ ಆದೇಶ ಜಾರಿಗೊಳಿಸಬಹುದು ಎಂದು ರಾಜ್ಯ ಸರಕಾರ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

## ಕ್ಯಾಲಿಫೋರ್ನಿಯದಲ್ಲಿ ಸ್ವಾಮಿ ನಾರಾಯಣ ಮಂದಿರ ವಿರೂಪ

**ವಾಷಿಂಗ್ಟನ್:** ಕ್ಯಾಲಿಫೋರ್ನಿಯದ ಚಿನೋ ಹಿಲ್ಸ್‌ನಲ್ಲಿನ ಹಿಂದೂ ದೇವಾಲಯವಾದ 'ಶ್ರೀ ಸ್ವಾಮಿ ನಾರಾಯಣ ಮಂದಿರ'ದ ಮೇಲೆ ದಾಳಿ ಮಾಡಿರುವ ದುಷ್ಕರ್ಮಿಗಳು, ದೇಗುಲದ ಪ್ರವೇಶ ದ್ವಾರ ಬಳಿ ಇರುವ ಹೆಸರಿನ ಫಲಕದ ಮೇಲೆ 'ಮೋದಿ-ಹಿಂದೂಸ್ತಾನ್ ಮುರ್ದಾಬಾದ್' ಎಂದು ಬರೆದು ದೇಗುಲ ವಿರೂಪಗೊಳಿಸಲು ಯತ್ನಿಸಿದ್ದಾರೆ.




ದುಷ್ಕರ್ಮಿಗಳು ಅಮೆರಿಕ ನೆಲದಲ್ಲಿನ ದೇಗುಲದ ಮೇಲೆ ದಾಳಿ ನಡೆಸಿ ಹಿಂದೂ ಧಾರ್ಮಿಕ ಭಾವನೆಗೆ ಧಕ್ಕೆ ತಂದಿರುವುದಕ್ಕೆ ಭಾರತ ತೀವ್ರವಾಗಿ ಖಂಡಿಸಿದೆ. ನೀಚ ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಅಮೆರಿಕ ಸರಕಾರವನ್ನು ಒತ್ತಾಯಿಸಿದೆ. ಸರಣಿಯೋಪಾದಿಯಲ್ಲಿ ಹಿಂದೂ ಧಾರ್ಮಿಕ ಕೇಂದ್ರಗಳ ಮೇಲೆ ಕಿಡಿಗೇಡಿಗಳು ದಾಳಿ ನಡೆಸುತ್ತಿರುವ ಹಿನ್ನೆಲೆ ಪೂಜಾ ಸ್ಥಳಗಳಿಗೆ ಹೆಚ್ಚಿನ ಭದ್ರತೆ ಒದಗಿಸುವಂತೆ ಭಾರತ ಒತ್ತಾಯಿಸಿದೆ. ಕೆಲ ವರ್ಷಗಳಲ್ಲಿ ಅಮೆರಿಕದಲ್ಲಿ ಹಿಂದೂ ಮಂದಿರಗಳ ಮೇಲೆ ದಾಳಿಯಾಗಿದೆ, 10 ದೇವಾಲಯಗಳ ಹುಂಡಿಗಳಲ್ಲಿ ಕಳವು ನಡೆದಿದೆ ಎಂಬ ಪಟ್ಟಿಯನ್ನು ಉತ್ತರ ಅಮೆರಿಕದ ಹಿಂದೂಗಳ ಒಕ್ಕೂಟ ಸರಕಾರಕ್ಕೆ ನೀಡಿದೆ.

ಹಿಂದೂ ಸಮುದಾಯ ವಿರುದ್ಧ ದ್ವೇಷದ ಪ್ರದರ್ಶನದ ಮತ್ತೊಂದು ಘಟನೆ ಇದಾಗಿದೆ. ಸಮುದಾಯ ದ್ವೇಷವನ್ನು ಎಂದಿಗೂ ಬೇರೂರಲು ಬಿಡುವುದಿಲ್ಲ ಮತ್ತು ಶಾಂತಿ ಮೇಲುಗೈ ಸಾಧಿಸುತ್ತದೆ ಎಂದು ಹೇಳಿದೆ.

### ಭಾರತ ತೀವ್ರ ಖಂಡನೆ

ದೆಹಲಿ: ಕ್ಯಾಲಿಫೋರ್ನಿಯದ ಶ್ರೀನಾರಾಯಣ ಮಂದಿರದ ಮೇಲಾಗಿರುವ ವಿಧ್ವಂಸಕ ಕೃತ್ಯದ ವರದಿಗಳನ್ನು ನೋಡಿದ್ದೇವೆ. ಹೇಯ ಕೃತ್ಯಗಳನ್ನು ಅತ್ಯಂತ ಕಠಿಣ ಪದಗಳಲ್ಲಿ ಖಂಡಿಸುತ್ತೇವೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ದೆಹಲಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮಕ್ಕೆ ಮತ್ತು ಧಾರ್ಮಿಕ ಕೇಂದ್ರಗಳಿಗೆ ಭದ್ರತೆ ಗಾಗಿ ಅಮೆರಿಕದ ಕಾನೂನು ಜಾರಿ ಅಧಿಕಾರಿಗಳನ್ನು ಒತ್ತಾಯಿಸುತ್ತೇವೆ ಎಂದು ಜೈಸ್ವಾಲ್ ಹೇಳಿದ್ದಾರೆ.

## ಜಾಧವ್ ಅಪಹರಣಕ್ಕೆ ನೆರವಾದ ಕಳ್ಳಸಾಗಣೆದಾರ ಮೀರ್‌ಗೆ ಗುಂಡು

**ಇಸ್ಲಾಮಾಬಾದ್:** ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಜತೆಗೂಡಿ ಕೆಲಸ ಮಾಡಿ ಭಾರತೀಯ ನೌಕಾಪಡೆ ಮಾಜಿ ಅಧಿಕಾರಿ ಕುಲಭೂಷಣ್ ಜಾಧವ್ ಅವರ ಅಪಹರಣಕ್ಕೆ ಕಾರಣವಾಗಿದ್ದ ನಕಲಿ ವಿದ್ವಾಂಸ, ಶಸ್ತ್ರಾಸ್ತ್ರ ಮತ್ತು ಮಾನವ ಕಳ್ಳಸಾಗಣೆದಾರ ಮುಫ್ತಿ ಶಾ ಮೀರ್‌ನನ್ನು ಶುಕ್ರವಾರ ರಾತ್ರಿ ಅಪರಿಚಿತ ವ್ಯಕ್ತಿಗಳು ಗುಂಡಿಕ್ಕಿ ಕೊಂದಿದ್ದಾರೆ.

ಬಲೂಚಿಸ್ತಾನ ಪ್ರದೇಶದಲ್ಲಿ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಅಪರಿಚಿತ ಬಂದೂಕುಧಾರಿಗಳು ಮೀರ್‌ಗೆ ಗುಂಡಿಕ್ಕಿದ್ದಾರೆ. ತೆರೆಮರೆಯಲ್ಲಿ ಉಗ್ರ ಸಂಘಟನೆಗಳಿಗೆ ನೆರವಾಗುತ್ತಿದ್ದ ಮುಫ್ತಿ ಶಾ ಮೀರ್, ಬಲೂಚಿಸ್ತಾನದಲ್ಲಿ ಪ್ರಮುಖ ಧಾರ್ಮಿಕ ವಿದ್ವಾಂಸನಂತೆ ಸೋಗು ಮಾಡುತ್ತಿದ್ದ. ಶುಕ್ರವಾರ ರಾತ್ರಿ, ಟರ್ಬಾಟ್‌ನಲ್ಲಿನ ಮಸೀದಿಯಲ್ಲಿ ಪ್ರಾರ್ಥನೆ ಮಾಡಿದ ನಂತರ ಹೊರಬಂದ ಮೀರ್‌ನತ್ತ ಮೋಟಾರ್ ಬೈಕ್‌ನಲ್ಲಿ ಬಂದ ಬಂದೂಕುಧಾರಿಗಳು ಹಠಾತ್ ದಾಳಿ ನಡೆಸಿ ಅಷ್ಟೇ ವೇಗದಲ್ಲಿ ಕಣ್ಮರೆಯಾಗಿದ್ದಾರೆ. ಹಲವು ಗುಂಡುಗಳು ದೇಹ ಹೊಕ್ಕಿದ್ದರಿಂದ ರಕ್ತದ ಮಡುವಿನಲ್ಲಿ ಬಿದ್ದಿದ್ದ ಮುಫ್ತಿಯನ್ನು ತಕ್ಷಣವೇ ಕರೆದೊಯ್ದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೇ ಕೊನೆಯುಸಿರೆಳೆದಿದ್ದಾನೆ. ಮೀರ್ ಮೇಲೆ ಈ ಹಿಂದೆಯೂ ಎರಡು ಬಾರಿ ಗುಂಡಿನ ದಾಳಿ ನಡೆದಿತ್ತು. ಸ್ವಲ್ಪದರಲ್ಲಿಯೇ ಪಾರಾಗಿದ್ದ. ಆದರೆ, ಮೂರನೇ ದಾಳಿಯಲ್ಲಿ ಜೀವ ಕಳೆದುಕೊಂಡ ಎಂದು ಮೂಲಗಳು ತಿಳಿಸಿವೆ. ಕಳೆದ ವಾರ ಬಲೂಚಿಸ್ತಾನದ ಮೂರನೇ ಅತಿದೊಡ್ಡ ನಗರವಾದ ಖುಜ್ದಾರ್‌ನಲ್ಲಿ ಮುಫ್ತಿ ಶಾ ಮೀರ್ ಪಕ್ಷದ ಇಬ್ಬರು ಸದಸ್ಯರನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು.

### ಉಗ್ರರ ನುಸುಳುವಿಕೆಗೆ ನೆರವಗುತ್ತಿದ್ದ ಮೀರ್

ಮೂಲಭೂತವಾದಿ ಪಕ್ಷವಾದ ಜಮೀಯತ್ ಉಲೆಮಾ-ಇ -ಇಸ್ಲಾಂ (ಜೆಯುಐ) ನ ಸದಸ್ಯನಾಗಿದ್ದ ಮೀರ್, ಶಸ್ತ್ರಾಸ್ತ್ರ ಮತ್ತು ಮಾನವ ಕಳ್ಳಸಾಗಣೆದಾರನಾಗಿದ್ದ. ಐಎಸ್‌ಐ ಜತೆಗೂ ನಂಟು ಹೊಂದಿದ್ದ. ಆಗಾಗ್ಗೆ ಪಾಕಿಸ್ತಾನದ ಭಯೋತ್ಪಾದಕರ ತರಬೇತಿ ಶಿಬಿರಗಳಿಗೆ ಭೇಟಿ ನೀಡುತ್ತಿದ್ದ. ಭಯೋತ್ಪಾದಕರು ಭಾರತೀಯ ಪ್ರಾಂತ್ಯಕ್ಕೆ ಒಳನುಸುಳಲು ಸಹಾಯ ಮಾಡುತ್ತಿದ್ದ ಎಂದು ವರದಿಗಳು ಪ್ರಕಟವಾಗಿವೆ.

---

## ಭಾರತ-ಪಾಕಿಸ್ತಾನ ಗಡಿ ಭಾಗಕ್ಕೆ ಪ್ರಯಾಣಿಸದಿರಿ

**ದೆಹಲಿ:** ಭಯೋತ್ಪಾದನೆ ಕೃತ್ಯ ಹೆಚ್ಚಳ ಮತ್ತು ಎರಡೂ ದೇಶಗಳ ಸೇನೆಗಳ ನಡುವೆ ಸಶಸ್ತ್ರ ಸಂಘರ್ಷ ಸಾಧ್ಯತೆ ಹೆಚ್ಚುವ ಸಾಧ್ಯತೆ ಇರುವುದರಿಂದ ಭಾರತ-ಪಾಕಿಸ್ತಾನ ಗಡಿ ಮತ್ತು ನಿಯಂತ್ರಣ

ರೇಖೆ(ಎಲ್‌ಒಸಿ) ಸಮೀಪದ ಪ್ರದೇಶಗಳಿಗೆ ಸಂಚಾರ ನಡೆಸದಂತೆ ತನ್ನ ದೇಶದ ಪ್ರಜೆಗಳಿಗೆ ಅಮೆರಿಕ ಎಚ್ಚರಿಕೆ ಸಂದೇಶ ರವಾನಿಸಿದೆ. ಜತೆಗೆ ಪಾಕಿಸ್ತಾನದ ಬಲೂಚಿಸ್ತಾನ ಮತ್ತು ಖೈಬರ್‌ಪಖ್ತುಂಕ್ವಾ ಪ್ರಾಂತ್ಯಗಳಿಗೂ ತೆರಳದಂತೆ ಅಮೆರಿಕ ತನ್ನ ದೇಶವಾಸಿಗಳನ್ನು ಎಚ್ಚರಿಸಿದೆ. ಉಗ್ರ ಚಟುವಟಿಕೆ, ಉಭಯ ದೇಶಗಳ ನಡುವೆ ಸಂಘರ್ಷ ಸಾಧ್ಯತೆಯಿರುವುದರಿಂದ ಅಮೆರಿಕ ಪ್ರಜೆಗಳು ಆ ಭಾಗಕ್ಕೆ ಪ್ರಯಾಣಿಸುವ ವಿಚಾರವನ್ನು ಮರುಪರಿಶೀಲಿಸಬೇಕು ಎಂದು ಅಮೆರಿಕ ವಿದೇಶಾಂಗ ಇಲಾಖೆ ಸಲಹೆ ನೀಡಿದೆ. ಉಗ್ರರು ಸಂಚಾರ ಸಾರಿಗೆ ಕೇಂದ್ರ, ವಿಮಾನ ನಿಲ್ದಾಣ, ಮಾರುಕಟ್ಟೆ, ಶಾಪಿಂಗ್ ಮಾಲ್, ವಿಶ್ವವಿದ್ಯಾಲಯ, ಪ್ರವಾಸಿ ಆಕರ್ಷಣೆ ಸ್ಥಳಗಳು, ಆಸ್ಪತ್ರೆ, ಧಾರ್ಮಿಕ ಕೇಂದ್ರಗಳು, ಸೇನಾ ನೆಲೆಗಳನ್ನು ಗುರಿಯಾಗಿಸಿ ದಾಳಿ ಮಾಡಬಹುದು. ಉಗ್ರರು ಈ ಹಿಂದೆ ಅಮೆರಿಕ ರಾಜತಾಂತ್ರಿಕರನ್ನು ಗುರಿಯಾಗಿಸಿಕೊಂಡಿದ್ದರು ಎಂಬುದನ್ನು ಮರೆಯಬಾರದು ಎಂದು ಸಚಿವಾಲಯ ಎಚ್ಚರಿಸಿದೆ.

## ಉಪ ರಾಷ್ಟ್ರಪತಿ ಧನ್‌ಕರ್ ಆಸ್ಪತ್ರೆಗೆ

**ದೆಹಲಿ:** ದೇಶದ ಉಪ ರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರಿಗೆ ಭಾನುವಾರ ನಸುಕಿನಲ್ಲಿ ಹಠಾತ್ತನೆ ಎದೆನೋವು ಕಾಣಿಸಿಕೊಂಡಿದೆ. ಆ ಬಳಿಕ ಅವರನ್ನು ಬೆಳಗಿನ ಜಾವ 2

ಗಂಟೆಗೆ ದೆಹಲಿಯ 'ಏಮ್ಸ್' ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗಿದೆ. ಪ್ರಸ್ತುತ ಅವರನ್ನು ಕ್ರಿಟಿಕಲ್ ಕೇರ್ ಯೂನಿಟ್ (ಸಿಸಿಯು)ನಲ್ಲಿ ಸತತ ನಿಗಾದಲ್ಲಿಡಲಾಗಿದೆ. ಏಮ್ಸ್ ಹೃದ್ರೋಗ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ರಾಜೀವ್ ನಾರಂಗ್ ಅವರ ನೇತೃತ್ವದಲ್ಲಿ ಧನಕರ್ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ವೈದ್ಯರ ತಂಡವು ಅವರ ಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ.

ಸುದ್ದಿ ತಿಳಿಯುತ್ತಲೇ ಆಸ್ಪತ್ರೆಗೆ ಧಾವಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಧನಕರ್ ಅವರ ಆರೋಗ್ಯದ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದುಕೊಂಡರು. ಧನ್‌ಕರ್ ಕುಟುಂಬದವರ ಜತೆ ಮಾತನಾಡಿ ಧೈರ್ಯ ಹೇಳಿದರು. ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸುವೆ ಎಂದರು.

ಕೇಂದ್ರ ಆರೋಗ್ಯ ಸಚಿವ, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಅವರೂ ಆಸ್ಪತ್ರೆಗೆ ಭೇಟಿ ನೀಡಿ ಉಪಾಧ್ಯಕ್ಷ ಧನಕರ್ ಅವರ ಆರೋಗ್ಯ ವಿಚಾರಿಸಿದರು.

## ಟ್ರಂಪ್ ಒತ್ತಡಕ್ಕೆ ಮಣಿದ ಮೋದಿ: ಕಾಂಗ್ರೆಸ್ ಟೀಕೆ

**ದೆಹಲಿ:** ಅಮೆರಿಕದ ಉತ್ಪನ್ನಗಳಿಗೆ ವಿಧಿಸಲಾಗುತ್ತಿದ್ದ ಸುಂಕ ದರವನ್ನು ಕಡಿತ ಮಾಡುವ ಮೂಲಕ ಕೇಂದ್ರದ ಎನ್‌ಡಿಎ ಸರಕಾರ ಅಮೆರಿಕದ ನೂತನ ಅಧ್ಯಕ್ಷರ ಒತ್ತಡಕ್ಕೆ ಮಣಿದಿದೆ ಎಂದು ಕಾಂಗ್ರೆಸ್ ಟೀಕಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಸಮರ ಬೆದರಿಕೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಸರಕಾರ ಹೆದರಿದೆ. ಟ್ರಂಪ್ ಸರಕಾರದ ಒತ್ತಡಕ್ಕೆ ಮೋದಿ ಸರಕಾರ ಮಣಿದು ಅಮೆರಿಕ ಉತ್ಪನ್ನಗಳ ಮೇಲಿನ ಸುಂಕ ದರವನ್ನು ಕಡಿತ ಮಾಡಲು ಒಪ್ಪಿಕೊಂಡಿದೆ ಎಂದು ಕಾಂಗ್ರೆಸ್ ನಾಯಕ ಪವನ್ ಖೇರಾ ಭಾನುವಾರ ಟೀಕೆ ಮಾಡಿದ್ದಾರೆ. ಮೋದಿ ಸರಕಾರ ಮತ್ತು ಟ್ರಂಪ್ ಆಡಳಿತದ ನಡುವಿನ ಈ ವ್ಯವಹಾರದಲ್ಲಿ ಪಾರದರ್ಶಕತೆಯೇ ಇಲ್ಲವಾಗಿದೆ. ಭಾರತ ಸರಕಾರ ಯಾವುದಾದರೂ ಮಹತ್ವದ ಕ್ರಮವನ್ನು ಕೈಗೊಂಡರೆ ಅದನ್ನು 140 ಭಾರತೀಯರು ಅಮೆರಿಕದ ಅಧ್ಯಕ್ಷರ ಹೇಳಿಕೆ, ಸುದ್ದಿಗೋಷ್ಠಿಯಿಂದ ಮಾತ್ರವೇ ತಿಳಿದುಕೊಳ್ಳುವಂತಾಗಿದೆ ಎಂದು ಖೇರಾ ವ್ಯಂಗ್ಯವಾಡಿದ್ದಾರೆ.

ಇದೇ ವೇಳೆ, ಅಮೆರಿಕ ಪ್ರವಾಸದಲ್ಲಿರುವ ವಾಣಿಜ್ಯ ಸಚಿವ ಪಿಯೂಶ್ ಗೋಯಲ್ ಅವರು ಏನು ಮಾಡುತ್ತಿದ್ದಾರೆ ಎಂಬುದೇ ತಿಳಿಯದಾಗಿದೆ. ಅವರೂ ಕೂಡಾ ಟ್ರಂಪ್ ಸರಕಾರದ ಸಚಿವರುಗಳ ಒತ್ತಡಕ್ಕೆ ಮಣಿದು ಒಪ್ಪಂದಗಳಿಗೆ ಸಹಿ ಹಾಕಿದಂತಿದೆ ಎಂದು ಕಾಂಗ್ರೆಸ್ ನಾಯಕ ಅಣಕವಾಡಿದ್ದಾರೆ.

## ಮಣಿಪುರ ಮತ್ತೆ ಕೆಲವೆಡೆ ಉದ್ವಿಗ್ನ

**ಇಂಫಾಲ:** ಸದ್ಯ ರಾಷ್ಟ್ರಪತಿ ಆಡಳಿತದಲ್ಲಿರುವ ಮಣಿಪುರ ರಾಜ್ಯವನ್ನು ಸಹಜ ಸ್ಥಿತಿಗೆ ತರಲು ಕೇಂದ್ರ ಗೃಹ ಸಚಿವಾಲಯ ಹಲವು ಕ್ರಮಗಳನ್ನು ಕೈಗೊಳ್ಳುತ್ತಿರುವ ಮಧ್ಯೆಯೇ ರಾಜ್ಯದ

ಕೆಲವೆಡೆ ಭಾನುವಾರ ಉದ್ವಿಗ್ನತೆ ಉಂಟಾಗಿದೆ.

ಹಿಂಸಾಚಾರ ಪೀಡಿತ ಕಾಂಗ್‌ಪೋಕ್ಪಿ ಜಿಲ್ಲೆಯ ಕೆಲವೆಡೆ ಭಾನುವಾರ ಬೆಳಗ್ಗೆಯೇ ಘರ್ಷಣೆ, ಪ್ರತಿಭಟನೆ, ರಸ್ತೆ ತಡೆ ನಡೆದಿವೆ. ರಾಜ್ಯದ ಗೃಹ ಇಲಾಖೆ ತಕ್ಷಣವೇ ಹೆಚ್ಚಿನ ಭದ್ರತಾ ಪಡೆಗಳನ್ನು ಸ್ಥಳಕ್ಕೆ ರವಾನಿಸಿದೆ. ಕುಕಿ ಉಗ್ರರ ಪ್ರಭಾವವಿರುವ ಈ ಪ್ರದೇಶದಲ್ಲಿ ಕುಕಿ ಸಮುದಾಯದ ಕೆಲವರು ಪ್ರತಿಭಟನೆ ಆರಂಭಿಸಿದ್ದಾರೆ.

ಕಾಂಗ್‌ಪೋಕ್ಪಿ ಜಿಲ್ಲೆಯ ಒಂದೆಡೆ ಶನವಾರ ಕುಕಿ ಪ್ರತಿಭಟನಾಕಾರರು ಮತ್ತು ಭದ್ರತಾ ಪಡೆಗಳ ನಡುವಿನ ಘರ್ಷಣೆಯಲ್ಲಿ ಒಬ್ಬ ಪ್ರತಿಭಟನಾಕಾರ ಗುಂಡೇಟಿನಿಂದ ಗಾಯಗೊಂಡಿದ್ದ. ಪೊಲೀಸರೂ ಸೇರಿದಂತೆ 40 ಮಂದಿ ಗಾಯಗೊಂಡಿದ್ದರು. ಗುಂಡೇಟು ಬಿದ್ದಿದ್ದ ಪ್ರತಿಭನಾಕಾರನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಅಸುನೀಗಿದೆ. ಈ ಸುದ್ದಿ ತಿಳಿದ ಬಳಿಕ ಭಾನುವಾರ ನಸುಕಿನಲ್ಲೇ ಕಾಂಗ್‌ಪೋಕ್ಪಿ ಉದ್ವಿಗ್ನಗೊಂಡಿದೆ.

# ನಂದಿ ಸಹಕಾರಿ ಕಾರ್ಖಾನೆ ನಮ್ಮ ಅಸ್ಮಿತೆ

## ಸಹಕಾರಿ ಧುರೀಣ ಕೆ.ಎಚ್.ಪಾಟೀಲ ಜನ್ಮ ಶತಮಾನೋತ್ಸವದಲ್ಲಿ ಸಚಿವ ಎಂ.ಬಿ.ಪಾಟೀಲ

**ವಿಜಯಪುರ:** ಕೇಂದ್ರ ಸರಕಾರದ ವತಿಯಿಂದ ಎನ್.ಎಸ್.ಡಿ.ಸಿ. ವತಿಯಿಂದ ಸಹಕಾರ ಸಕ್ಕರೆಗಳಿಗೆ 2 ಸಾವಿರ ಕೋಟಿ ರು. ಸಾಲ ನೀಡುತ್ತಿದ್ದು, ಅದರಲ್ಲಿ 150 ಕೋಟಿ ರು. ಸಾಲವನ್ನು ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ಬಿಡುಗಡೆ ಮಾಡುವಂತೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲ ಹೇಳಿದರು.

ಬಬಲೇಶ್ವರ ತಾಲೂಕಿನ ಕೃಷ್ಣಾನಗರದಲ್ಲಿರುವ ರೈತ ಸಭಾಭವನದಲ್ಲಿ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ಸಹಕಾರಿ ಧುರೀಣ ದಿ.ಕೆ.ಎಚ್. ಪಾಟೀಲ ಅವರ ಜನ್ಮಶತಮಾನೋತ್ಸವ ಹಾಗೂ ಹೊಸ ಷೇರುಗಳ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲ ಜನಪ್ರತಿನಿಧಿಗಳೊಂದಿಗೆ ಈ ಹಿಂದೆಯೂ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಅನುದಾನ ಪಡೆಯಲಾಗಿತ್ತು, ಆದರೆ ಅಷ್ಟು ಅನುದಾನ ಸಾಲದು, ಹೀಗಾಗಿ ಎನ್.ಸಿ.ಡಿ.ಅಡಿಯಲ್ಲಿ 150 ಕೋಟಿ ರು. ಸಾಲವನ್ನು ಒದಗಿಸಲು ಪ್ರಸ್ತಾವನೆ ಸಲ್ಲಿಕೆ ಮಾಡಲಾಗಿದೆ ಎಂದರು.

ನಂದಿ ಸಹಕಾರಿ ಕಾರ್ಖಾನೆ ನಮ್ಮ ಅಸ್ಮಿತೆ, ಹೀಗಾಗಿ ಈ ಕಾರ್ಖಾನೆ ರಕ್ಷಣೆಗಾಗಿ ಷೇರು ಸಂಗ್ರಹಣೆ ಮಾಡುವ ಕಾರ್ಯಕ್ಕೆ ವೇಗ ನೀಡಲಾಗಿದೆ. ಅವಳಿ ಜಿಲ್ಲೆಯ ಅನೇಕ ಭಾಗಗಳು ಸಮೃದ್ಧಿಯಾಗಲು ನಂದಿ ಸಹಕಾರ ಸಕ್ಕರೆ ಕಾರ್ಖಾನೆಯೇ ನಾಂದಿ. 10 ಕೋಟಿ ರು.ಗಳ ಷೇರುಗಳನ್ನು ನನ್ನ ವೈಯುಕ್ತಿಕ ಸಂಪರ್ಕ ಆಧರಿಸಿ ನೀಡುವ ನಿರ್ಧಾರ ಮಾಡಿರುವೆ, ಈ ಕಾರ್ಖಾನೆಯಿಂದ ಸಮೃದ್ಧತೆ ಹೊಂದಿದವರು ಕಾರ್ಖಾನೆಯನ್ನು ತಂದೆತಾಯಿ ಎಂದು ತಿಳಿದು ಷೇರು ಖರೀದಿಸಿ ಎಂದು ಕರೆ ನೀಡಿದರು.

ಬಬಲೇಶ್ವರ ಸಮೀಪದ ಕೃಷ್ಣಾನಗರದಲ್ಲಿ ದಿ.ಕೆ.ಎಚ್. ಪಾಟೀಲರ ಜನ್ಮಶತಮಾನೋತ್ಸವ ಹಾಗೂ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆಯ ಹೊಸ ಶೇರುಗಳ ಬಿಡುಗಡೆ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು.

**ಒಗ್ಗಟ್ಟಾಗಿ ನಂದಿ ಕಾರ್ಖಾನೆ ಉಳಿಸಬೇಕಿದೆ:**

ಸಚಿವ ಶಿವಾನಂದ ಪಾಟೀಲ ಕೃಷಿ ಉತ್ಪನ್ನ ಮಾರುಕಟ್ಟೆ ಹಾಗೂ ಸಕ್ಕರೆ ಸಚಿವ ಶಿವಾನಂದ ಪಾಟೀಲ ಮಾತನಾಡಿ, ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ರಾಜ್ಯ ಸಹಕಾರಿ ರಂಗದ ಮುಕುಟವಿದ್ದಂತೆ, ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ಉಳಿಸುವ ನಿಟ್ಟಿನಲ್ಲಿ ಒಗ್ಗಟ್ಟಾಗಿ ಕೆಲಸ ಮಾಡಬೇಕಿದೆ ಎಂದರು. ಹಾನಿಯಾಗಿರುವ ಕಾರ್ಖಾನೆ ಷೇರು ಖರೀದಿ ಬೇಡ ಎನ್ನುವ ಮನೋಭಾವನೆ ಬೇಡ, ಸಂಕಷ್ಟ ಬಂದಿದೆ ಎಂದು ಕೈ ಬಿಡುವ ಕೆಲಸ ಬೇಡ, ಅನೇಕ ದಶಕಗಳಿಂದ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ಸಮೃದ್ಧತೆಗೆ ಕೊಡುಗೆ ನೀಡಿದೆ, ಉಳಿದ ಸಕ್ಕರೆ ಕಾರ್ಖಾನೆಗಳು ರೈತರಿಗೆ ಶೋಷಣೆ ಮಾಡಿದರೆ ನಂದಿ ಉತ್ತಮ ದರ ಹಾಗೂ ಸುಲಲಿತವಾದ ಬಿಲ್ ಪಾವತಿಗೆ ಹೆಸರಾಗಿದ್ದನ್ನು ಮರೆಯಬಾರದು ಎಂದರು.

ಈ ಹಿಂದೆ ಡಿಸಿಸಿ ಬ್ಯಾಂಕ್ 120 ಕೋಟಿ ರೂ.ಅಧಿಕ ಸಾಲವನ್ನು ಈ ಕಾರ್ಖಾನೆಗೆ ನೀಡಿದೆ. ಸಹಕಾರ ಚಳುವಳಿಗೆ ದಿವ್ಯ ಸ್ವರೂಪ ನೀಡಿದ ದಿ.ಕೆ.ಎಚ್. ಪಾಟೀಲರ ಕೊಡುಗೆ ಅನನ್ಯ. ಎನ್.ಸಿ.ಡಿ.ಸಿ. ಸಾಲವನ್ನು ನಶಿಸುತ್ತಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಒದಗಿಸುವ ನಿಟ್ಟಿನಲ್ಲಿ ಸಚಿವ ಎಂ.ಬಿ. ಪಾಟೀಲ ಮನಸ್ಸು ಮಾಡಿದರೆ ಕಷ್ಟವಿಲ್ಲ ಎಂದರು. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಮಾತನಾಡಿದರು.

ಕಾನೂನು ಸಚಿವ ಹೆಚ್.ಕೆ.ಪಾಟೀಲ, ಅಬಕಾರಿ ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ, ಮುದ್ದೇಬಿಹಾಳ ಶಾಸಕ ಸಿ.ಎಸ್. ನಾಡಗೌಡ ಮತ್ತು ಮಾಜಿ ಸಚಿವ ಎಸ್.ಆರ್. ಪಾಟೀಲ ಮಾತನಾಡಿದರು. ಈ ವೇಳೆ ಮಾಜಿ ಶಾಸಕ ಜೆ.ಟಿ. ಪಾಟೀಲ, ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಕುಮಾರ ದೇಸಾಯಿ, ಉಪಾಧ್ಯಕ್ಷ ಅಶೋಕ ಲೆಂಕಣ್ಣನವರ, ನಿರ್ದೇಶಕರಾದ ಶಶಿಕಾಂತಗೌಡ ಪಾಟೀಲ, ಹಣಮಂತ ಕೋರಡ್ಡಿ, ಡಿಸಿಸಿ ಬ್ಯಾಂಕ್ ಪ್ರತಿನಿಧಿ ಸತ್ಯಜಿತ್ ಪಾಟೀಲ, ಅದೃಶ್ಯಪ್ಪ ವಾಸಣ್ಣ ದೇಸಾಯಿ, ವ್ಯವಸ್ಥಾಪಕ ನಿರ್ದೇಶಕಿ ಭಾಗ್ಯಶ್ರೀ ಮೊದಲಾದವರು ಉಪಸ್ಥಿತರಿದ್ದರು.

> **ರೈತರ ತಾವು ಬೆಳೆದ ಬೆಳೆಗಳಿಗೆ ತಾವೇ ಬೆಲೆ ನಿರ್ಧರಿಸುವ ಮಟ್ಟಕ್ಕೆ ಬೆಳೆಯಬೇಕು ಎಂಬುದು ಸಹಕಾರಿ ಭೀಷ್ಮ ದಿ.ಕೆ.ಎಚ್. ಪಾಟೀಲರ ದಿವ್ಯ ಕನಸು ಹಾಗೂ ಆಶಯವಾಗಿತ್ತು, ನೂರಾರು ಜವಳಿ ಗಿರಣಿ ಆರಂಭಿಸಿ ಜವಳಿ ಉದ್ಯಮದಲ್ಲಿ ಕರ್ನಾಟಕ ಮ್ಯಾಂಚೆಸ್ಟರ್ ಆಗುವ ಬಯಕೆಯನ್ನು ಅವರು ಹೊಂದಿದ್ದರು ಎಂದರು. ರೈತರು, ಸಹಕಾರ ಸಂಘಗಳ ಪ್ರಗತಿಗಾಗಿ ಅನೇಕ ದಿಟ್ಟ ಹೆಜ್ಜೆ ಇರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.**
>
> **ಡಾ.ಎಂ.ಬಿ.ಪಾಟೀಲ**, ಸಚಿವ

## ಸಮಾಚಾರ ಸಣ್ಣದಲ್ಲ

### ನಿರ್ದೇಶಕರಾಗಿ ಅಶೋಕ ಕಟ್ಟಿ ಆಯ್ಕೆ

**ತಾಳಿಕೋಟಿ:** ಪಟ್ಟಣದ ಶ್ರೀಸಂಗಮೇಶ್ವರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಅಶೋಕ ಕಟ್ಟಿ ಇವರು ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢ ಶಾಲೆ ಇದರ ವಿಜಯಪುರ ಮಹಾಮಂಡಲದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಮಹಾಮಂಡಲದ ತೆರವಾದ ಒಂದು ಸ್ಥಾನಕ್ಕೆ (2025-26 ನೇ ಸಾಲಿನ) ಮಾರ್ಚ್ 7ರಂದು ನಡೆದ ಚುನಾವಣೆಯಲ್ಲಿ ಅಶೋಕ ಕಟ್ಟಿ ಇವರು ಅವಿರೋಧವಾಗಿ ಜಿಲ್ಲಾ ಮಹಾಮಂಡಲದ ನಿರ್ದೇಶಕರಾಗಿ ಆಯ್ಕೆಯಾದರು. ತಮ್ಮನ್ನು ವಿಜಯಪುರ ಜಿಲ್ಲಾ ಮಹಾಮಂಡಲದ ನಿರ್ದೇಶಕರಾಗಿ ಒಮ್ಮತ ಅಭಿಪ್ರಾಯದಿಂದ ಅವಿರೋಧವಾಗಿ ಆಯ್ಕೆ ಮಾಡಿದ ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢ ಶಾಲೆಗಳ ಶಿಕ್ಷಕ ವರ್ಗಕ್ಕೆ ಅಶೋಕ ಕಟ್ಟಿ ಅವರು ಕೃತಜ್ಞತೆಗಳನ್ನು ಸಲ್ಲಿಸಿ, ಅವರ ಆಶೋತ್ತರಗಳಿಗೆ ಸ್ಪಂದಿಸುವಂತೆ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ.

### ಓಟದ ಸ್ಪರ್ಧೆ: ರಾವತ ರಾಜ್ಯಮಟ್ಟಕ್ಕೆ ಆಯ್ಕೆ

**ತಾಳಿಕೋಟಿ:** ವಿಜಯಪುರ ಜಿಲ್ಲಾ ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ದೈಹಿಕ ಶಿಕ್ಷಣ ಶಿಕ್ಷಕರ ಕ್ರೀಡಾಕೂಟದಲ್ಲಿ ತಾಳಿಕೋಟೆ ತಾಲೂಕಿನ ಮಿಣಜಗಿ ಸರಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ ರಾವತ ಪೂಜೇರಿ ಇವರು 400 ಮೀಟರ್ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಕ್ಕೆ ಶಾಲಾ ಶಿಕ್ಷಣ ಇಲಾಖೆ ವಿಜಯಪುರ ಪ್ರಭಾರ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಯಾದ ಎಸ್ ಜಿ ಬಿರಾದರ ಅವರು ಪ್ರಶಸ್ತಿ ಪತ್ರವನ್ನು ನೀಡಿ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

### ಅಭಿವೃದ್ಧಿ ಪೂರಕ ಬಜೆಟ್: ಅಶೋಕಗೌಡ

**ಹೂವಿನ ಹಿಪ್ಪರಗಿ:** ಸುಮಾರು 4 ಲಕ್ಷ ಕೋಟಿ ರು.ಗಳ ದಾಖಲೆಯ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ದೇವರ ಹಿಪ್ಪರಗಿ

ಮತಕ್ಷೇತ್ರಕ್ಕೆ ತಾಲೂಕು ಪ್ರಜಾಸೌಧ ಮತ್ತು ದಿಂಡವಾರ ಮಾರ್ಗವಾಗಿ ಬೂದಿ ಹಾಳ, ಶರಣ ಸ್ ೋ ೀ ವ ್ ಂ ನ ಾ ಳ ್, ಸಾಸಾನೂರ, ಮುಖಿಹಾಳ ಮಾರ್ಗವಾಗಿ ನಾಲತವಾಡ ತಲುಪುವ ಎಸ್ಎಚ್-41ರಸ್ತೆ ಘೋಷಣೆ ಮಾಡಿರುವುದಕ್ಕೆ ಮುಖ್ಯಮಂತ್ರಿ ಗಳಿಗೆ ಧನ್ಯವಾದಗಳು ಮತ್ತು ಗ್ಯಾರಂಟಿ ಯೋಜನೆಗೆ 51,300 ಕೋಟಿ ರೋ ಮಿಸಲಿಡುವುದರ ಜೊತೆಗೆ ಶಿಕ್ಷಣ, ಕೃಷಿ, ಆರೋಗ್ಯ, ನೀರಾವರಿ, ಯುವ ಸಬಿಲಿ ಕರಣ ಉದ್ಯೋಗದ ಉತ್ತೇಜನ ಅಲ್ಪಸಂಖ್ಯಾತರು, ಹಿಂದುಳಿದವರು, ಎಸ್. ಸಿ ,ಎಸ. ಟಿ ಗಳ ಜೊತೆಗೆ ಸರ್ವ ಸಮಾಜಗಳು ಹಾಗೂ ಎಲ್ಲಾ ಇಲಾಖೆಗಳ ಸಮತೋಲನವಿಟ್ಟು ರಾಜ್ಯದ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ, ವಿದ್ಯಾರ್ಥಿಗಳಿಗಳ ಶಿಕ್ಷಣಕ್ಕೆ ವತ್ತು ಕೊಡುವುದರ ಮೂಲಕ ರಾಜ್ಯದ ಅಭಿವೃದ್ಧಿಗೆ ಪೂರಕವಾದ ಬಜೆಟ್ ಮಂಡಿಸಿದ್ದಾರೆ ಎಂದು ದೇವರ ಹಿಪ್ಪರಗಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಮುಖಂಡ ಅಶೋಕಗೌಡ ಪಾಟೀಲ (ಕುದರಿ ಸಾಲವಾಡಗಿ ) ಹೇಳಿದ್ದಾರೆ.

### ಬಿಮಾ ಸಖಿ ಹುದ್ದೆ ನೇರ ಸಂದರ್ಶನ ಇಂದು

**ವಿಜಯಪುರ:** ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ಎಲ್ಐಸಿಯಲ್ಲಿ ಬಿಮಾ ಸಖಿ ಹುದ್ದೆಗಳ ನೇಮಕಾತಿಗೆ ಮಾ.10ರಂದು ನಗರದ ಸೋಲಾಪುರ ರಸ್ತೆಯಲ್ಲಿರುವ ಬ್ಯಾಂಕರ್ಸ್ ಕಾಲೋನಿಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3-30ರವರೆಗೆ ಮಹಿಳೆಯರಿಗಾಗಿ ನೇಮಕಾತಿ ಸಂದರ್ಶನ ಆಯೋಜಿಸಲಾಗಿದೆ. ಸಂದರ್ಶನದಲ್ಲಿ ಎಸ್.ಎಸ್.ಎಲ್.ಸಿ., ಪಿಯುಸಿ, ಹಾಗೂ ಯಾವುದೇ ಪದವಿ ಪಾಸಾದ 25 ವರ್ಷ ವಯೋಮಿತಿ ಮೇಲ್ಪಟ್ಟ ಆಸಕ್ತ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದ್ದು, ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಮೊ: 9986809735, 9945000793 ಸಂಖ್ಯೆಗೆ ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸಾಹಿತಿ ಡಾ.ಶಂಭು ಬಳಿಗಾರ ಭೇಟಿ

**ಕೊಲ್ಹಾರ:** ಕಾರ್ಯ ನಿಮಿತ್ತ ಕೊಲ್ಹಾರ ಪಟ್ಟಣಕ್ಕೆ ಆಗಮಿಸಿದ್ದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಸಾಹಿತಿ ಶಂಭು ಬಳಿಗಾರ ಪಟ್ಟಣದ ಖಾನಕಾಯೇ ಗವ್ಸಾರಿಯಾ ಪೀಠಾಧಿಪತಿಗಳಾದ ಡಾ. ಬಕ್ತಿಯಾರಖಾನ್ ಪಠಾಣ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಂಡರು.

{ **ಶಿವರಾಜ್ ತಂಗಡಗಿ** } ಸಚಿವ

**ಸಾಣಾಪುರ ಸೇರಿದಂತೆ ಸುತ್ತಮುತ್ತಲ ಪ್ರದೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ದೇಶ-ವಿದೇಶದಿಂದ ಪ್ರವಾಸಿಗರು ಭೇಟಿ ನೀಡುತ್ತಾರೆ. ಅವರ ಸುರಕ್ಷತೆಗಾಗಿ ಆ ಭಾಗದಲ್ಲಿ ಪೊಲೀಸ್ ಭದ್ರತೆ ಹೆಚ್ಚಿಸಿಲು ಸೂಚಿಸಲಾಗಿದೆ. ರೆಸಾರ್ಟ್, ಹೋಂಸ್ಟೇಗಳಲ್ಲಿ ಯಾವುದೇ ಅಕ್ರಮ ಚಟುವಟಿಕೆ ನಡೆಯದಂತೆ ನಿಗಾವಹಿಸಲಾಗಿದೆ.**



# ರಾಷ್ಟ್ರೀಯ ಲೋಕ ಅದಾಲತ್: 14592 ಪ್ರಕರಣ ಇತ್ಯರ್ಥ

**ವಿಜಯಪುರ:** ಕಕ್ಷಿದಾರರು ನ್ಯಾಯಾಲಯಗಳಿಗೆ ಅಲೆದಾಡುವ ಬದಲು ಜನತಾ ನ್ಯಾಯಾಲಯದಲ್ಲಿ ರಾಜಿ ಸಂಧಾನದ ಮೂಲಕ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡಲ್ಲಿ ಅನಾವಶ್ಯಕವಾಗಿ ವ್ಯರ್ಥವಾಗುವ ಹಣ ಹಾಗೂ ಸಮಯದ ಉಳಿತಾಯವಾಗುವುದರಿಂದ ಸಾರ್ವಜನಿಕರು ಜನತಾ ನ್ಯಾಯಾಲಯದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ರಾಮಾ ನಾಯಕ್ ಕರೆ ನೀಡಿದ್ದಾರೆ.

ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾದ ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮದಲ್ಲಿ ಕಕ್ಷಿದಾರರಿಗೆ ತಿಳುವಳಿಕೆ ನೀಡಿದ ಅವರು, ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಗಿದ್ದ ಆಸ್ತಿ ವಿಭಾಗ ಕೋರಿದ ದಾವೆಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ಕೋರಿದ ಪ್ರಕರಣಗಳು, ಜೀವನಾಂಶ ಕೋರಿ ಸಲ್ಲಿಸಿದ ಪ್ರಕರಣಗಳು, ರಾಜಿಯಾಗಬಹುದಾದ ಕ್ರಿಮಿನಲ್ ಪ್ರಕರಣಗಳು ಹಾಗೂ ಅಮಲ್ಜಾರಿ ಪ್ರಕರಣಗಳು ಸೇರಿದಂತೆ ಒಟ್ಟು 14592 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು, ಹಿರಿಯ ಸಿವಿಲ್ ನ್ಯಾಯಾಧೀಶ ಅರವಿಂದ ಎಸ್.ಹಾಗರಗಿ ಮಾತನಾಡಿ, ಜನತಾ ನ್ಯಾಯಾಲಯದಲ್ಲಿ ರಾಜೀ ಸಂಧಾನದ ಮೂಲಕ ಪ್ರಕರಣ ಇತ್ಯರ್ಥಪಡಿಸಿಕೊಂಡು ಪರಸ್ಪರ ಸೌಹಾರ್ತೆಯಿಂದ ಸಮಾಜದಲ್ಲಿ ಜೀವನ ಸಾಗಿಸುವಂತೆ ಸಲಹೆ ನೀಡಿದರು.

ಲೋಕ ಅದಾಲತ್ ಕಾರ್ಯಕ್ರಮದಲ್ಲಿ 8 ಜೋಡಿಗಳನ್ನು ರಾಜಿ ಸಂಧಾನದ ಮೂಲಕ ವೈವಾಹಿಕ ಜೀವನ ನಡೆಸಲು ಒಪ್ಪಿಸಲಾಯಿತು.

ಜಿಲ್ಲೆಯಲ್ಲಿ ನಡೆದ ಲೋಕ ಅದಾಲತ್ ಕಾರ್ಯಕ್ರಮದಲ್ಲಿ 8 ಜೋಡಿಗಳನ್ನು ರಾಜಿ ಸಂಧಾನದ ಮೂಲಕ ವೈವಾಹಿಕ ಜೀವನ ನಡೆಸಲು ಒಪ್ಪಿಸಲಾಯಿತು. ಜನತಾ ನ್ಯಾಯಾಲಯದ ಯಶಸ್ವಿಗೆ ಸಹಕರಿಸಿದ ವಕೀಲರು, ಕಕ್ಷಿದಾರರು, ಪೊಲೀಸ್ ಅಧಿಕಾರಿ-ಸಿಬ್ಬಂದಿ ಸೇರಿದಂತೆ ಸಾರ್ವಜನಿಕರ ಕಾರ್ಯಕ್ಕೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾಯಾಧೀಶ ರಾಮಾನಾಯಕ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಚ್.ಎಸ್.ಪಾಟೀಲಗೆ ಸನ್ಮಾನ

**ತಾಳಿಕೋಟಿ:** ಇತ್ತೀಚಿಗೆ ಬೆಂಗಳೂರಿನ ಶಿವಶ್ರೀ ಮಾಧ್ಯಮ ಪ್ರೈವೇಟ್ ಲಿಮಿಟೆಡ್ ರಾಜ್ ನ್ಯೂಸ್ ಇವರ ವತಿಯಿಂದ ಖ್ಯಾತ ಉದ್ಯಮಿ ರತನ ಟಾಟಾರವರ ಸ್ಮರಣಾರ್ಥಕವಾಗಿ ನೀಡುವ ಕರ್ನಾಟಕ ಹೆಮ್ಮೆಯ ಉದ್ದಿಮೆ 2024 ಪ್ರಶಸ್ತಿಯನ್ನು ಎಚ್.ಎಸ್.ಪಾಟೀಲರಿಗೆ ನೀಡಿ ಗೌರವಿಸಿದ್ದಕ್ಕಾಗಿ ಅವರ ಸ್ವಗ್ರಾಮ ಬಾವೂರಿನಲ್ಲಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ರವಿವಾರ ಬಾವೂರ ಗ್ರಾಮದ ಸರಕಾರಿ ಶಾಲೆ ಮುಂಭಾಗದ ಆವರಣದಲ್ಲಿ ಅವರನ್ನು ಗ್ರಾಮಸ್ಥರು ಸನ್ಮಾನಿಸಿ ಅಭಿನಂದಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಸಂಗಮೇಶ್ವರ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಎಚ್.ಎಸ್.ಪಾಟೀಲರು ನನಗೆ ಈ ಪ್ರಶಸ್ತಿ ಲಭಿಸಿದ್ದಕ್ಕಾಗಿ ಹಲವಾರು ಸಂಘ ಸಂಸ್ಥೆಯವರು ಸನ್ಮಾನಿಸಿದ್ದಾರೆ ಆದರೆ ನನ್ನ ಹುಟ್ಟೂರಿನ ಜನ ನನಗೆ ಈ ರೀತಿ ಪ್ರೀತಿಯಿಂದ ಗೌರವಿಸಿದ್ದು ಅತೀವ ಸಂತೋಷ ಮತ್ತು ಅಭಿಮಾನವನ್ನು ತಂದು ಕೊಟ್ಟಿದೆ, ನಿಮ್ಮ ಈ ಪ್ರೀತಿ ವಿಶ್ವಾಸ ಸದಾ ನನ್ನ ಮೇಲೆ ಹೀಗೆಯೇ ಇರಲಿ ನಾನು ಏನೇ ಸಾಧನೆ ಮಾಡಿದರು ನಿಮ್ಮವನು, ಈ ಗ್ರಾಮದ ಮಗ ಎಂಬುದು ಎಂದೂ ಮರೆಯುವುದಿಲ್ಲ ಎಂದರು. ಈ ಸಮಯದಲ್ಲಿ ಬಾವೂರ ಗ್ರಾಮ ಪಂಚಾಯತ್ ಅಧ್ಯಕ್ಷ ಸಿದ್ದನಗೌಡ ಪಾಟೀಲ ( ಕೂಚಬಾಳ),ನಿಂಗನಗೌಡ ಬ. ಬಿರಾದಾರ ,ಸಿದ್ದನಗೌಡ ಎಂ. ಪಾಟೀಲ, ಗುರುಪಾದ ಹಡಪದ ,ಅಕ್ಬರ ಪಟೇಲ, ಬಿ. ಎಸ್.ಬಿರಾದಾರ, ರಾಮನಗೌಡ ಬ.ಪಾಟೀಲ, ಬಸನಗೌಡ ಸಾ ಪಾಟೀಲ,ಶಾಂತಗೌಡ ಶ್ಯಾಡದಳ್ಳಿ, ಮುತ್ತು ಸಜ್ಜನ, ಅಧ್ಯಕ್ಷರು ಎಸ್ಡಿಎಂಸಿ , ಎಚ್ ಪಿ ಎಸ್ ಸರಕಾರಿ ಶಾಲೆಯ ಸಿಬ್ಬಂದಿಗಳಾದ ಎಚ್ ಎಲ್ ಬಳಗಾನೂರ, ಮುಖ್ಯ ಗುರುಗಳು, ಸಹ ಶಿಕ್ಷಕರುಗಳಾದ ವಿಶ್ವನಾಥ ಪತ್ತಾರ, ಅಶೋಕ ಹೂಗಾರ, ವಿಜಯಲಕ್ಷ್ಮಿ ಒಣರೊಟ್ಟಿ, ಮಂಜುಳಾ, ಶಿವಕುಮಾರ ಹಡಪದ, ಗ್ರಾಪಂ ಸದಸ್ಯರಾದ ಬೊಮ್ಮನಿಂಗಪ್ಪ ಕೈರೊಡಗಿ , ಬಾಬು ಬಜಂತ್ರಿ, ಗ್ರಾಮದ ಬಂದೇನವಾಜ ನಿಡಗುಂದಿ, ಕುಬೇರಪ್ಪ ಮುದ್ದೇಬಿಹಾಳ, ಶಂಕರಗೌಡ ಶ್ಯಾಡದಳ್ಳಿ , ಚಂದ್ರು ಬಾಕಲಿ, ಆನಂದ ಬಬಲಾದಿ, ರಾಜು ಮಕ್ತಾಪುರ, ನಾನಾಗೌಡ ಬಿರಾದಾರ, ಅಯ್ಯಪ್ಪ ಅಸ್ಕಿ, ಆನಂದ ಬಪ್ಪರಗಿ, ಸದಾಶಿವ ಹಡಪದ, ಶರಣು ಹಡಪದ ಉಪಸ್ಥಿತರಿದ್ದರು.

# ಕರ್ನಾಟಕ ಪೊಲೀಸ್ ರನ್‌ಗೆ ಚಾಲನೆ

ಕರ್ನಾಟಕ ಪೊಲೀಸ್ ರನ್ ಮ್ಯಾರಾಥಾನ್ ಓಟಕ್ಕೆ ಸಚಿವ ಡಾ.ಎಂ.ಬಿ.ಪಾಟೀಲ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

**ವಿಜಯಪುರ:** ಜಿಲ್ಲಾ ಪೊಲೀಸ್ ವತಿಯಿಂದ ರವಿವಾರ ಜಗತ್ಪ್ರಸಿದ್ಧ ಗೋಲಗುಮ್ಮಟ ಆವರಣದಲ್ಲಿ ಹಮ್ಮಿಕೊಂಡ ಡ್ರಗ್ ಫ್ರೀ ಕರ್ನಾಟಕ ಫಿಟ್‌ನೆಸ್ ಫಾರ್ ಆಲ್ ಹಾಗೂ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಥೀಮ್‌ನ ಅಡಿಯಲ್ಲಿ ಕರ್ನಾಟಕ ಪೊಲೀಸ್ ರನ್ 2025 ಮ್ಯಾರಾಥಾನ್ 5 ಕಿ.ಮೀ. ಓಟಕ್ಕೆ ಬೃಹತ್ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ವ್ಯಸನಕ್ಕೆ ಒಳಗಾಗದೆ ಸುಂದರ ಜೀವನ ರೂಪಿಸಿಕೊಳ್ಳಲು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಡ್ರಗ್ಸ್ ಫ್ರಿ ಕರ್ನಾಟಕ, ಫಿಟನೆಸ್ ಫಾರ್ ಆಲ್ ಹಾಗೂ ನಮ್ಮ ಪೊಲೀಸ್ ನಮ್ಮ ಹೆಮ್ಮೆಯ ವಿಷಯಧಾರಿತ ಕರ್ನಾಟಕ ಪೊಲೀಸ್ ರನ್-2025 ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಸದೃಢ ಸಮಾಜಕ್ಕಾಗಿ ಇಂತಹ ಕಾರ್ಯಕ್ರಮಗಳು ಜಾಗೃತಿ-ಅರಿವು ಮೂಡಿಸಲು ಅತ್ಯಗತ್ಯವಾಗಿದೆ. ಇಂತಹ ಕಾರ್ಯಕ್ರಮಗಳು ಉದ್ದೇಶ ಸಫಲತೆ ಕಾಣಲು, ಸಾಮಾಜಿಕವಾಗಿ ಸಂಘ ಸಂಸ್ಥೆಗಳು, ಶಾಲಾ ಕಾಲೇಜುಗಳು ಕೈ ಜೋಡಿಸುವ ಮೂಲಕ ಸದೃಢ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಅವರು ಹೇಳಿದರು.

ಸಮಾಜದ ಸುರಕ್ಷತೆಯ ಹಿತದೃಷ್ಟಿಯಿಂದ ಬಿಡುವಿಲ್ಲದೇ ದಿನನಿತ್ಯದ 24 ಗಂಟೆಗಳ ಕಾರ್ಯ ನಿರ್ವಹಿಸುವ ಪೊಲೀಸ್‌ರು ಸಹ ತಮ್ಮ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ಪ್ರತಿ ದಿನ ಒಂದು ಗಂಟೆಗಳ ಕಾಲ ದೈಹಿಕ ಸದೃಢತೆಗೆ ಸಮಯ ಮೀಸಲಿಡುವ ಮೂಲಕ ದೈಹಿಕವಾಗಿ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಎಂದು ಅವರು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ, ಶಾಸಕ ವಿಠ್ಠಲ ಕಟಕದೊಂಡ, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು ಓಟದಲ್ಲಿ ಪಾಲ್ಗೊಳ್ಳುವ ಮೂಲಕ ಹುರಿದುಂಬಿಸಿದರು. ಮ್ಯಾರಾಥಾನ್ ಓಟವು ಗೋಲಗುಂಬಜ್‌ನಿಂದ ಆರಂಭವಾಗಿ, ಜಿಲ್ಲಾ ಕ್ರೀಡಾಂಗಣ, ಬಸವೇಶ್ವರ ವೃತ್ತ, ಗಾಂಧಿಚೌಕ, ಶಿವಾಜಿ ವೃತ್ತ, ವಾಟರ್ ಟ್ಯಾಂಕ್, ಸೋಲಾಪೂರ ರಸ್ತೆ ಮಾರ್ಗವಾಗಿ ಜಿಲ್ಲಾ ಪೊಲೀಸ್ ಕವಾಯತು ಮೈದಾನಕ್ಕೆ ಬಂದು ಮುಕ್ತಾಯಗೊಂಡಿತು.

ಈ ವೇಳೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶಂಕರ ಮಾರಿಹಾಳ, ರಾಮನಗೌಡ ಹಟ್ಟಿ, ಡಿವೈಎಸ್‌ಪಿ ಬಸವರಾಜ ಯಲಿಗಾರ ಸೇರಿದಂತೆ ಜಿಲ್ಲಾ ಪೊಲೀಸ್ ಇಲಾಖೆ ಅಧಿಕಾರಿ-ಸಿಬ್ಬಂದಿ, ವಿವಿಧ ಸಂಘ-ಸಂಸ್ಥೆಗಳು, ಸಾರ್ವಜನಿಕರು ಮ್ಯಾರಾಥಾನ್‌ನಲ್ಲಿ ಭಾಗವಹಿಸಿದ್ದರು.

# ನಕಲಿ ನೌಕರರ ವಜಾಕ್ಕೆ ಆಗ್ರಹಿಸಿ ಸತ್ಯಾಗ್ರಹ

**ಮುದ್ದೇಬಿಹಾಳ:** ತಾಲೂಕಿನ ಕುಂಟೋಜಿ ಗ್ರಾಮ ಪಂಚಾಯಿತಿಯಲ್ಲಿ ಮೂರು ಜನರನ್ನು ವಾಟರ್ ಮನ್ ಗಳು ಅಂತಾ ಅನಧಿಕೃತವಾಗಿ ನೇಮಕ ಮಾಡಿಕೊಂಡಿದ್ದು ಆ ಮೂವರನ್ನು ಕೆಲಸದಿಂದ ವಜಾಗೊಳಿಸಲು ಮತ್ತು ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ 2025ರ ಮಾ.10ರಂದು ಕುಂಟೋಜಿ ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂದೆ ತಮ್ಮ ಬೇಡಿಕೆ ಈಡೇರುವವರೆಗೆ ಧರಣಿ ಸತ್ಯಾಗ್ರಹ ಆರಂಭಿಸಲಾಗುತ್ತದೆ ಎಂದು ದಲಿತ ನಾಯಕ ಬಸವರಾಜ ಸಿದ್ದಾಪೂರ ಮತ್ತು ಹೋರಾಟಗಾರ ರಾಮಪ್ಪ ಕವಡಿಮಟ್ಟಿ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕುಂಟೋಜಿ ಗ್ರಾಮ ಪಂಚಾಯತಿಯಲ್ಲಿ ಖಾಲಿ ಇದ್ದ ವಾಟರ್‌ಮನ್ನಗಳ ಹುದ್ದೆಗಳನ್ನು ಸರಕಾರದ ನಿಯಮಾನುಸಾರ ಯಾವುದೇ ಅರ್ಜಿ ಕರೆಯದೇ ತಮ್ಮಲ್ಲಿಯೇ ನಕಲಿ ಕಾಗದಗಳನ್ನು ಸೃಷ್ಟಿ ಮಾಡಿ ಮೂವರನ್ನು ನೇಮಕ ಮಾಡಿಕೊಂಡಿದ್ದಾರೆ ಎಂದು ಇಲ್ಲಿನ ಪ್ರಗತಿಪರ ಚಿಂತಕ ರಾಮಣ್ಣ ಕವಡಿಮಟ್ಟಿ ಈ ಭ್ರ ಷ್ಟಾಚಾರದ ವಿರುದ್ಧ ಹೋರಾಟ ಕೈಗೆತ್ತಿಕೊಂಡರು. ಇವರ ಅರ್ಜಿಗಳನ್ನು ಪರಿಶೀಲಿಸಿ ತನಿಖೆ ನಡೆಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯಿತಿ ವಿಜಯಪುರ ಇವರು ಈ ಮೂವರ ನೇಮಕಾತಿ ಅನಧಿಕೃತವಾಗಿದ್ದು ಅವರನ್ನು ಕೆಲಸದಿಂದ ಹೊರಗೆ ಹಾಕುವಂತೆ 2025ರ ಜ.8ರಂದು, ಕಾರ್ಯನಿವಾಹಕ ಅಧಿಕಾರಿ ತಾ.ಪಂ. ಮುದ್ದೇಬಿಹಾಳ ಇವರಿಗೆ ಸದರಿ ಮೂವರನ್ನು ಕೆಲಸದಿಂದ ತೆಗೆಯುವಂತೆ ಸ್ಪಷ್ಟವಾಗಿ ತಿಳಿಸಿರುತ್ತಾರೆ.

ಹಿರಿಯ ಅಧಿಕಾರಿಗಳ ಆದೇಶವನ್ನು ತಾತ್ಸಾರ ಮಾಡಿ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಅದನ್ನು ಮಂಡಿಸುವ ವ್ಯರ್ಥ ಪ್ರಯತ್ನ ಮಾಡಿ ಹಿರಿಯ ಅಧಿಕಾರಿಗಳ ಆದೇಶವನ್ನು ಉಲ್ಲಂಘಿಸಿದ್ದಾರೆ. ಇದರಿಂದ ಸದರಿ ಪಿ.ಡಿ.ಒ. ಆ ಮೂವರನ್ನು ಅಕ್ರಮವಾಗಿ ನೇಮಕ ಮಾಡಿಕೊಂಡಿದ್ದು ಅದರಿಂದ ಪಾರಾಗಲು ಪ್ರಯತ್ನಿಸುತ್ತಿದ್ದಾರೆ. ಮಾಡಿದ ಅಪರಾಧದಿಂದ ನುಸುಳಿಕೊಳ್ಳಲು ಹೊಂಚು ಹಾಕುತ್ತಿರುವ ಪಿ.ಡಿ.ಒ ರವರನ್ನು ವಿಚಾರಣೆಗೊಳಪಡಿಸಬೇಕು ಮತ್ತು ಅಕ್ರಮವಾಗಿ ನೇಮಕ ಆಗಿರುವ 3 ಜನ ವಾಟರಮನ್ನಗಳನ್ನು ಕೆಲಸದಿಂದ ಹೊರಗೆ ಹಾಕುವವರೆಗೆ ಈ ಹೋರಾಟ ಮುಂದುವರೆಯುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಮೇಶ ದೊಡಮನಿ, ಲಕ್ಷ್ಮಣ ಎಂ ಮಾದರ ಕಾಳಗಿ, ಶಶಿಧರ ಹಳ್ಳೂರ, ರಾವುತಪ್ಪ ಮಾದರ ಕಾಳಗಿ, ಕರ್ನಾಟಕ ಮಾದಿಗ ಜನ ಸಂಘ ಸಮಿತಿಯ ಅಧ್ಯಕ್ಷರಾದ ಮುತ್ತಪ್ಪ, ಹುಲಗಪ್ಪ ಮಾದರ, ಶಿವು ಕಾರಕೂರ, ಶಿವಪುತ್ರಪ್ಪ ಪೂಜಾರಿ ಹಾಗೂ ರಾಮಣ್ಣ ತಂಬೂರಿ ಮುಂತಾದವರು ಇದ್ದರು.

# ಹೆಣ್ಣು ಮಕ್ಕಳನ್ನು ಪೂಜಿಸುವ ಸಂಸ್ಕೃತಿ ನಮ್ಮದು

**ಮುದ್ದೇಬಿಹಾಳ:** ಕೊಲ್ಹಾರ: ಭಾರತಿಯ ಸಂಸ್ಕೃತಿಯಲ್ಲಿ ಹೆಣ್ಣು ಮಕ್ಕಳನ್ನು ಪೂಜ್ಯ ಭಾವನೆಯಿಂದ ಹಾಗೂ ಗೌರವದಿಂದ ಕಾಣುವುದರಿಂದ ನಾಡಿನ ಸರ್ವ ದೇವರುಗಳ, ನದಿಗಳಿಗೆ ಸ್ತ್ರೀ ರೂಪದ ಹೆಸರುಗಳನ್ನು ನೀಡಿ ಕರೆಯುತ್ತೇವೆ ಎಂದು ಸಾಹಿತಿ ಶಂಭು ಬಳಿಗಾರ ಹೇಳಿದರು.

ಪಟ್ಟಣದ ಸರ್ಕಾರಿ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನದ ಉಪನ್ಯಾಸಕರಾಗಿ ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಭಾಗ್ಯಶ್ರೀ ಶಿವಾನಂದ ಪಾಟೀಲ ಮಾತನಾಡಿ ಜಗತ್ತಿನ ಅತ್ಯಂತ ಶಕ್ತಿಯುತ ಆಯುಧ ಶಿಕ್ಷಣ ಆಗಿದೆ ಮಕ್ಕಳು ಇದನ್ನು ಅರಿತು ಶಿಕ್ಷಕರು ನೀಡುವ ಶಿಕ್ಷಣ ಶ್ರದ್ದೆ ಭಕ್ತಿಯಿಂದ ಪಡೆದು ಉತ್ತಮ ವ್ಯಕ್ತಿಗಳಾಗಿ ಶಾಲೆ, ಪಾಲಕರ, ಊರಿನ ಹೆಸರನ್ನು ಬೆಳಗಬೇಕು ಎಂದು ಹೇಳಿದರು.



ವಾರ್ಷಿಕ ಸ್ನೇಹ ಸಮ್ಮೇಳನವನ್ನು ಸಾಹಿತಿ ಶಂಭು ಬಳಿಗಾರ ಅವರು ಉದ್ಘಾಟಿಸಿದರು.

ದಿಗಂಬರೇಶ್ವರ ಮಠದ ಕಲ್ಲಿನಾಥ ದೇವರು, ನಾಗರಾಜ ಬನಸೋಡೆ, ಗಂಗಾಧರ ಆಸಂಗಿ ಮಾಡಿದರು, ದಾನಿಗಳಾದ ಭಜಂತ್ರಿ ದಂಪತಿಗಳು, ಹಾಗೂ ಕೆ.ಎಸ್ ಬಾಲಗೊಂಡ, ಆದರ್ಶ ವಿದ್ಯಾರ್ಥಿಗಳಾದ ಶ್ವೇತಾ ಬಾಗಲಕೋಟ, ಜಿಕ್ರಾ ವಾಲಿಕಾರ ಮತ್ತು ಪತ್ರಿಕಾ, ದೃಶ್ಯ ಮಾಧ್ಯಮದ ವರದಿಗಾರರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ಡಿಎಂಸಿ ಅಧ್ಯಕ್ಷೆ ರೂಪಾ ಗಿಡ್ಡಪ್ಪಗೋಳ, ಮುಖ್ಯ ಅತಿಥಿಗಳಾಗಿ ಪ.ಪಂ ಉಪಾಧ್ಯಕ್ಷೆ ರಾಜಮಾ ನದಾಫ, ಪ.ಪಂ ಸದಸ್ಯೆ ಲಕ್ಷ್ಮೀಬಾಯಿ ಜಿಡ್ಡಿಬಾಗಿಲ, ಎಂ.ಬಿ ಬಿರಾದಾರ, ನಿವೃತ್ತ ಶಿಕ್ಷಕ ಸಂಘದ ಅಧ್ಯಕ್ಷ ಕೆ.ಯು ಗಿಡ್ಡಪ್ಪಗೋಳ, ಎಸ್ಡಿಎಂಸಿ ಉಪಾಧ್ಯಕ್ಷ ಪುಂಡಲೀಕ ಬೆಳ್ಳುಬ್ಬಿ, ಸಮೂಹ ಸಂಪನ್ಮೂಲ ಅಧಿಕಾರಿ ಜಿ.ಆಯ್ ಗುಡ್ಯಾಳ, ಮುಖ್ಯ ಶಿಕ್ಷಕಿ ಕೆ.ಆರ್ ದಾಸರ ಮತ್ತು ಎಸ್ಡಿಎಂಸಿ ಸದಸ್ಯರುಗಳು ಅತಿಥಿಗಳಾಗಿ ಉಪಸ್ಥಿತರಿದ್ದರು.

# ಇ-ಖಾತೆ ಉತಾರ: ಜಾಗೃತಿ ಕಾರ್ಯಕ್ರಮ

**ಮುದ್ದೇಬಿಹಾಳ:** ತಾಲೂಕಿನ ನಾಲತವಾಡ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ನಾಗರಿಕರ ಬಹುದಿನಗಳ ಬೇಡಿಕೆಯಾದ ಅನಧಿಕೃತ ಬಡಾವಣೆಗಳ ನಿವೇಶನಗಳ ಖಾತೆ ಸಮಸ್ಯೆ ಪರಿಹರಿಸಲು ಸರಕಾರ ಒಂದೇ ಬಾರಿ ಮೇ 10 ರವರೆಗೆ ಅಧಿಕೃತ ಬಡಾವಣೆಗಳ ಇ-ಖಾತೆ ಅನಧಿಕೃತ ಬಡಾವಣೆಗಳ ಬಿ-ಖಾತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಪಟ್ಟಣದ ನಾಗರಿಕರು ಯೋಜನೆಯ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಈರಣ್ಣ ಕೊಣ್ಣೂರ ಹೇಳಿದರು.

ಶುಕ್ರವಾರ ಜರುಗಿದ ಸಾಮಾನ್ಯ ಸಭೆಯನಂತರ ಬಿ ಖಾತಾ ಉತಾರೆಗಳನ್ನು ವಿತರಣೆಗೆ ಚಾಲನೆ ನೀಡಿ ಮಾತನಾಡಿದ ಅವರು,ಫೆ. 24ರಿಂದ ಅಭಿಯಾನ ಆರಂಭಿಸಲಾಗಿದ್ದು. ಈ ಕಾರ್ಯಕ್ಕಾಗಿ ಪ್ರತ್ಯೇಕ ಸಿಬ್ಬಂದಿ ನೇಮಕ ಮಾಡಲಾಗಿದೆ. ಪ್ರತಿ ಮನೆಗೆ ಮಾಹಿತಿ ನೀಡುವುದಕ್ಕಾಗಿ ಕರಪತ್ರ, ಕಸದ ಗಾಡಿಯಲ್ಲಿ ಪ್ರಚಾರ ಪಡಿಸುವುದು, ಆಯಾ ವಾರ್ಡ್ ಸದಸ್ಯರು ಪ್ರತಿ ಮನೆಗೆ ತೆರಳಿ ಸರ್ಕಾರದ ಮಾಹಿತಿ ನೀಡುವ ಮೂಲಕ ಪಟ್ಟಣದ ಎಲ್ಲ ನೊಂದಣಿಯಾಗಿರುವ ಆಸ್ತಿಗಳನ್ನು ಇ ಖಾತೆ ಆಗುವಂತೆ ಮಾಡೋಣ. ಇದಕ್ಕೆ ಅಧ್ಯಕ್ಷೆ ವಿಜಯಲಕ್ಷ್ಮಿ ಇಲಕಲ್ ಉಪಾಧ್ಯಕ್ಷರಾದ ಬಸವರಾಜ ಗಂಗನಗೌಡ್ರ ಸೇರಿದಂತೆ ಎಲ್ಲ ಸದಸ್ಯರು, ಸಿಬ್ಬಂದಿ ಸಹಕರಿಸಬೇಕು.

ಸಭೆಯ ನಂತರ ಬಿ ಖಾತಾ ಉತಾರೆಗಳನ್ನು ವಿತರಣೆಗೆ ಚಾಲನೆ ನೀಡಿ ಈರಣ್ಣ ಕೊಣ್ಣೂರ ಅವರು ಮಾತನಾಡಿದರು.

ಟೌನ್ ಪ್ಲಾನ್ ಇಲ್ಲದ ಆಸ್ತಿ, ರೆವಿನ್ಯೂ ಜಾಗದಲ್ಲಿ ಮಾನ್ಯ ತಹಶಿಲದಾರರಿಂದ ಆದೇಶ ಪಡೆದ ಆಸ್ತಿ, ಹಕ್ಕುಪತ್ರಹೊಂದಿರುವ ಆಶ್ರಯ ನಿವೇಶನದ ಆಸ್ತಿ ಹೀಗೆ ಎಲ್ಲವನ್ನೂ ಸಕ್ರಮ ಮಾಡುವ ಮೂಲಕ ಜನರ ಚಿಂತೆ ದೂರ ಮಾಡುವುದಕ್ಕೆ ಸರಕಾರ ಉತ್ತಮ ಯೋಜನೆ ಜಾರಿಗೊಳಿಸಿದ್ದು, ಮೂರು ತಿಂಗಳ ಅವಧಿಯಲ್ಲಿ ಅಭಿಯಾನ ಪೂರ್ಣಗೊಳಿಸುವ ಗಡುವು ನೀಡಿದ್ದು, ಅವಧಿಯೊಳಗೆ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲಾಗುವುದು ಕಾರಣ ಎಲ್ಲರೂ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

# ಖಾಸಗಿ ಶಾಲೆಗಳಲ್ಲಿ ಮಿತಿಮೀರಿದ ಮಕ್ಕಳ ಸಂಖ್ಯೆ

**ಬಸವರಾಜ ಹುಲಗಣ್ಣಿ** ಮುದ್ದೇಬಿಹಾಳ

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟ ಗ್ರಾಮದಲ್ಲಿ ನಡೆಸಲಾಗುತ್ತಿರುವ ಎರಡು ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪಿ.ಯು.ಕಾಲೇಜುಗಳಲ್ಲಿ ನಿಗದಿತ ಸಂಖ್ಯೆಯನ್ನು ದಾಟಿ ಮಕ್ಕಳಿಗೆ ಪ್ರವೇಶ ನೀಡಲಾಗುತ್ತಿದೆ. ಮತ್ತು ಇವು ಅನಧಿಕೃತ ವಸತಿ ಶಾಲೆಗಳು ಇರುತ್ತವೆ. ಇವುಗಳಿಗೆ ಸಂಬಂಧಿಸಿದ ಇಲಾಖೆಗಳ ಅನುಮತಿ ಪಡೆದಿರುವುದು ಕಂಡು ಬಂದಿಲ್ಲ. ಈ ವಸತಿ ನಿಲಯಗಳಲ್ಲಿ ಕುರಿಗಳನ್ನು ತುಂಬಿದಂತೆ ಮಕ್ಕಳನ್ನು ತುಂಬಿದ್ದು ಅವರಿಗೆ ಸರಿಯಾದ ಆಹಾರವನ್ನು ಕೊಡುತ್ತಿಲ್ಲ. ಯಾರಾದರು ಪಾಲಕರು ನಮ್ಮ ಮಕ್ಕಳಿಗೆ ಸರಿಯಾದ ಪೌಷ್ಟಿಕ ಆಹಾರ ಕೊಡಿ ಎಂದು ಕೇಳಿದರೆ ನಿಮ್ಮ ಮಕ್ಕಳು ಇಲ್ಲಿಗೆ ತಿನ್ನಲು ಬಂದಿಲ್ಲ ಕಲಿಯಲು ಬಂದಿದ್ದಾರೆ, ಊಟದ ಕಡೆಗೆ ಗಮನ ಕೊಡಬೇಡಿ ಎಂದು ಹೇಳುತ್ತಾರೆ ಎಂದು ಅಲ್ಲಿನ ಅನೇಕ ಮಕ್ಕಳು ಹೇಳುತ್ತಿದ್ದಾರೆ.

ಪ್ರತಿ ವರ್ಷ ಪ್ರವೇಶ ನೀಡುವುದಕ್ಕೂ ಮೊದಲು ಇಲ್ಲಿ ಟ್ಯಾಲೆಂಟ್ ಪರೀಕ್ಷೆ ನಡೆಸಿ ಶೇ.75 ಕ್ಕಿಂತ ಹೆಚ್ಚಿಗೆ ಅಂಕ ಪಡೆದ ಮಕ್ಕಳಿಗೆ ಮಾತ್ರ ಪ್ರವೇಶ ನೀಡುತ್ತಾರೆ. ಕಡಿಮೆ ಅಂಕ ಪಡೆದ ಮಕ್ಕಳಿಗೆ ಪ್ರವೇಶ ನೀಡುವುದಿಲ್ಲ. ಟ್ಯಾಲೆಂಟ್ ಪರೀಕ್ಷೆಗಳಲ್ಲಿ ಪಾಸಾದ ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತೇವೆ ಎಂದು ಪ್ರವೇಶ ನೀಡುತ್ತಾರೆ. ಆದರೆ ಅವರ ಶಾಲಾ ಅವಧಿ ಮುಗಿಸಿಕೊಂಡು ತಮ್ಮ ಸರ್ಟಿಫಿಕೇಟುಗಳನ್ನು ಪಡೆಯುವ ಸಂದರ್ಭದಲ್ಲಿ ಫೀ ಕೊಡಲೇಬೇಕು ಎಂದು ಒತ್ತಡ ಹೇರಿ ಅವರಿಂದ ಮನಸ್ಸಿಗೆ ಬಂದಂತೆ ಹಣ ವಸೂಲಿ ಮಾಡುತ್ತಾರೆ.

ಪಾಟೀಲ ಆಕ್ಸಫರ್ಡ್ ಪಿ.ಯು ಕಾಲೇಜು ನಾಗರಬೆಟ್ಟ

ಈ ಶಾಲೆಗಳಲ್ಲಿ ಸಾವಿರಾರು ಮಕ್ಕಳು ಸಾಕಷ್ಟು ವಂತಿಗೆ ನೀಡಿ ಪ್ರವೇಶ ಪಡೆಯುತ್ತಾರೆ, ಆದರೆ ಇವರು ಕೊಟ್ಟ ಹಣಕ್ಕೆ ಇಲ್ಲಿ ಯಾವುದೇ ಅಧಿಕೃತ ಪಾವತಿ ಕೊಡುವುದಿಲ್ಲ. ಚಿಕ್ಕದಾದ ಬಿಳಿ ಹಾಳೆಯೊಂದರ ಮೇಲೆ ವಜಾ, ಬಾಕಿ ಬರೆದುಕೊಡುತ್ತಾರೆ. ಒಂದು ವೇಳೆ ಯಾರಾದರೂ ಚೀಟಿ ಕಳೆದುಕೊಂಡರೆ ಸಂಸ್ಥೆಯವರು ಕೇಳಿದಷ್ಟು ಹಣ ಕೊಡಬೇಕಾಗುತ್ತದೆ ಎಂದು ಅನೇಕ ಪಾಲಕರು ಬೇಸರ ವ್ಯಕ್ತಪಡಿಸಿದ್ದಾರೆ. ಶಿಕ್ಷಣ ಇಲಾಖೆ ಈ ಕಡೆಗೆ ಗಮನ ಹರಿಸುವುದು ಇಲ್ಲಿ ಪ್ರವೇಶ ಪಡೆಯುವ ಮಕ್ಕಳ ಭವಿಷ್ಯದ ಹಿತ ಕಾಪಾಡಿದಂತೆ ಆಗುತ್ತದೆ.

ಇಲ್ಲಿನ ಮಕ್ಕಳು ತಮ್ಮ ಪಾಲಕರನ್ನು ಮಾತನಾಡಿಸಲು ಯಾವುದೇ ಫೋನ್ ವ್ಯವಸ್ಥೆ ಇರುವದಿಲ್ಲ. ಇಲ್ಲಿಗೆ ಬರುವ ಹೊರಗಿನ ಪಾಲಕರನ್ನು ಕೇಳಿ ತಮ್ಮ ಪಾಲಕರಿಗೆ ಮಾತನಾಡುವ ಪರಿಸ್ಥಿತಿ ಇದೆ.

> ### ಈ ಶಾಲೆಗಳಲ್ಲಿ ಕ್ರೀಡೆಗೆ ಪ್ರೋತ್ಸಾಹವಿಲ್ಲ
>
> **ಇಲ್ಲಿ ಕಲಿಯುವ ಮಕ್ಕಳಿಗೆ ಯಾವುದೇ ಆಟಗಳನ್ನು ಆಡಿಸುವುದಿಲ್ಲ. ಯಾವುದೇ ಕ್ರೀಡಾ ಸ್ಪರ್ಧೆಗಳಲ್ಲಿ ಈ ಶಾಲೆಗಳು ಭಾಗವಹಿಸುವುದಿಲ್ಲ. ರಾಷ್ಟ್ರೀಯ ಉತ್ಸವಗಳಾದ ಜ.26 ಮತ್ತು ಆ.15 ರಂದು ಯಾವುದೇ ಮನೋವಿಕಾಸ, ಮನರಂಜನೆಯ ಸ್ಪರ್ಧೆಗಳು ನಡೆಯುವುದಿಲ್ಲ. ಇಲ್ಲಿನ ಮಕ್ಕಳು ಯಾವುದೇ ಕ್ರೀಡಾಕೂಟಗಳಲ್ಲಿ ಭಾಗವಹಿಸುವುದಿಲ್ಲ. ಈ ಬಗ್ಗೆ ಅನೇಕ ಪಾಲಕರು ತಮ್ಮ ಬೇಸರವನ್ನು ವ್ಯಕ್ತಪಡಿಸಿದ್ದಾರೆ.**

## ಸಮಾಚಾರ ಸಣ್ಣದಲ್ಲ

### ಹಲಗೆ ಶಬ್ದ ಮಿತಿ ಮೀರದಿರಲಿ: ಕುಲಕರ್ಣಿ

**ಕೆರೂರ:** ಸದ್ಯ ವಿದ್ಯಾರ್ಥಿಗಳ ಪರೀಕ್ಷಾ ಸಮಯ ಶುರುವಾಗಿದ್ದು ಮಕ್ಕಳ ಭವಿಷ್ಯಕ್ಕೆ ಅಡ್ಡಿಯಾಗುವ ಗಡಸು ಹಲಗೆ ಸಪ್ಪಳವನ್ನು ಸ್ವಯಂ ಪ್ರೇರಿತವಾಗಿ ಕಾಲಮಿತಿ ಹಾಕಿಕೊಳ್ಳಬೇಕುಬೆಂದು ಡಿವೈಎಸ್ಪಿ ವಿಶ್ವನಾಥ ಕುಲಕರ್ಣಿ ಹೇಳಿದರು. ಅವರು ಪಟ್ಟಣ ಆರಕ್ಷಕ ಠಾಣೆಯಲ್ಲಿ ಜರುಗಿದ ಹೋಳಿ ಹಾಗೂ ರಂಜಾನ ಹಬ್ಬದ ನಿಮಿತ್ತ ಶುಕ್ರವಾರ ಸುತ್ತಲಿನ ಗ್ರಾಮಗಳ ಮತ್ತು ಸ್ಥಳೀಯ ಮುಖಂಡರ ಶಾಂತಿ ಪಾಲನ ಸಭೆಯಲ್ಲಿ ಮಾತನಾಡಿದ ಅವರು ಹಲಿಗೆ ಬಾರಿಸುವುದಕ್ಕೆ ಸಮಯ ನಿಗದಿ ಮಾಡಿ ನಡುರಾತ್ರಿ ತನಕ ಹಲಿಗೆ ಸಪ್ಪಳಕ್ಕೆ ವಯೋವೃದ್ದರಿಗೆ, ಪರೀಕ್ಷಾ ವಿದ್ಯಾರ್ಥಿಗಳಿಗೆ ಆಗುತ್ತಿರುವ ಕಿರಿಕಿರಿ ತಪ್ಪಲಿ, ಅಪರಿಚಿತ ವ್ಯಕ್ತಿಗಳಿಗೆ ಪಾನಮತ್ತ ಗುಂಗಿನಲ್ಲಿ ಕಿರುಕುಳ ನೀಡಿದರೆ ಕಠಿಣ ಕ್ರಮಕ್ಕೆಗೊಳ್ಳಲಾಗುವದು ಎಂದು ಎಚ್ಚರಿಕೆ ನೀಡಿದರು. ಬಣ್ಣ ಎರಚಾಟ ಕುಣಿದಾಟ ಉದ್ದಟತನದ ವರ್ತನೆ, ವಾಹನಗಳ ನಿಲ್ಲಿಸಿ ಹಣ ಸುಲಿಗೆ ಮಾಡಬೇಡಿ ಎಂದರು. ಸಿಪಿಐ ಕರಿಯಪ್ಪ ಬನ್ನೆ, ಪಿಎಸ್ಐ ಆಯ್ ಎಮ್ ಹಿರೇಗೌಡರ, ಪಪಂ ಸದಸ್ಯ ವಿಠಲಗೌಡ ಗೌಡರ ಮಾತನಾಡಿದರು. ಪ್ರಮುಖರಾದ ವಾಯ್.ಸಿ. ಕಾಂಬಳೆ, ಹನಮಂತ ಪ್ರಭಾಕರ, ಉಮರ ಪೆಂಡಾರಿ, ಗುಂಡಪ್ಪ ಬೋರಣ್ಣವರ, ಉಪತಹಸೀಲ್ದಾರ್ ವಿರೇಶ ಬಡಿಗೇರ, ಪಪಂ ಉಪಾಧ್ಯಕ್ಷ ಮೋದಿನ ಚಿಕ್ಕೂರ, ಪ್ರಮುಖರಾದ ಅಶೋಕ ಜಿಗಳೂರ, ಉಸ್ಮಾನಸಾಬ ಅತ್ತಾರ, ರಾಚಪ್ಪ ಶೆಟ್ಟರ, ಉಸ್ಮಾನಸಾಬ ಮುಲ್ಲಾ, ಅಶೋಕ ಹರಣಶಿಕಾರಿ, ಇಬ್ರಾಹಿಂ ಖಾಜಿ, ರಾಚಪ್ಪ ಮುದುಕವಿ, ಅರುಣ ಕಟ್ಟಿಮನಿ, ನಾಗೇಶ ಚಂದಾವರಿ, ಶಿವಯ್ಯ ವಜ್ರಮಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

### ಮಕ್ಕಳಿಂದ ಪಾದಪೂಜಾ ಕಾರ್ಯಕ್ರಮ

**ಕೆರೂರ:** ಸಮೀಪದ ಮಾಲಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಿಳ್ಕೋಡುಗೆ ಸಮಾರಂಭದ ನಿಮಿತ್ಯ 7 ನೇ ತರಗತಿ ವಿದ್ಯಾರ್ಥಿಗಳ ಪಾಲಕರ ಪಾದ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಶಾಲಾ ಮುಖ್ಯ ಗುರುಗಳು ಚಂದ್ರಶೇಖರ ಅರಸೀಕೆರಿ ಸಹಶಿಕ್ಷಕರಾದ ಆರ್ ಪಿ ಕೊಪ್ಪಳ, ವಿನಯಕುಮಾರ ಎಸ್, ಅನ್ನಪೂರ್ಣ ಕಾಂಬಳೆ, ಆಶಾ ಬುವಾಜಿ, ವೀಣಾ ಪೂಜಾರ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ಶಿವಪ್ಪ ಮುದಡಿ ಸೇರಿದಂತೆ ಪಾಲಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದುರು.

### ಮುಧೋಳಕ್ಕೆ ಶೃಂಗೇರಿ ಶ್ರೀಗಳು ಇಂದು

**ಮುಧೋಳ:** ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದಜಗದ್ಗುರು ಶಂಕರಾಚಾರ್ಯ ಮಠದ ವಿಧುಶೇಖರ ಭಾರತಿ ಶ್ರೀಗಳು ಸೋಮವಾರ ನಗರಕ್ಕೆ



ಆಗಮಿಸಲಿದ್ದಾರೆ. ಸಂಜೆ 5 ಗಂಟೆಗೆ ಶ್ರೀಗಳನ್ನು ವೆಂಕಟೇಶ ದೇವಸ್ಥಾನದಿಂದ ಪೂರ್ಣಕುಂಭ ಸಕಲ ವಾದ್ಯಗಳೊಂದಿಗೆ ಶ್ರೀ ದತ್ತಾತ್ರೇಯ ದೇವಸ್ಥಾನ ದವರೆಗೆ ಶೋಭಾಯಾತ್ರೆ ನಡೆಯಲಿದೆ. ಧೂಳಿ ಪಾದಪೂಜೆ ಸಭಾಕಾರ್ಯಕ್ರಮ ಹಾಗೂ ಚಂದ್ರಮೌಳೀಶ್ವರ ಪೂಜೆ ನಡೆಯಲಿದೆ. ಮಂಗಳವಾರ ಬೆಳಗ್ಗೆ 9.30 ಕ್ಕೆ ಶಂಕರಮಠದ ಭೂಮಿ ಪೂಜೆ ಕಾರ್ಯಕ್ರಮ ಚಂದ್ರಮೌಳೀಶ್ವರ ಪೂಜೆ, ಸಭಾಕಾರ್ಯಕ್ರಮ, ರೂಪಕ, ಕಲ್ಯಾಣವೃಷ್ಟಿ ಪರಾಯಣ ಸಮರ್ಪಣೆ ಶ್ರೀಗಳಿಂದ ಫಲಮಂತ್ರಾಕ್ಷತೆ ವಿತರಣೆ, ದಾನಿಗಳಿಗೆ ಗೌರವಿಸುವ ಕಾರ್ಯಕ್ರಮ ನಡೆಯಲಿದೆ. ಎಂದು ಶಂಕರ ಸೇವಾ ಸಮಿತಿಅಧ್ಯಕ್ಷ ಪ್ರವೀಣ ಬಾಜಿ ತಿಳಿಸಿದ್ದಾರೆ.

### ಪ್ರಜಾ ಸೌಧ ನಿರ್ಮಾಣ ಸ್ವಾಗತಾರ್ಹ

**ಗುಳೇದಗುಡ್ಡ:** ಮುಖ್ಯಮಂತ್ರಿ ಸಿದ್ರಾಮಯ್ಯನವರು ಮಂಡಿಸಿದ ಬಜೆಟ್‌ದಲ್ಲಿ ಗುಳೇದಗುಡ್ಡ ತಾಲೂಕಿನ

ಜನರ ಅನುಕೂಲಕ್ಕಾಗಿ ಒಂದೇ ಸೂರಿನಡಿ ಎಲ್ಲಾ ಕಚೇರಿಗಳನ್ನು ಪ್ರಾರಂಭಿಸಲು ಪ್ರಜಾ ಸೌಧ ನಿರ್ಮಾಣಕ್ಕೆ ಘೋಷಣೆ ಮಾಡಿದ್ದನ್ನು ಸ್ವಾಗತಾರ್ಹ ಎಂದು ಗುಳೇದಗುಡ್ಡ ತಾಲೂಕು ಹೋರಾಟ ಸಮಿತಿಯ ಪ್ರಧಾನಕಾರ್ಯದರ್ಶಿ ಅಶೋಕ ಹೆಗಡಿ ಹೇಳಿದರು.

ವಿರಾಮ
ಪ್ರತಿ ಭಾನುವಾರ

{ ಡಿಕೆ ಶಿವಕುಮಾರ್ } ಡಿಸಿಎಂ
ಕಲ್ಯಾಣ ಕರ್ನಾಟಕ ಭಾಗಕ್ಕೆ 371(ಜೆ) ವಿಶೇಷ ಸ್ಥಾನಮಾನ ಸಿಕ್ಕ ಪರಿಣಾಮ ಉದ್ಯೋಗ, ಶಿಕ್ಷಣ ಸೇರಿದಂತೆ ಸಾಕಷ್ಟು ರೀತಿಯಲ್ಲಿ ಜನ ಲಾಭ ಪಡೆದುಕೊಳ್ಳಿದ್ದಾರೆ. ಈ ಭಾಗದ ಸಮಗ್ರ ಅಭಿವೃದ್ಧಿಗಾಗಿ ಕೆಕೆಆರ್‌ಡಿಬಿಗೆ ಪ್ರತಿವರ್ಷ ಐದು ಸಾವಿರ ಕೋಟಿ ಅನುದಾನ ನೀಡ್ತಿದ್ದೇವೆ.

## ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಶ್ರೀಗಳ ಪುರ ಪ್ರವೇಶ

# ಕೋಟೆನಗರಿಯಲ್ಲಿ ಭವ್ಯ ಶೋಭಾಯಾತ್ರೆ

**ಬಾಗಲಕೋಟೆ:** ಇಲ್ಲಿನ ವಿನಾಯಕ ನಗರದಲ್ಲಿ ಶೃಂಗೇರಿ ಶಂಕರಮಠದಲ್ಲಿ ಮೂರ್ತಿಗಳ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಮಹೋತ್ಸವ ಹಿನ್ನೆಲೆಯಲ್ಲಿ ಕೋಟೆನಗರಿಗೆ ಆಗಮಿಸಿದ ಶೃಂಗೇರಿ ಶಾರದ ಪೀಠಾಧೀಶ್ವರಾದ ವಿಧುಶೇಖರಭಾರತೀ ಸನ್ನಿಧಾನಂಗಳವರಿಗೆ ಭವ್ಯವಾದ ಸ್ವಾಗತಿಸಲಾಯಿತು.

ವೇಧ-ಘೋಷಗಳ ಮೊಳಗಿದವು, ಕುಂಭ ಹೊತ್ತ ಮಹಿಳೆಯರು ಹೆಜ್ಜೆ ಹಾಕಿದ್ದು ಆಕರ್ಷಿಸಿತು. ವಿನಾಯಕ ನಗರದ ಗಣೇಶ ದೇವಸ್ಥಾನದಿಂದ ಆರಂಭವಾದ ಶೋಭಾಯಾತ್ರೆ ಗಲ್ಲಿ ಗಲ್ಲಿಗಳಲ್ಲಿ ಸಂಚರಿಸಿ ಶಂಕರಮಠ ತಲುಪಿತು. ಹರ ಹರ ಮಹಾದೇವ, ಜೈ ಗುರುದೇವ ಶಂಕರಾಚಾರ್ಯ ಘೋಷನೆಗಳು ಮೊಳಗಿದವು. ನಂತರ ಧೂಳಿ ಪಾದ ಪೂಜೆ, ವೇಧ ಪಠನ ಸಾಂಪ್ರದಾಯಿಕ ವಾದ್ಯಗಳು ಮೇಳೈಸಿದವು.



ಬಾಗಲಕೋಟೆ ನಗರಕ್ಕೆ ಭವ್ಯ ಶೋಭಾಯಾತ್ರೆ ಮೂಲಕ ಶೃಂಗೇರಿ ಮಠದ ವಿಧುಶೇಖರಭಾರತೀ ಸನ್ನಿಧಾನಂಗಳವರಿಗೆ ಸ್ವಾಗತಿಸಲಾಯಿತು.

**ನಿಮ್ಮ ಸಾಮರ್ಥ್ಯವು ಸಾರ್ಥ ಜೀವನಕ್ಕೆ ಸಿಮೀತವಾಗಲಿ:** ಪ್ರತಿಯೊಬ್ಬರಲ್ಲಿ ಸಾಮರ್ಥ ಇರುತ್ತದೆ. ಅದು ಬುದ್ದಿ, ಶಾರೀರಿಕ, ಜ್ಞಾನ, ಆರ್ಥಿಕ, ಬೌತಿಕವಾಗಿರಲಿ. ಅದನ್ನು ಸದ್ವಿನಿಯೋಗವಾಗಬೇಕು. ಹಾಗೇ ಸಾರ್ಥಕ ಜೀವನ ನಡೆಸುವಂತಾಗವೇಕು ಎಂದು ಶೃಂಗೇರಿ ಶಾರದಾ ಪೀಠದ ವಿಧುಶೇಖರಭಾರತೀ ಸನ್ನಿಧಾನಂಗಳವರು ಹೇಳಿದರು. ಇಲ್ಲಿನ ಶಂಕರಮಠದಲ್ಲಿ ಹಮ್ಮಿಕೊಂಡಿರುವ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಮಹೋತ್ಸವದ ಸಭಾ ಕಾರ್ಯಕ್ರಮದಲ್ಲಿ ಶನಿವಾರ ಸಂಜೆ ಶ್ರೀಗಳು ಅನುಗ್ರಹ ಸಂದೇಶ ನೀಡಿದರು.

ಜಗತ್ತಿನ ಉದ್ದಾರಕ್ಕಾಗಿ ಪರಮಶಿವನ ಅವತಾರವಾದ ಶಂಕರ ಭಗವತ್ಪಾದರು ನೀಡಿದ ತತ್ವ, ಆದರ್ಶ, ಧರ್ಮಾಚರಣೆ ಬೋಧನೆ ಸದಾಕಾಲವೂ ಇದೆ. ಅದನ್ನು ಅಳವಡಿಸಿಕೊಂಡು ಪಾಲನೆ ಮಾಡಬೇಕು.

ನಿತ್ಯ ದೇವರ ಸ್ಮರಣೆ ಮಾಡಬೇಕು. ಯಾರೇ ಟೀಕೆ, ಟಿಪ್ಪಣಿ ಮಾಡಿದರು ಸನಾತನ ಹಿಂದು ಧರ್ಮವನ್ನು ಬಿಟ್ಟು ಕೊಡಬಾರದು. ನಮ್ಮ ನಿತ್ಯ ಜೀವನದ ಕ್ರಮವಾಗಬೇಕು ಎಂದರು.

ಶ್ರೀಮಠದ ವ್ಯವಸ್ಥಾಪಕ ಶಿವರಾಮ ಹೆಗಡೆ ಪ್ರಾಸ್ತವಿಕ ನುಡಿ ಮಾತನಾಡಿದರು.

ಡಾ.ಗಿರೀಶ ಮಾಸೂರಕರ, ರಾಜ್ಯ ಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿ.ಪ ಸದಸ್ಯ ಪಿ.ಎಚ್.ಪೂಜಾರ, ಬಿವಿವಿ ಸಂಘದ ಕಾರ್ಯಾಧ್ಯಕ್ಷ ಶಾಸಕ ವೀರಣ್ಣ ಚರಂತಿಮಠ, ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಶಾಲಾ ಆಡಳಿತ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ, ಬಿಟಿಡಿಎ ಮಾಜಿ ಸದಸ್ಯ ಕುಮಾರ ಯಳ್ಳಿಗುತ್ತಿ, ಡಾ. ಎಂ.ಎಸ್. ದಡ್ಡೇನವರ ಇತರರು ಇದ್ದರು.

### ಭಕ್ತ ಸಮ್ಮುಖದಲ್ಲಿ ಕುಂಭಾಭಿಷೇಕ ಸಂಪನ್ನ

ಬಾಗಲಕೋಟೆ: ವಿನಾಯಕ ನಗರದ ಶೃಂಗೇರಿ ಶಾರದಾ ಪೀಠದಿಂದ ಸ್ಥಾಪಿಸಲಾಗಿರುವ ಶಂಕರಮಠದಲ್ಲಿ ಶ್ರೀ ಶಾರದಾಂಬಾ, ಶ್ರೀ ಚಂದ್ರಮೌಳೀಶ್ವರ, ಶ್ರೀ ಶಕ್ತಿ ಗಣಪತಿ ಹಾಗೂ ಶಂಕರಾಚಾರ್ಯ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಮಹೋತ್ಸವ ಭಾನುವಾರ ಸಂಭ್ರಮ, ಸಡಗರದಿಂದ ಜರುಗಿತು. ಮಹಾ ಸಂಸ್ಥಾನ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತಿ ಸನ್ನಿದಾನಂಗಳವರ ನೇತೃತ್ವದಲ್ಲಿ ಬೆಳಗ್ಗೆ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ, ಕುಂಭಾಭಿಷೇಕ ಮಹೋತ್ಸವ ವೇದ,ಘೋಷಣೆ, ಮಂತ್ರ, ಹೋಮ ಹವನಗಳ ಮೂಲಕ ನೆರವೇರಿತು. ಶ್ರೀಮಠದ ಪಂಡಿತರು ಪೂಜಾ ಕೈಂಕರ್ಯ, ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿದರು.

ನಾಲ್ಕು ಮೂರ್ತಿಗಳಿಗೆ ಬೆಳಗ್ಗೆ ಜಲಾಭಿಷೇಕ, ಕ್ಷೀರಾಭಿಷೇಕ, ಆರತಿ, ವಿಶೇಷ ಅಲಂಕಾರ ನೆರವೇರಿತು. ಬಳಿಕ ಶ್ರೀಮಠದ ಕಳಸಕ್ಕೆ 108 ಕಳಸದ ಮೂಲಕ ಶ್ರೀ ವಿಧುಶೇಖರ ಭಾರತಿ ಸನ್ನಿದಾನಂಗಳವರ ಕುಂಭಾಭಿಷೇಕ ಮಾಡಿದರು. ನಂತರ ಭಕ್ತರಿಂದ ಪಾದುಕಾ ಪೂಜೆ ಜರುಗಿತು. ಶ್ರೀಗಳಿಂದ ಸಹಸ್ರಾರು ಭಕ್ತರಿಗೆ ಮಂತ್ರಾಕ್ಷತೆ ನೀಡಲಾಯಿತು. ಜಯ ನಮಃ ಪಾರ್ವತಿ ಹರ ಹರ ಮಹಾದೇವ ಘೋಷಣೆ ಮೊಳಗಿತು. ನಂತರ ತೀರ್ಥ ಪ್ರಸಾದ ವಿತರಣೆ ನಡೆಯಿತು. ಶ್ರೀಗಳು ಭಿಕ್ಷಾ ವಂದನೆ ಸ್ವೀಕರಿಸಿ ಕಲಾದಗಿ, ಜಮಖಂಡಿಯತ್ತ ವಿಜಯ ಯಾತ್ರೆ ಕೈಗೊಂಡರು. ಎರಡು ಬಾಗಲಕೋಟೆ ನಗರದಲ್ಲಿ ಹಬ್ಬದ ವಾತಾವರಣ ಸೃಷ್ಠಿಯಾಗಿತ್ತು. ಸಾವಿರಾರು ಜನ ಶ್ರೀಗಳ ದರ್ಶನ ಪಡೆದು ಪುನೀತರಾದರು.

## ಬಾದಾಮಿ: ಮಹಿಳಾ ದಿನಾಚರಣೆ

ಬಾದಾಮಿಯ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಗಣ್ಯರು ಸಿಬ್ಬಂದಿಗಳನ್ನು ಸನ್ಮಾನಿಸುತ್ತಿರುವುದು

**ಬಾದಾಮಿ:** ಇಂದು ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿಯೂ ಮುನ್ನಡೆಯುತ್ತಿದ್ದು ಸಾಧನೆ ತೋರುತ್ತಿದ್ದಾರೆ, ಸರಕಾರ ಮಹಿಳೆಯರಿಗೆ ಶಕ್ತಿ ಯೋಜನೆ ಮೂಲಕ ಉಚಿತ ಸಾರಿಗೆ ಕಲ್ಪಿಸಿದ್ದಾರೆ ಎಂದು ಬಾದಾಮಿ ಘಟಕ ವ್ಯವಸ್ಥಾಪಕ ಎ. ಎ.ಕೋರಿ ಹೇಳಿದರು

ಅವರು ನಗರದ ವಾಯುವ್ಯ ಕರ್ನಾಟಕ ರಸ್ತೆಸಾರಿಗೆ ಸಂಸ್ಥೆಯಲ್ಲಿ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸಿಬ್ಬಂದಿಯನ್ನು ಸನ್ಮಾನಿಸಿ ಮಾತನಾಡಿದರು ಮುಖ್ಯ ಅತಿಥಿಗಳಾಗಿ ಆಗಮಿಸಿದ ಬಾದಾಮಿಯ ಎಸ್.ಎಸ್.ಬಿ.ಎಂ ಮಹಾವಿದ್ಯಾಲಯದ ಪ್ರೋ. ಅಕ್ಕಮಹಾದೇವಿ ಜನಾಲಿ ಮಾತನಾಡಿ ಇವರು ಮಹಿಳಾ ದಿನಾಚರಣೆಯ ಹಿನ್ನೆಲೆ ಕುರಿತು ಮಾತನಾಡಿದರು, ಮುತ್ತಲಗೇರಿ ಸರಕಾರಿ ಪ್ರೌಢಶಾಲೆಯ ಶಿಕ್ಷಕಿ ಜಯಶ್ರೀ ಆಲೂರು ಮಾತನಾಡಿ ಶಿಕ್ಷಣದ ಕುರಿತು ಸಾವಿತ್ರಿ ಬಾಯಿ ಫುಲೆಯವರ ಸಾಧನೆಯ ಅನೇಕ ವಿಚಾರಗಳನ್ನು ವಿವರಿಸಿದರು. ಬಾದಾಮಿಯ ಎಸ್.ಜಿ.ಎಂ.ಕೆ ಪಿಯೂ ಕಾಲೇಜ್ ಉಪನ್ಯಾಸಕಿ ಪಾರ್ವತಿ ಲಂಕೆನ್ನವರ ಮಾತನಾಡಿ ಇವರು ಮಹಿಳೆಯ ಸಬಲೀಕರಣದ ಕುರಿತು ಅನೇಕ ವಿಷಯಗಳನ್ನು ಮಹಿಳೆಯರಿಗೆ ಮನಮುಟ್ಟು ಹಾಗೆ ಮಾತನಾಡಿದರು.

ಇದೇ ಸಂದರ್ಭದಲ್ಲಿ ಘಟಕದಲ್ಲಿರುವ ಎಲ್ಲಾ ಮಹಿಳಾ ಸಿಬ್ಬಂದಿಗಳನ್ನು ಗೌರವಿಸಿ ಸನ್ಮಾನಿಸಲಾಯಿತು ಮತ್ತು ಉಪಸ್ಥಿತರಿದ್ದ ಅತಿಥಿಗಳನ್ನ ಸನ್ಮಾನಿಸಿ ಬೀಳ್ಕೊಡಲಾಯಿತು.

## ಮುದ್ದಿ ಕೃತಿಗಳಲ್ಲಿದೆ ಗ್ರಾಮೀಣ ಭಾಷೆಯ ಗಟ್ಟಿತನ

**ಬಾಗಲಕೋಟೆ:** ಬಹುತೇಕ ಕತೆಗಾರರು ತಾವು ಕಂಡ ವ್ಯಕ್ತಿ, ಪ್ರದೇಶದಲ್ಲಿನ ವೈವಿಧ್ಯಮಯ ಬದುಕನ್ನು ಕತೆಗಳ ಮೂಲಕ ತಿಳಿಪಡಿಸುತ್ತಾರೆ.

ಹಾಗೆ, ಪತ್ರಕರ್ತ, ಲೇಖಕ ರವೀಂದ್ರ ಮುದ್ದಿ ಅವರು ತಮ್ಮ ಸಿಗ್ನಲ್ ಜಂಪ್, ವರದಾ ತೀರದ ಕೃತಿಗಳನ್ನು ಗ್ರಾಮ್ಯ ಸೊಗಡಿನ ಭಾಷೆಯಲ್ಲಿ ಬರೆದು ಗಟ್ಟಿತನವನ್ನು ಉಳಿಸಿ ಓದಿಸಿಕೊಂಡು ಹೋಗುತ್ತಾರೆಂದು ಚಲನಚಿತ್ರ ನಿರ್ದೇಶಕ ಹಯವದನ ಹೇಳಿದರು.

ನವನಗರದ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ ಪತ್ರಕರ್ತ, ಲೇಖಕ ರವೀಂದ್ರ ಮುದ್ದಿ ಅವರು ಕಥಾ ಸಂಕಲನಗಳ ಕೃತಿಗಳ ಪರಿಚಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರವೀಂದ್ರ ಮುದ್ದಿಯವರು ತಮ್ಮ ಕತೆಗಳಲ್ಲಿ ಗ್ರಾಮೀಣ ಬದುಕನ್ನು ವಿಶ್ಲೇಷಿಸುತ್ತಾ ವ್ಯಕ್ತಿಗಳನ್ನು ಪಾತ್ರದ ಮೂಲಕ ಕಟ್ಟಿಕೊಡುತ್ತಾರೆ. ಅವರ ವರದಾತೀರದ ಕೃತಿಯೊಳಗೆ ಜೀ ವನದಲ್ಲಿ ಬಂದು ಹೋಗುವ ಪಾತ್ರಗಳನ್ನು ಕಲ್ಪನೆಯಲ್ಲಿ ಮೂಡಿಸಿದ್ದಾರೆ. ಓದುಗ ಕತೆಗಳನ್ನು ಓದುತ್ತಾ ಹೋದಂತೆ ಪಾತ್ರವಾಗುವಂತೆ ಕತೆಗಳು ಮಾಡುತ್ತವೆ. ಅಲ್ಲಲ್ಲಿ ಕತೆಗಳಲ್ಲಿ ಕಣ್ಣೀರ ಭಾಷ್ಪವನ್ನು ಸುರಿಸುವಂತೆ ಮಾಡುತ್ತವೆ.

ಒಂದು ಕತೆಯಲ್ಲಿ ಬೆಟ್ಟಿಗುತ್ತಿ ಗುಂಡವ್ವಳ ಬಗ್ಗೆ ತಿಳಿಸುತ್ತಾ, ಅವಳೊಬ್ಬಳು ಅಬಲೆ ಅಲ್ಲ ಸಬಲೆ ಎನ್ನುವ ರೀತಿಯಲ್ಲಿ ಕಥೆಯ ಮೂಲಕ ತಿಳಿಸಿದ್ದಾರೆ. ಒಟ್ಟಾರೆ ವರದಾತೀರದ ವ್ಯಾಪ್ತಿಯ ಜನ ಜೀವನದ ಬಗ್ಗೆ ಕತೆಗಳ ಮೂಲಕ ತಿಳಿಸಿದ್ದಾರೆ ಎಂದರು.

ಬಾಗಲಕೋಟೆಯ ಪತ್ರಿಕಾ ಭವನದಲ್ಲಿ ಪತ್ರಕರ್ತ ರವೀಂದ್ರ ಮುದ್ದಿ ಬರೆದಿರುವ ಕಥಾ ಸಂಕಲಗಳ ಕೃತಿಗಳನ್ನು ಗಣ್ಯರು ಪ್ರದರ್ಶಿಸಿದರು.

ಬರಹಗಾರ್ತಿ ಮುರ್ತುಜಾ ಬೇಗಂ ಮಾತನಾಡಿ, ಸಿಗ್ನಲ್ ಜಂಪ್ ಕೃತಿಯಲ್ಲಿ ಲೇಖಕರು ಒಂದೊಂದು ಪಾತ್ರವನ್ನು ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ. ಆ ಪಾತ್ರಗಳು ನಮ್ಮ ಜೀವನದಲ್ಲೇ ನಡೆದಿವೆ ಎಂದು ಭಾವಿಸುವಂತೆ ಓದುಗನನ್ನು ಸೆಳೆಯುತ್ತವೆ. ಸಾಮಾಜಿಕ ನ್ಯಾಯ, ವ್ಯವಸ್ಥೆಯ ಬಗ್ಗೆ ಸಿಗ್ನಲ್ ಜಂಪ್‌ನಲ್ಲಿ ತಿಳಿಸಿದ್ದಾರೆಂದರು.

ಈ ಸಂದರ್ಭದಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿಯ ಆಂದೋಲನ ಪ್ರಶಸ್ತಿ ಪಡೆದ ಸಂಜೆದರ್ಶನ ದಿನ ಪತ್ರಿಕೆ ಸಂಪಾದಕರಾದ ಮಹೇಶ ಅಂಗಡಿ, ಲೇಖಕ ರವೀಂದ್ರ ಮುದ್ದಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಲೇಖಕ ಡಾ.ಪ್ರಕಾಶ ಖಾಡೆ ಮಾತನಾಡಿ ಹಾಗೂ ಅಂಜುಮನ್ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಡಾ. ಮೈನುದ್ದೀನ ರೇವಡಿಗಾರ, ತೋಟಗಾರಿಕೆ ವಿಶ್ವವಿದ್ಯಾಲಯದ ಕಂಟ್ರೋಲರ್ ಮಲ್ಲಿಕಾರ್ಜುನ ಶೆಲ್ಲಿಕೇರಿ ಮಾತನಾಡಿದರು. ಪಕ್ವಾನ್ ಗ್ರೂಪ್ ಮಾಲೀಕ ಪವನ್ ಸಿಮಿಕೇರಿ, ಎಲ್ಲೋ ಜೋಗಪ್ಪ ನಿನ್ನರಮನೆ ಚಿತ್ರ ತಂಡದವರು, ಕಾನಿಪ ಅಧ್ಯಕ್ಷ ಆನಂದ ಧಲಬಂಜನ್ ಸೇರಿದಂತೆ ಪತ್ರಕರ್ತರು ಇದ್ದರು.

## ಮಹಿಳೆ ಬದುಕು ಕಟ್ಟಿಕೊಳ್ಳುವ ಕಲೆ ಕಲಿಯಲಿ

**ಬಾಗಲಕೋಟೆ:** ಮಹಿಳೆಯರು ತಮ್ಮ ಮನೋಬಲ ಹಾಗೂ ಬುದ್ದಿ ಬಲದೊಂದಿಗೆ ಉತ್ತಮ ಬದುಕು ಕಟ್ಟಿಕೊಳ್ಳುವ ಕಲೆಯನ್ನು ಕಲಿತುಕೊಳ್ಳಬೇಕೆಂದು ಮಹಿಳಾ ಚಿಂತಕಿ, ಬರಹಗಾರ್ತಿ ರಶ್ಮಿ.ಎಸ್ ಹೇಳಿದರು.

ನವನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಮತ್ತು ಮಹಿಳಾ ಸಬಲೀಕರಣ ಘಟಕದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ವಿಶ್ವದ ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ದೊರೆಯವ ಅವಕಾಶಗಳಿವೆ ಎಂದರು.

ಮಹಿಳೆಯರು ಇಂದು ಕುಟುಂಬ, ಸಮಾಜ, ನಾಡು ಮತ್ತು ದೇಶ ನಿರ್ವಹಿಸುವ ಆತ್ಮವಿಶ್ವಾವನ್ನು ಬೆಳೆಸಿಕೊಂಡಿದ್ದಾರೆ. ವಿದ್ಯಾರ್ಥಿನಿಯರು, ಹುಡಗರು ತಮ್ಮ ಅಧ್ಯಯನದಲ್ಲಿ ಭಾಷಿಕ ಶುದ್ದತೆ ಕಲಿತು ಜನ ಸಮುದಾಯದ ಧ್ವನಿಯಾಗುವ ಮೂಲಕ ಬದುಕಿನಲ್ಲಿ ನೈತಿಕತೆ ಹಾಗೂ ದಕ್ಷತೆಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಮಾತನಾಡಿ, ನಮ್ಮ ಮಹಿಳೆಯರ ಮನೋಸ್ಥಿತಿಯಲ್ಲಿ ಮಾತೃತ್ವ ಮತ್ತು ಭಾತೃತ್ವದ ಶಕ್ತಿಯಿದೆ. ಇಲ್ಲಿ ಯಾರು ಮೇಲಲ್ಲ, ಕೀಳಲ್ಲ ಎಲ್ಲರೂ ಸರ್ವ ಸಮಾನರೆ ಎಂಬ ಭಾವನೆಗಳನ್ನು ನಾವು ಬೆಳಸಿಕೊಳ್ಳಬೇಕು. ನಾವೆಲ್ಲರೂ ಇರುವ ಸಮಯವನ್ನು ಸರಿಯಾಗಿ ಬಳಸಿಕೊಂಡು ಸಮಾಜದ ಆದರ್ಶ ವ್ಯಕ್ತಿಗಳಾಗಬೇಕು ಎಂದು ಹೇಳಿದರು. ಕಾಲೇಜಿನ ಪ್ರಾಚಾರ್ಯ ಡಾ.ಅರುಣ ಕುಮಾರ ಗಾಳಿ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಭಾರತದ ಸಾಂಸ್ಕೃತಿಕ ಸಮಾಜದಲ್ಲಿ ಮಹಿಳೆಯರಿಗೆ ಘನತೆ ಮತ್ತು ಗೌರವಿದೆ, ಮಾತೃತ್ವದ ಪರಂಪರೆಯನ್ನು ಪೂಜಿಸುವ ಸಂಸ್ಕಾರವು ನಮ್ಮದಾಗಿದೆ. ಸಮಾಜದಲ್ಲಿ ಮಹಿಳೆಯರಿಗೆ ಕಾಳಜಿ ಮಾಡುವದರೊಂದಿಗೆ ರಕ್ಷಣೆಯನ್ನು ಕೊಡುವ ಸಹೋದರತ್ವದ ಸಂಸ್ಕೃತಿಯನ್ನು ನಾವು ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹಾಗೂ ಬರಹಗಾರ್ತಿ ರಶ್ಮಿ.ಎಸ್ ಅವರನ್ನು ಸತ್ಕರಿ ಸಲಾಯಿತು. ಜತೆಗೆ ಮಹಿಳಾ ದಿನಾಚರಣೆ ಅಂಗ ವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಪ್ರಶಸ್ತಿ ಮತ್ತು ಬಹುಮಾನ ವಿತರಿಸಲಾಯಿತು.

ಬಾಗಲಕೋಟೆಯ ನವನಗರದಲ್ಲಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹಾಗೂ ಬರಹಗಾರ್ತಿ ರಶ್ಮಿ.ಎಸ್ ಅವರನ್ನು ಸತ್ಕರಿಸಲಾಯಿತು.

ಐಕ್ಯೂಎಸಿ ಸಂಚಾಲಕ ಡಾ. ಪ್ರಭುದೇವ ಮಂಡಿ, ಮಹಿಳಾ ಸಬಲೀಕರಣ ಘಟಕದ ಸಂಚಾಲಕ ಡಾ.ಮೂಬೀನ್ ಬೆಳಗಾಂ, ಡಾ.ಸುಮನ್ ಮುಚಖಂಡಿ, ಡಾ.ಸುಮಂಗಲಾ ಮೇಟಿ ಇದ್ದರು.

## ಮಹಿಳೆ ಅಬಲೆಯಲ್ಲ ಸಬಲೆ: ಮೇತ್ರಿ

**ಗುಳೇದಗುಡ್ಡ:** ಇಂದಿನ ಆಧುನಿಕ ಜಗತ್ತಿನಲ್ಲಿ ಮಹಿಳೆಯು ಎಲ್ಲ ರಂಗದಲ್ಲಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಿ ಉನ್ನತ ಸ್ಥಾನದಲ್ಲಿದ್ದಾಳೆ. ಮಹಿಳೆಯು ಅಬಲೆಯಲ್ಲ ಸಬಳೆಯಾಗಿದ್ದಾಳೆ. ಮಹಿಳೆಯರ ಕಲ್ಯಾಣಕ್ಕೆ ಸರಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸುತ್ತಿದೆ ಅವುಗಳನ್ನು ಸರಿಯಾಗಿ ಬಳಕೆ ಮಾಡಿಕೊಂಡು ಜೀವನದಲ್ಲಿ ಯಶಸ್ಸು ಸಾಧಿಸಬೇಕು ಎಂದು ತಾಪಂ ನರೇಗಾ ಸಹಾಯಕ ನಿರ್ದೇಶಕ ರಾಮಚಂದ್ರ ಮೇತ್ರಿ ಹೇಳಿದರು.

ಅವರು ಸಮೀಪದ ಕಟಗೇರಿ ಗ್ರಾಮದಲ್ಲಿ ಶನಿವಾರ ಗ್ರಾಮ ಪಂಚಾಯಿತಿ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳೆಯು ತಾಯಿಯಾಗಿ, ಸಹೋದರಿಯಾಗಿ ಮಡದಿಯಾಗಿ ಹೀಗೆ ಎಲ್ಲ ರೀತಿಯಲ್ಲಿಯು ಪತಿಯ ಬೆನ್ನಿಗೆ ನಿಲ್ಲುತ್ತಾಳೆ. ಪ್ರತಿ ಯಶಸ್ವಿ ಪುರುಷನ ಹಿಂದೆ ಒಬ್ಬ ಸ್ತ್ರೀಯರ ಪಾತ್ರ ಇದ್ದೇ ಇರುತ್ತದೆ ಎಂದರು.

ಮೈತ್ರಾ ಪೂಜಾರ, ಭಾರತಿ ಲೆಂಕೆನ್ನವರ, ಶೀಲಾ ಮೇಟಿ, ರುಕ್ಮೀಣೀ ಅಂಬಿಗೇರ, ನೀಲಗಂಗವ್ವ ಲೋಕಾಪೂರ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ಸುಮಿತ್ರಾ ದ್ಯಾವಣ್ಣವರ, ಉಪಾಧ್ಯಕ್ಷ ರಾಮಚಂದ್ರಪ್ಪ ಡೋಣಿ, ವಿಜಯಲಕ್ಷ್ಮೀ ಮೋಖಾಶಿ, ಭೀಮಪ್ಪ ಪೂಜಾರ, ರಾಮರೂಢ ಲೆಂಕೆನ್ನವರ ಸೇರಿದಂತೆ ಇತರರು ಇದ್ದರು.

ಹಾನಾಪೂರ: ಸಮೀಪದ ಹಾನಾಪೂರ ಗ್ರಾಮ ಪಂಚಾಯಿತಿ ಹಾಗೂ ಗ್ರಾಕೂಸ್ ವತಿಯಿಂದ ಮುರುಡಿ ಗ್ರಾಮದಲ್ಲಿ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.

ಗುಳೇದಗುಡ್ಡ ಕಟಗೇರಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ನಡೆದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಿಳಾ ಸಾಧಕಿಯರನ್ನು ಗೌರವಿಸಲಾಯಿತು.

ತಾಪಂ ನರೇಗಾ ಸಹಾಯಕ ನಿರ್ದೇಶಕ ರಾಮಚಂದ್ರ ಮೇತ್ರಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಸರಕಾರ ಮಹಿಳೆಯರ ಅಭಿವೃದ್ಧಿಗೆ ಹಾಗೂ ಅವರ ರಕ್ಷಣೆ ಸಲುವಾಗಿ ಹಮ್ಮಿಕೊಂಡ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಜಗದೀಶ ಹಿರೆಗೌಡರ, ಭೀಮಪ್ಪ ಡಂಗಿ, ಬಸವರಾಜ ದಳವಾಯಿ, ಶಂಕ್ರರ ಹೂಗಾರ, ಫಕೀರಪ್ಪ ಗೌಡ್ರ, ಮಂಜುಳಾ ನೀರಲಕೇರಿ ಸೇರಿದಂತೆ ಇತರರು ಇದ್ದರು.

## ವಿವಿಧ ಸಮುದಾಯ ಭವನಗಳಿಂದ ಸಾಮರಸ್ಯ

**ರಬಕವಿ-ಬನಹಟ್ಟಿ:** ಸಮುದಾಯ ಭವನಗಳು ಪರಸ್ಪರ ಸಾಮರಸ್ಯ ಬೆಳೆಸಲು ಸಹಕಾರಿ ಎಂದು ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ದೇಶ್ವರಶ್ರೀ ನುಡಿದರು. ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಆವರಣದಲ್ಲಿ ಲೋಕೋಪಯೋಗಿ ಇಲಾಖೆಯಡಿ ರು.40 ಲಕ್ಷ ವೆಚ್ಚದಲ್ಲಿ ಗುರುದೇವ ಬ್ರಹ್ಮಾನಂದ ಸಮುದಾಯ ಭವನ ನೂತನ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ಸಲ್ಲಿಸಿ ಮಾತನಾಡಿದ ಶ್ರೀಗಳು ಸಮುದಾಯಗಳ ಪ್ರತಿಯೊಂದು ಕಾರ್ಯಕ್ರಮಗಳಿಗೆ ಶಾಂತ ಮತ್ತು ಧಾರ್ಮಿಕ ನೆಲೆಯಾಗಿರುವ ಶ್ರೀಗುರುದೇವ ಬ್ರಹ್ಮಾನಂದ ಆಶ್ರಮದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಮುಂದಾಗಿರುವುದು ಸಂತಸ ತಂದಿದೆ ಎಂದರು.

ಶಾಸಕ ಸಿದ್ದು ಸವದಿ ಗುರುದೇವರ ದಿವ್ಯ ಸನ್ನಿಧಿಯಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ ನೀಡುತ್ತಿರುವುದು ಸ್ವಂತವಾಗಿ ನನಗೆ ಸಂತೃಪ್ತಿ ಮೂಡಿಸಿದೆ. ಸಾಕಷ್ಟು ಜನಸೇವೆಯಲ್ಲಿ ನಿರತವಾಗಿರುವ ನಮಗೆ ಇಂಥ ಸದವಕಾಶ ದೊರೆತಿರುವುದು ಸುಕೃತವೆಂದರು. ಸಮುದಾಯ ಭವನ ಕಾಮಗಾರಿಗೆ ಅನುದಾನ ಕೊರತೆಯಾದಲ್ಲಿ ಮುಂದಿನ ದಿನಗಳಲ್ಲಿ ಸರಕಾರದಿಂದ ಇನ್ನಷ್ಟು ಆರ್ಥಿಕ ನೆರವು ತರಲು ಶ್ರಮಿಸುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ನಗರಾಧ್ಯಕ್ಷೆ ವಿದ್ಯಾ ದಬಾಡಿ, ಸಂಜಯ ತೆಗ್ಗಿ, ಮಹಾದೇವ ಕೋಟ್ಯಾಳ, ಜಯಪ್ರಕಾಶ ಸೊಲ್ಲಾಪುರ, ಮಹಾದೇವ ದುಪದಾಳ, ,ಬಸವರಾಜ ತೆಗ್ಗಿ, ಧರೆಪ್ಪ ಉಳ್ಳಾಗಡ್ಡಿ, ಶ್ರೀಶೈಲ ಬೀಳಗಿ, ಬುದ್ದಪ್ಪ ಕುಂದಗೋಳ, ಮರಗೆಪ್ಪ ಮಿರ್ಜಿ ಸೇರಿದಂತೆ ಅನೇಕರಿದ್ದರು.

## ಬಾಗಲಕೋಟೆ ಹೋಳಿ ಪರಂಪರೆ ಉಳಿಸಿ: ಶಾಸಕ ಪೂಜಾರ ಕರೆ

### ಮಾಧವ ಸೇವಾ ಕೇಂದ್ರದಿಂದ ಹಲಗೆ ಮೇಳ ಸ್ಪರ್ಧೆ , ಹೋಳಿ ಹಬ್ಬಕ್ಕೆ ರಂಗು

**ಬಾಗಲಕೋಟೆ:** ನಗರದ ಸಾಂಪ್ರದಾಯಿಕ ಹೋಳಿ ಆಚರಣೆಯನ್ನು ಉಳಿಸಿ ಮುಂದಿನ ಪೀಳಿಗೆಗೂ ತಿಳಿಸುವ ನಿಟ್ಟಿನಲ್ಲಿ ಮಾಧವ ಸೇವಾ ಕೇಂದ್ರ ಪ್ರತಿ ವರ್ಷ ಹಮ್ಮಿಕೊಳ್ಳುತ್ತಿರುವ ಹಲಗೆ ಮೇಳ ಸ್ಪರ್ಧೆ ಸ್ತುತ್ಯಾರ್ಹ ಎಂದು ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಹೇಳಿದರು.

ನಗರದ ಬಸವೇಶ್ವರ ವೃತ್ತದ ಹೊಳೆ ಆಂಜನೇಯ ದೇವಸ್ಥಾನ ಬಳಿ ಶನಿವಾರ ರಾತ್ರಿ ಹಮ್ಮಿಕೊಂಡಿದ್ದ ನಮ್ಮ ಊರು - ನಮ್ಮ ಹಬ್ಬ ಹಲಗೆ ಮೇಳ ಸ್ಪರ್ಧೆಯಲ್ಲಿ ಅವರು ಮಾತನಾಡಿದರು. ಬಾಗಲ ಕೋಟೆ ಹೋಳಿ ಹಬ್ಬಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಸೌಹಾರ್ದ ಬೆಳೆಸುವ ಶಕ್ತಿ ಇದೆ. ಜಾತಿ, ಮತ, ಪಂಥ ಎನ್ನದೆ ಎಲ್ಲರೂ ಸೇರಿ ಏಕತೆಯಿಂದ ಹೋಳಿ ಆಚರಿಸುವ ಪರಂಪರೆ ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದನ್ನು ಉಳಿಸುವ ನಿಟ್ಟಿನಲ್ಲಿ ಮಾಧವ ಸೇವಾ ಕೇಂದ್ರ ಉತ್ತಮ ಕಾರ್ಯ ಮಾಡುತ್ತಿದೆ. ಹಬ್ಬಗಳು ನಮ್ಮ ಸಂಸ್ಕೃತಿಯ ಪ್ರತೀಕ. ಎಲ್ಲರೂ ಸೇರಿ ಹೋಳಿ ಆಚರಿಸಬೇಕು ಎಂದರು.

ಸ್ಪರ್ಧೆಗೆ ಚಾಲನೆ ನೀಡಿದ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, ಬಾಗಲಕೋಟೆ ಹೋಳಿ ದೇಶದಲ್ಲೇ ಪ್ರಸಿದ್ಧಿ ಪಡೆದಿದೆ. ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ನಗರದಲ್ಲಿದ್ದಾಗ ನಾನೂ ಬಣ್ಣದಾಟದ ಸಂತಸದಲ್ಲಿ ಭಾಗಿಯಾಗಿದ್ದೆ. ಎಲ್ಲರೂ ಸೇರಿ ಹಬ್ಬ ಆಚರಿಸುವ ಮೂಲಕ ಸಂಸ್ಕೃತಿ ಉಳಿಸಬೇಕು ಎಂದರು. ಜಿಪಂ ಸಿಇಒ ಶಶಿಧರ ಕುರೇರ ಹಾಗೂ ಎಸ್ಪಿ ಅಮರನಾಥ ರೆಡ್ಡಿ ಮಾತನಾಡಿ, ಹೋಳಿ ಕೆಟ್ಟದ್ದನ್ನು ಸುಡುವ ಆಚರಣೆ. ದ್ವೇಷವನ್ನು ಮರೆತು ಎಲ್ಲರೂ ಏಕತೆಯಿಂದ ರಂಗಿನಾಟದಲ್ಲಿ ಭಾಗವಹಿಸಬೇಕು. ಪಿಯುಸಿ ಪರೀಕ್ಷೆಗಳಿದ್ದು, ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಬಣ್ಣ ಆಡಬೇಕು. ಹಬ್ಬದಲ್ಲಿ ಹಿಂದೆ ಯಾವುದೇ ಅಹಿತಕರ ಘಟನೆ ನಡೆಯದಂತೆ ನಗರದ ಜನತೆ ತುಂಬಾ ಸಹಕಾರ ನೀಡಿದ್ದು, ಈ ವರ್ಷವೂ ಶಾಂತಿಯುತವಾಗಿ ಹಬ್ಬ ಆಚರಿಸಲು ಸಹಕರಿಸಬೇಕು. ಹೋಳಿ ಆಚರಣೆ ಸಮಿತಿ ಅಧ್ಯಕ್ಷ ಕಳಕಪ್ಪ ಬಾದೋಡಗಿ ಹಲಗೆ ವಾದನದ ಮೂಲಕ ಜನಮನ ರಂಜಿಸಿದರು. ಡಾ.ಸಂದೀಪ ಹುಯಿಲಗೋಳ, ಡಾ ಸುನಿತಾ ಕತಾರೆ ಔಷಧ ಪರಿವೀಕ್ಷಕರಾದ ಅರುಣ ಕತಾರೆ ಪತ್ರಕರ್ತ ರವಿ ಮೂಕಿ, ಬಸಪ್ಪ ಸ್ವಾಗಿ, ಬಂಡೇರಾವ್ ಸರದೇಸಾಯಿ, ಮುಖಂಡ ಉಮೇಶ ಮೇಟಿ, ಕಿರಣ ಶೆಟ್ಟರ, ಪ್ರವೀಣ ಖಾತೆದಾರ, ನಾಗರಾಜ ಹದ್ಲಿ, ಅರವಿಂದ ನಾವಲಗಿ, ದಿನೇಶ ಬಾರ್ಶಿ ಶಿವಕುಮಾರ ನಂದಿಕೋಲಮಠ, ಭತರ ಲೋಖಂಡೆ, ಗಣಪತಸಾ ದಾನಿ ನಾರಾಯಣ ದೇಸಾಯಿ ಶ್ರೀದರ ನೀಲನಾಯಕ ಬಸವರಾಜ ಹೊನ್ನಳ್ಳಿ ಶಿವಾನಂದ ಮಲ್ಲಾಪೂರ, ಪ್ರಭು ಇಂಡಿ ಗೋಪಾಲ ಹಳಪೇಟ ಮತ್ತಿತರರು ಉಪಸ್ಥಿತರಿದ್ದರು.

ಬಾಗಲಕೋಟೆಯಲ್ಲಿ ಮಾಧವ ಸೇವಾ ಕೇಂದ್ರದಿಂದ ಹಮ್ಮಿಕೊಂಡಿದ್ದ ಹಲಗೆ ಸ್ಪರ್ಧೆಗೆ ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ ಚಾಲನೆ ನೀಡಿದರು.

### ಕಿಲ್ಲಾ ತಂಡಕ್ಕೆ ಪ್ರಥಮ ಸ್ಥಾನ

ಹಲಗೆ ವಾದನ ಸ್ಪರ್ಧೆಯಲ್ಲಿ ಎರಡು ಮಹಿಳಾ ತಂಡಗಳು ಸೇರಿ 15 ತಂಡಗಳು ಭಾಗವಹಿಸಿದ್ದವು. ಕಿಲ್ಲಾ ತಂಡ ಪ್ರಥಮ, ಜೈನಪೇಟೆ ತಂಡ ದ್ವಿತೀಯ, ವಿದ್ಯಾಗಿರಿಯ ನಾದ ಸಿರಿ ಮಹಿಳಾ ತಂಡ ತೃತೀಯ ಸ್ಥಾನ ಪಡೆದವು. ಜ್ಯೂನಿಯರ್ ರವಿಚಂದ್ರನ್ ರಾಜೇಶ ಬಾದಾಮಿ ಹಾಗೂ ಪ್ರೇಮಲೋಕ ಮೆಲೊಡೀಸ್ ತಂಡದಿಂದ ರಸಮಂಜರಿ ಕಾರ್ಯಕ್ರಮ ನಡೆಯಿತು.

## ದಿನ ಭವಿಷ್ಯ

**ಮೇಷ:** ಬೆವರು ಸುರಿಸಿ ದುಡಿಯುವವರನ್ನು ದೇವರು ಕೈಬಿಡುವುದಿಲ್ಲ. ಕೆಲಸದ ಮೇಲೆ ಗಮನ ಹರಿಸಿ, ಏಕಾಗ್ರತೆ ಬೆಳೆಸಿಕೊಳ್ಳಿ.

**ವೃಷಭ:** ಪ್ರಗತಿಯ ಮೆಟ್ಟಿಲನ್ನು ಏರುತ್ತಿದ್ದೀರಿ ಎಂದು ಗೊತ್ತಾದರೆ, ಕಾಲೆಳೆಯುವವರು ಇದ್ದೇ ಇರುತ್ತಾರೆ. ಆದ್ದರಿಂದ ಜಾಗ್ರತೆ.

**ಮಿಥುನ:** ದೇವರು ಎಲ್ಲರಿಗೂ ಅನ್ನ ಇಟ್ಟಿರುತ್ತಾನೆ, ಆದರೆ ಅದನ್ನು ಹುಡುಕಿಕೊಳ್ಳಬೇಕಾದ ಹೊಣೆ ನಮ್ಮದೆಂದು ಮರೆಯದಿರಿ.

**ಕಟಕ:** ಇಷ್ಟು ದಿನಗಳ ನಿಮ್ಮ ದುಡಿಮೆಗೆ ಫಲ ದೊರೆಯುವ ಸೂಚನೆ ಸಿಗಲಿದೆ. ಗುರುಪೀಠಕ್ಕೆ ತೆರಳಿ ನಮಸ್ಕಾರ ಹಾಕಿಕೊಂಡು ಬನ್ನಿ.

**ಸಿಂಹ:** ಚಿಕ್ಕವರಿದ್ದಾಗಲೇ ಹೊಣೆಗಳನ್ನು ನಿಭಾಯಿಸಿದರೆ ಮುಂದೆ ಬದುಕು ಸುಲಭ. ಈ ಅನುಭವ ನಿಮಗೆ ಆಗುತ್ತಿದೆಯಲ್ಲವೇ?

**ಕನ್ಯಾ:** ನಿಜ ಸ್ನೇಹಿತರು ಯಾರು, ಮುಖವಾಡದ ಸ್ನೇಹ ಯಾರದ್ದು ಎಂಬುದನ್ನರಿತರೆ ಬದುಕು ಅರ್ಥವಾಗುತ್ತದೆ. ದ್ವಂದ್ವ ಬೇಡ.

**ತುಲಾ:** ಬದುಕಿನಲ್ಲಿ ಬೇಗ ಉನ್ನತಿಗೇರಲು ಯಾರೋ ವಾಮಮಾರ್ಗ ಅನುಸರಿಸಿದರೆ ನೀವೂ ಅದೇ ಹಾದಿಯನ್ನು ತುಳಿಯಬೇಕಿಲ್ಲ.

**ವೃಶ್ಚಿಕ:** ಕೆಲಸ ಕೆಲಸ ಕೆಲಸ. ದೇಹಪೋಷಣೆಗೂ ಗಮನ ಕೊಡಿ. ಶರೀರ ಗಟ್ಟಿಯಾಗಿದ್ದರಷ್ಟೇ ಸಮರ್ಥವಾಗಿ ಕೆಲಸ ಮಾಡಲಾದೀತು.

**ಧನು:** ಕಾರ್ಯದ ನೆಲೆ ಬದಲಾಗಲಿದೆ, ಹೊಸ ವಾತಾವರಣದಲ್ಲಿ ಕೆಲಸ ಮಾಡಲು ಹುಮ್ಮಸ್ಸು ಬರಲಿದೆ. ಗುರುವನ್ನು ಪ್ರಾರ್ಥಿಸಿ.

**ಮಕರ:** ಚಾಡಿಕೋರರನ್ನು ದೂರ ವಿಡಿ, ನಿಮ್ಮ ವಿಮರ್ಶಕರ ಮಾತಿಗೆ ಬೆಲೆ ಕೊಡಿ. ಆಗ ಮಾತ್ರವೇ ನಿಮ್ಮ ಬದುಕಿನಲ್ಲಿ ಏಳಿಗೆಯಾಗುತ್ತದೆ.

**ಕುಂಭ:** ಸಂಬಂಧಿಗಳು ಜತೆಗಿರಲಿ ಅಂತ ನಿಮ್ಮ ಆಸೆ, ಆದರೆ ಅಂಥ ವಾತ್ಸಲ್ಯ ಅವರಿಗೂ ಇರಬೇಕಲ್ಲವೇ? ಗುರುವಿದ್ದಾನೆ, ಚಿಂತಿಸದಿರಿ.

**ಮೀನ:** ದಯೆಯೇ ಧರ್ಮದ ಮೂಲ ಎಂಬುದು ಸತ್ಯವಾದ ಮಾತು. ಇಂದು ನಿಮಗೆ ಈ ಮಾತಿನ ಪ್ರತ್ಯಕ್ಷ ಅನುಭವ ವಾಗಲಿದೆ.

● ಕೆ.ಬಿ.ಸಂತೋಷ್ ಗುರೂಜಿ

## ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಫಾಲ್ಗುಣ ಮಾಸ, ಶುಕ್ಲ ಪಕ್ಷ, ಏಕಾದಶಿ ತಿಥಿ, ಪುಷ್ಯಾ ನಕ್ಷತ್ರ, ಶೋಭಾನ ಯೋಗ, ರಾಹುಕಾಲ ಬೆಳಗ್ಗೆ 8.00ರಿಂದ 9.30ರವರೆಗೆ, ಅಭಿಜಿತ್ ಮುಹೂರ್ತ: ಮಧ್ಯಾಹ್ನ 12.06ರಿಂದ 12.54ರವರೆಗೆ.

## ಮನೆಮದ್ದು

ಚೆನ್ನಾಗಿ ಪುಡಿಮಾಡಿದ ಮೆಣಸಿನಪುಡಿಯನ್ನು ಚಿಟಿಕೆ ಪ್ರಮಾಣದಲ್ಲಿ ತೆಗೆದುಕೊಂಡು ಶುಂಠಿಯ ರಸದಲ್ಲಿ ಸೇರಿಸಿ ಸೇವಿಸುವುದರಿಂದ ಅಜೀರ್ಣವು ನಿವಾರಣೆಯಾಗುತ್ತದೆ. ಸುಟ್ಟ ಈರುಳ್ಳಿ ಅಥವಾ ಬೆಳ್ಳುಳ್ಳಿಯನ್ನು ಸೇವಿಸುವುದರಿಂದಲೂ ಅಜೀರ್ಣವು ತಹಬಂದಿಗೆ ಬರುತ್ತದೆ.

## ಸೌಂದರ್ಯ ಸೂತ್ರ

ಟೊಮೆಟೋವನ್ನು ಕತ್ತರಿಸಿ ಹೋಳುಮಾಡಿ, ಪ್ರತಿದಿನ ಮುಖದ ಮೇಲೆ ಇರಿಸಿ ನಯವಾಗಿ ತಿಕ್ಕುವುದರಿಂದ ಚರ್ಮ ನಾಜೂಕಾಗುತ್ತದೆ ಮತ್ತು ಮುಖದಲ್ಲಿನ ಚಿಕ್ಕ ರಂಧ್ರಗಳು ಚೊಕ್ಕವಾಗುತ್ತವೆ.

## ಜೀವನ ಜೋಕಾಲಿ

'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬ ಗೀತಾವಾಕ್ಯವನ್ನು ಕಂಡಾಗಲೆಲ್ಲಾ ನೆನಪಾಗುವವರು, ಅತಿರೇಕದ ಫಲಾಪೇಕ್ಷೆಯಿಲ್ಲದೆ ಬೆವರು ಸುರಿಸಿ ದುಡಿಯುವ ಕಾರ್ಮಿಕರು. ಮತ್ತೊಬ್ಬರಿಗೆ ಇರಲು ಮನೆಯನ್ನೋ, ಜೀವನೋಪಾಯಕ್ಕಾಗಿ ವ್ಯಾಪಾರೋದ್ದಿಮೆಯ ನೆಲೆಯನ್ನೋ ಕಟ್ಟಿಕೊಡಲು ದುಡಿಯುವ ಕಾರ್ಮಿಕರಲ್ಲಿ ಬಹುತೇಕರು ಸ್ವಂತಕ್ಕೊಂದು ಸೂರು ಕಟ್ಟಿಕೊಳ್ಳುವುದಕ್ಕೂ ಹರಸಾಹಸ ಪಡಬೇಕಾಗುತ್ತದೆ. ಮತ್ತೊಬ್ಬರ ಮಹಲಿಗೆ ಬಣ್ಣ ಬಳಿದು ಅದನ್ನು ಅಂದ-ಚೆಂದಗೊಳಿಸಿ ಚಿತ್ತಾಕರ್ಷಕವಾಗಿಸುವ ಕಾರ್ಮಿಕರು, ತಮ್ಮ ಬದುಕೇ ಕಳಾಹೀನವಾಗಿದ್ದರೂ ಲೆಕ್ಕಿಸದೆ ಮಳೆ-ಬಿಸಿಲು-ಚಳಿ ಎನ್ನದೆ ದುಡಿಯಬೇಕಾಗುತ್ತದೆ, ಅಪಾಯಕಾರಿ ಪರಿಸ್ಥಿತಿಗಳಲ್ಲೂ ತಮ್ಮ ಬದುಕನ್ನು ಒತ್ತೆಯಿಡಬೇಕಾಗುತ್ತದೆ. ಬೆಂಗಳೂರು ಮಹಾನಗರಿಯ ಸ್ಯಾಂಕಿ ರೋಡ್‌ನಲ್ಲಿ ಅಂಥದೊಂದು ದೃಶ್ಯ ನಮ್ಮ ಛಾಯಾಗ್ರಾಹಕರಿಗೆ ಗೋಚರಿಸಿದ್ದು ಹೀಗೆ....

▶▶ ಚಿತ್ರ: ಸುಧಾಕರ್ ದೇವರಾಜ್

# ಕರ್ಣನ ಸಾಮರ್ಥ್ಯವನ್ನು ಹೊಗಳಿದ ಶ್ರೀಕೃಷ್ಣ

## ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com


'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಮಹಾಭಾರತದ ಕಥೆಯ ಪ್ರಕಾರ, ಕುರುಕ್ಷೇತ್ರದ ಯುದ್ಧದಲ್ಲಿ ಶ್ರೀಕೃಷ್ಣನು ಅರ್ಜುನನ ಸಾರಥಿಯಾದನು. ಅದೇ ಸಮಯದಲ್ಲಿ, ಅರ್ಜುನನ ರಥದ ಮೇಲೆ ಜೋಡಿಸಲಾಗಿದ್ದ ಧ್ವಜದಲ್ಲಿ ಹನುಮಂತನು ತನ್ನ ಸೂಕ್ಷ್ಮ ರೂಪದಲ್ಲಿ ಕುಳಿತಿದ್ದನು. ತನ್ನ ಪ್ರಭು ಶ್ರೀರಾಮನ ಜತೆಯಲ್ಲಿ ಸದಾ ಇರುತ್ತಿದ್ದ ಹನುಮಂತನು ದ್ವಾಪರ ಯುಗದಲ್ಲೂ, ಶ್ರೀರಾಮನ ಅವತಾರವಾದ ಶ್ರೀಕೃಷ್ಣನೊಂದಿಗೆ ಯುದ್ಧಭೂಮಿಯಲ್ಲಿ ಇದ್ದನು.

ಕರ್ಣ ಮತ್ತು ಅರ್ಜುನ ಇಬ್ಬರೂ ಸಹೋದರರು, ಒಂದೇ ತಾಯಿಯ ಮಕ್ಕಳು. ಆದರೆ ಇಬ್ಬರೂ ಬೇರೆ ಬೇರೆ ಪಾಳಯಗಳಿಂದ ಹೋರಾಡುತ್ತಿದ್ದರು. ಮಹಾಭಾರತ ಯುದ್ಧವು ನಿರ್ಣಾಯಕ ತಿರುವಿನತ್ತ ಸಾಗುತ್ತಿತ್ತು. ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ಅನೇಕ ಯೋಧರು ಹುತಾತ್ಮರಾಗಿದ್ದರು. ಕರ್ಣನನ್ನು ಅರ್ಜುನನಂತೆ ಮಹಾನ್ ಯೋಧ ಎಂದು ಪರಿಗಣಿಸಲಾಗಿತ್ತು. ಇಬ್ಬರೂ ತಮ್ಮ ಶಕ್ತಿಶಾಲಿ ಆಯುಧಗಳ ನೆರವಿನಿಂದ ಪರಸ್ಪರರ ಮೇಲೆ ದಾಳಿ ಮಾಡುತ್ತಿದ್ದರು. ಅರ್ಜುನನ ಬಳಿ 'ಗಾಂಡೀವ' ಎಂಬ ಬಿಲ್ಲು, ಕರ್ಣನ ಬಳಿ 'ವಿಜಯ' ಎಂಬ ಬಿಲ್ಲು ಇದ್ದವು. ಪರಸ್ಪರರು ಬಾಣಗಳ ಸುರಿಮಳೆಗೈದರು. ಅರ್ಜುನನು ಕರ್ಣನ ಕಡೆಗೆ ಬಾಣಗಳನ್ನು ಪ್ರಯೋಗಿಸುತ್ತಿದ್ದಾಗ ಅವನ ರಥವು 25-30 ಹೆಜ್ಜೆ ಹಿಂದಕ್ಕೆ ಸರಿಯುತ್ತಿತ್ತು. ಅದೇ ಸಮಯದಲ್ಲಿ ಕರ್ಣನ ಬಾಣಗಳ ದಾಳಿಯನ್ನು ಎದುರಿಸುವಾಗ ಅರ್ಜುನನ ರಥವು ಕೇವಲ 2-3 ಹೆಜ್ಜೆ ಹಿಂದಕ್ಕೆ ಚಲಿಸುತ್ತಿತ್ತು. ಅರ್ಜುನನ ರಥವು ಹೀಗೆ ಹಿಂದಕ್ಕೆ ಸರಿದಾಗಲೆಲ್ಲಾ ಶ್ರೀಕೃಷ್ಣನ ಮುಖದಲ್ಲಿ ನಗು ಮೂಡುತ್ತಿತ್ತು ಹಾಗೂ ಆತ ಕರ್ಣನನ್ನು ಹೊಗಳುತ್ತಿದ್ದನು. ಇದನ್ನು ನೋಡಿ ತನ್ನನ್ನು ನಿಯಂತ್ರಿಸಿ ಕೊಳ್ಳಲಾಗದ ಅರ್ಜುನ ಹೀಗೆ ಕರ್ಣನನ್ನು ಹೊಗಳಲು ಕಾರಣವೇನೆಂದು ಶ್ರೀಕೃಷ್ಣನನ್ನು ಪ್ರಶ್ನಿಸಿದನು.

ಆಗ ಶ್ರೀಕೃಷ್ಣನು ಮುಗುಳ್ನಗುತ್ತಾ, "ಓ ಪಾರ್ಥ! ನಾನೇ ನಿನ್ನ ಸಾರಥಿ. ಈ ರಥದ ಧ್ವಜದಲ್ಲಿ ಹನುಮಂತನು ಕುಳಿತಿದ್ದಾನೆ. ಚಕ್ರಗಳ ಮೇಲೆ ಶೇಷನಾಗ, ಅಂದರೆ ನಮ್ಮಣ್ಣ ಬಲರಾಮನೂ ಇದ್ದಾನೆ. ನೀನು ಎಷ್ಟೊಂದು ದೊಡ್ಡ ಬಿಲ್ಲುಗಾರ. ನಿನ್ನ ಶೌರ್ಯದೊಂದಿಗೆ ಈ ಎಲ್ಲಾ ಶಕ್ತಿಗಳೂ ಒಗ್ಗೂಡಿದ್ದರೂ, ಕರ್ಣನು ತನ್ನ ಆಕ್ರಮಣದಿಂದ ನಿನ್ನ ರಥವನ್ನು 2-3 ಹೆಜ್ಜೆ ಹಿಂದಕ್ಕೆ ತಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ಕರ್ಣ ಎಷ್ಟು ಬಲಶಾಲಿಯಾಗಿದ್ದಾನೆ ಎಂಬುದನ್ನು ಇದರಿಂದ ನಾವು ಅರ್ಥಮಾಡಿಕೊಳ್ಳಬೇಕು" ಎಂದನು. ಈ ಮಾತುಗಳನ್ನು ಕೇಳಿದ ಅರ್ಜುನನಿಗೆ ಕರ್ಣನಂಥ ಯೋಧನ ಶಕ್ತಿಯ ಬಗ್ಗೆ ಅರಿವುಮೂಡಿತು.

ಕರ್ಣನು ಅತ್ಯಂತ ಶಕ್ತಿಶಾಲಿಯಾಗಿದ್ದನು, ಆದರೆ ಯುದ್ಧನೀತಿಗಳನ್ನು ಮುರಿಯುವ ಹಕ್ಕು ಅವನಿಗೆ ಇರಲಿಲ್ಲ. ಆತ ಅರ್ಜುನನ ಮೇಲೆ ನಿರಂತರವಾಗಿ ಆಕ್ರಮಣ ಮಾಡಿದರೂ, ಅರ್ಜುನನಿಗೆ ಯಾವುದೇ ಹಾನಿ ಮಾಡಲು ಸಾಧ್ಯವಾಗಲಿಲ್ಲ. ಇದರಿಂದ ಕಡುಕೋಪ ಗೊಂಡ ಕರ್ಣ ಒಂದೇ ಬಾರಿ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಅವು ಅದೆಷ್ಟು ಆಕ್ರಮಣಕಾರಿಯಾಗಿದ್ದವೆಂದರೆ, ಅವುಗಳಲ್ಲಿ ಕೆಲವು ಶ್ರೀಕೃಷ್ಣನನ್ನೂ ಅಪ್ಪಳಿಸಲಾರಂಭಿಸಿದವು. ಕರ್ಣನ ಒಂದು ಬಾಣವು ಹೀಗೆ ಶ್ರೀಕೃಷ್ಣನ ಎದೆಗೆ ಮತ್ತು ರಕ್ಷಾಕವಚಕ್ಕೆ ಬಡಿದಿದ್ದನ್ನು ಕಂಡ ಹನುಮಂತ ಕರ್ಣನ ಮೇಲೆ ಕೋಪಗೊಂಡು, ತಕ್ಷಣವೇ ರಥದ ಮೇಲಿನ ಧ್ವಜದಿಂದ ಕೆಳಗೆ ಜಿಗಿದು ತನ್ನ ರೂಪವನ್ನು ಪ್ರಕಟಪಡಿಸಿದ. ಕುಪಿತ ಹನುಮಂತನನ್ನು ನೋಡಿದ ಕರ್ಣ ಬಿಲ್ಲನ್ನು ಕೆಳಗಿಟ್ಟು ಕೈಮುಗಿದು ಕ್ಷಮೆ ಯಾಚಿಸಿದ. ಹನುಮಂತನು ಕೋಪದಲ್ಲಿದ್ದುದನ್ನು ಕಂಡ ಶ್ರೀಕೃಷ್ಣ, ತನ್ನತ್ತ ತಿರುಗಿ ನೋಡುವಂತೆ ಅವನಿಗೆ ಹೇಳಿದ. ಆಗ ಹನುಮಂತನು ಕೋಪದಿಂದಲೇ ಶ್ರೀಕೃಷ್ಣನನ್ನು ನೋಡಿದ. ತನ್ನ ಪ್ರಭುವನ್ನು ನೋಡುತ್ತಿದ್ದಂತೆ ಹನುಮಂತನ ಕೋಪ ಕರಗಿ, ಹಿಂದಿರುಗಿ ರಥದ ಮೇಲಿನ ಧ್ವಜವನ್ನು ಏರಿ ಕುಳಿತ.

ಹೀಗೆ ಕರ್ಣನು ಮಹಾಬಲಶಾಲಿಯಾಗಿದ್ದರೂ ಕೌರವರ ಪಾಳಯದಲ್ಲಿ ಇದ್ದುದರಿಂದ ಅವನ ಶೌರ್ಯವು ಯಾವ ಪ್ರಯೋಜನಕ್ಕೂ ಬರಲಿಲ್ಲ. ನಮಗಿರುವ ಸಾಮರ್ಥ್ಯಗಳು, ನಾವು ಯಾವುದಕ್ಕೆ ಅವನ್ನು ಉಪಯೋಗಿಸುತ್ತೇವೆ ಎನ್ನುವುದರ ಮೇಲೆ ನಿರ್ಧರಿತವಾಗುತ್ತವೆ.

## ಇಲ್ಲೊಂಚೂರು ಕೇಳ್ರೀ...

- ಸೊಪ್ಪಿನ ಜಾತಿಯ ಹಸಿರು ತರಕಾರಿಗಳನ್ನು ಅವಶ್ಯಕತೆ ಇರುವಾಗ ಮಾತ್ರವೇ ಕೊಂಡು ತರಬೇಕು; ಏಕೆಂದರೆ ಹೆಚ್ಚು ಸಮಯ ಉಳಿದರೆ ಅವು ಬಾಡಿಹೋಗುವ ಇಲ್ಲವೇ ಕೊಳೆಯುವ ಅಪಾಯವಿರುತ್ತದೆ. ಇಂಥವನ್ನು ಅಡುಗೆಯಲ್ಲಿ ಬಳಸಿದರೂ ಪ್ರಯೋಜನವಿಲ್ಲ.
- ತರಕಾರಿ, ಸೊಪ್ಪುಗಳನ್ನು ಬೇಯಿಸುವಾಗ ಅಡುಗೆ ಸೋಡಾ ಸೇರಿಸಿದರೆ ಅವು ಶೀಘ್ರವಾಗಿ ಬೇಯುತ್ತವೆ ಎಂಬುದು ಕೆಲವರ ಗ್ರಹಿಕೆ. ಆದರೆ ಆರೋಗ್ಯದ ದೃಷ್ಟಿಯಿಂದ ಅಡುಗೆ ಸೋಡಾ ಹಿತಕಾರಿಯಲ್ಲವಾದ್ದರಿಂದ ಮತ್ತು ಅದರ ಬಳಕೆಯಿಂದ ತರಕಾರಿ- ಸೊಪ್ಪುಗಳ ಸತ್ವಾಂಶ ಕುಸಿಯುವುದರಿಂದ ಸೋಡಾವನ್ನು ಪದೇಪದೇ ಬಳಸಬಾರದು. ಸೋಡಾದ ಬದಲಿಗೆ, ಹುಣಿಸೇಹಣ್ಣು ಮತ್ತು ನಿಂಬೆಹಣ್ಣನ್ನು ಬಳಸುವುದು ಒಳಿತು.

## ಪದಬಂಧ

| 1 | | | 2 | ■ | ■ | 3 | | |
|---|---|---|---|---|---|---|---|---|
| | ■ | ■ | | ■ | ■ | | ■ | ■ |
| | ■ | ■ | 4 | 5 | | | ■ | 6 |
| 7 | 8 | ■ | ■ | | ■ | ■ | 9 | |
| ■ | 10 | | | ■ | 11 | | | ■ |
| 12 | | ■ | ■ | 13 | ■ | ■ | 14 | 15 |
| | ■ | 16 | | | 17 | ■ | ■ | |
| ■ | ■ | | ■ | ■ | | ■ | ■ | |
| 18 | | | ■ | ■ | 19 | | | |

**ಎಡದಿಂದ ಬಲಕ್ಕೆ**
1. ಅಗಲವಾದ ಬಾಯಿಯುಳ್ಳ ಪಾತ್ರೆಯಿದು (4)
3. ಕರುಣೆಯಿಲ್ಲದ ಎಂದರ್ಥ (3)
4. ಅಂತಕನ ಕಿಂಕರ (4)
7. ಎತ್ತರಕ್ಕೆ ಹಾರು, ನೆಗೆ (2)
9. ಕದ್ದು ಹಾಲು ಕುಡಿಯಲು ಬಂದ ಮಾರ್ಜಾಲ (2)
10. ದಾನವನಿಗೆ ಮತ್ತೊಂದು ಹೆಸರು (3)
11. ಶ್ರೇಷ್ಠತೆ ಅಥವಾ ಮರ್ಯಾದೆ (3)
12. ಕೇಳುವ ಅಂಗ (2)
14. ನಾಲಗೆ ತಿಳಿಸಿದ ಸ್ವಾದ (2)
16. ಜೋರಾಗಿ ಅಳುವುದು (4)
18. ಅಪರೂಪಕ್ಕೆ ಸಿಕ್ಕಿದ ಆಜ್ಞಾಪತ್ರ (3)
19. ಕೆಂಪು ಕಣಗಿಲೆ ಹೂವು (4)

**ಮೇಲಿನಿಂದ ಕೆಳಕ್ಕೆ**
1. ಕಣಿ ಹೇಳುವವಳು (4)
2. ಸಕಾಲದಲ್ಲಿ ನೆರವಾಗುವ ಮಿತ್ರ (3)
3. ವಿಷಯವೊಂದರಲ್ಲಿ ನಿಪುಣನಿವನು (3)
5. ಹುಟ್ಟಿನಿಂದಲೇ ದೇಹದ ಮೇಲಿರುವ ಕಪ್ಪು ಅಥವಾ ಬಿಳಿ ಬಣ್ಣದ ಗುರುತು (2)
6. ಕಬ್ಬಿಣಕ್ಕೆ ಹಿಡಿಯುವ ಕಿಲುಬು (2)
8. ಸೂರ್ಯನೊಂದಿಗೆ ಬಂದಿರುವ ಒತ್ತೆ (3)
9. ಚರ್ಮದ ರಂಧ್ರಗಳಿಂದ ಹೊರಹೊಮ್ಮುವ ದ್ರವ (3)
12. ಬೆಂಕಿಯ ಸಣ್ಣ ಕಣ (2)
13. ಮಧುರವಾದ ಧ್ವನಿ (2)
15. ಸಪ್ತಾಹದೊಂದಿಗೆ ಬಂದಿರುವ ಅಕ್ಕಸಾಲಿಗ (4)
16. ವಿರೋಧವನ್ನು ಹೀಗೂ ಹೇಳಬಹುದು (3)
17. ಭಯ ಅಥವಾ ಹೆದರಿಕೆಯಿಂದ ಉಂಟಾದ ಕಂಪನ (3)

**ಸರಿಯುತ್ತರಗಳು**

ಎಡದಿಂದ ಬಲಕ್ಕೆ: 1.ಕೊಪ್ಪರಿಗೆ 3.ನಿರ್ದಯ 4.ಯಮದೂತ 7.ಜಿಗಿ 9.ಬೆಕ್ಕು 10.ರಕ್ಕಸ 11.ಗೌರವ 12.ಕಿವಿ 14.ರುಚಿ 16.ಆಕ್ರಂದನ 18.ನಿರೂಪ 19.ಕರವೀರ
ಮೇಲಿನಿಂದ ಕೆಳಕ್ಕೆ: 1.ಕೊರವಂಜಿ 2.ಗೆಳೆಯ 3.ನಿಷ್ಣಾತ 5.ಮಚ್ಚೆ 6.ತುಕ್ಕು 8.ಗಿರವಿ 9.ಬೆವರು 12.ಕಿಡಿ 13.ನಾದ 15.ಚಿನಿವಾರ 16.ಆಕ್ಷೇಪ 17.ನಡುಕ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

## ಕಾರ್ಟೂನ್ ಕಚಗುಳಿ

▶▶ ವ್ಯಂಗ್ಯಚಿತ್ರ ಕೃಪೆ: ಮಂಜುಲ್

ನಮಗೆ ಕಳ್ಳಕಾಕರ ಅಥವಾ ಆಸಿಡ್ ದಾಳಿಕೋರರ ಭಯವಿಲ್ಲ ಕಣ್ರೀ... ನಿಮ್ಮಂಥ ಕೆಲ ಟಿವಿ ಚಾನೆಲ್‌ನೋರು ಯಾವಾಗಂದ್ರೆ ಆವಾಗ ದಾಳಿಯಿಟ್ಟು ಅಭಿಪ್ರಾಯ ಕೇಳ್ತಾರೆ... ಅದಕ್ಕೇ ಹೀಗೆ ಮುಖ ಮುಚ್ಕೊಂಡಿರಬೇಕು, ಇಲ್ಲವೇ ಬಚ್ಚಿಟ್ಟು ಕೊಂಡಿರಬೇಕು...

## ವಿಶ್ವಯೋಗ...


ಡಾ. ಪತಂಜಲಿ ಆಚಾರ್ಯ


### ಶಂಖ ಮುದ್ರೆ

ಹಿಂದೂಗಳಲ್ಲಿ ಧಾರ್ಮಿಕ ಶುದ್ಧೀಕರಣ ಸಮಾರಂಭಗಳಲ್ಲಿ ಸಾಮಾನ್ಯವಾಗಿ ಬಳಸಲ್ಪಡುವುದು ಶಂಖಮುದ್ರೆ. ಈ ಮುದ್ರೆಯನ್ನು ಹಾಕಿದಾಗ ಅದು ಶಂಖಾಕಾರವನ್ನು ತಳೆಯುವುದರಿಂದ ಈ ಮುದ್ರೆಗೆ ಶಂಖ ಮುದ್ರೆ ಎಂಬ ಹೆಸರೇ ಬಂದಿದೆ.

**ಆಚರಿಸುವ ಕ್ರಮ:** ಚಿತ್ರದಲ್ಲಿ ತೋರಿಸಿರುವಂತೆ ಕೈಗಳನ್ನು ಪರಸ್ಪರ ಹೆಣೆದಿಟ್ಟುಕೊಳ್ಳಬೇಕು. ಅಂದರೆ, ಬಲಗೈನ ನಾಲ್ಕು ಬೆರಳುಗಳು ಎಡಗೈನ ಹೆಬ್ಬೆರಳಿನ ಸುತ್ತ ಸುತ್ತಬೇಕು ಹಾಗೂ ಬಲಗೈನ ಹೆಬ್ಬೆರಳನ್ನು ಎಡಗೈನ ತೋರುಬೆರಳಿಗೆ ತಾಗುವಂತೆ ಇಟ್ಟುಕೊಳ್ಳಬೇಕು. ಈ ಭಂಗಿಯಲ್ಲಿ ಕನಿಷ್ಠ 3೦ರಿಂದ 5 ನಿಮಿಷದವರೆಗೆ ಇರಬೇಕು.

**ಪ್ರಯೋಜನಗಳು:** ದೇಹದ ಉಷ್ಣಾಂಶವನ್ನು ತಗ್ಗಿಸಲು ಸಹಕಾರಿಯಾಗಿರುವ ಶಂಖಮುದ್ರೆಯು ಗಾಳಿ ಮತ್ತು ನೀರಿನ ಅಂಶವನ್ನು ಹೆಚ್ಚಿಸುತ್ತದೆ. ಮಾತ್ರವಲ್ಲದೆ, ಜೀರ್ಣಾಂಗ ವ್ಯೂಹದ ಹಾಗೂ ದೇಹದ ಉಲ್ಬಣಿತ ಅಥವಾ ಶಾಖದ ಸ್ಥಿತಿಯನ್ನು, ಜ್ವರವನ್ನು ನಿಯಂತ್ರಿಸಲು ಈ ಮುದ್ರೆಯನ್ನು ಅಭ್ಯಾಸ ಮಾಡಲಾಗುತ್ತದೆ.

### ಅಪಾನ ಮುದ್ರೆ

ಅಪಾನ ಮುದ್ರೆಯನ್ನು 'ಶಕ್ತಿ ಮುದ್ರೆ' ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ಪದ್ಮಾಸನ ಅಥವಾ ಸುಖಾಸನದಂಥ ಯಾವುದೇ ಸ್ಥಿರ ಆಸನದ ಭಂಗಿಯಲ್ಲಿ ಇದ್ದುಕೊಂಡು ಈ ಮುದ್ರೆಯನ್ನು ಅಭ್ಯಾಸ ಮಾಡಬಹುದು.

**ಆಚರಿಸುವ ಕ್ರಮ:** ಕೈನ ಉಂಗುರದ ಬೆರಳು ಮತ್ತು ಮಧ್ಯದ ಬೆರಳುಗಳನ್ನು ಜೋಡಿಸಿಕೊಂಡು ಹೆಬ್ಬೆರಳ ತುದಿಗೆ ಸ್ಪರ್ಶಿಸಬೇಕು. ಉಳಿದೆರಡು ಬೆರಳುಗಳು ನೇರವಾಗಿರಬೇಕು. ಈ ಭಂಗಿಯಲ್ಲಿ ಕನಿಷ್ಠ



ಪಕ್ಷ 3೦ರಿಂದ 5 ನಿಮಿಷದವರೆಗೆ ಇರಬೇಕು.

**ಪ್ರಯೋಜನಗಳು:** ಕರುಳಿನ ದೇಹದಲ್ಲಿ ಆಗಾಗ ನಿರ್ವಿಷೀಕರಣದ (ಡಿಟಾಕ್ಸಿಫಿಕೇಷನ್) ಸಮಸ್ಯೆ ಕಾಣಿಸಿಕೊಳ್ಳುವುದುಂಟು. ಬೇಸಗೆ ಕಾಲದಲ್ಲಂತೂ ಬಿಸಿಲಿನ ತಾಪದಿಂದಾಗಿ ಈ ಸಮಸ್ಯೆ ತೀವ್ರಗೊಳ್ಳುವುದಿದೆ. ಅಪಾನ ಮುದ್ರೆಯನ್ನು ಅಭ್ಯಾಸ ಮಾಡುವುದರಿಂದ ದೇಹದ ಉಷ್ಣಾಂಶ ತಗ್ಗುತ್ತದೆ, ನಿರ್ವಿಷೀಕರಣದ ಸಮಸ್ಯೆ ತಹಬಂದಿಗೆ ಬರುತ್ತದೆ ಹಾಗೂ ಮಲಬದ್ಧತೆಯ ಸಮಸ್ಯೆ ದೂರವಾಗುತ್ತದೆ.

## ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ...

# ನೀರಿನ ಮಹಿಮೆಯ ಬಲ್ಲಿರಾ?

- ದೇಹದ ನಿರ್ಮಲೀಕರಣಕ್ಕಾಗಿ ಆ ಭಗವಂತ ಸೃಷ್ಟಿಸಿದ ಅದ್ಭುತ ವಸ್ತುಗಳಲ್ಲೊಂದು- ನೀರು. ಇದು ಮಾನವನ ಆಂತರಿಕ ಮತ್ತು ಬಾಹ್ಯ ಶುದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ದೇಹದ ಸಹಜ ಕ್ರಿಯೆಗಳು ಸಮರ್ಥವಾಗಿ ಮತ್ತು ಸಮರ್ಪಕವಾಗಿ ನಡೆಯಬೇಕೆಂದರೆ ನೀರು ಬೇಕೇ ಬೇಕು. ಹೀಗಾಗಿ ಪ್ರತಿದಿನ 7ರಿಂದ 8 ಲೋಟದಷ್ಟು ಪರಿಶುದ್ಧ ನೀರನ್ನು ಕುಡಿಯಲೇಬೇಕು. ಕುದಿಸಿ ಆರಿಸಿದ ನೀರನ್ನು ಕುಡಿಯುವುದು ಯಾವತ್ತೂ ಕ್ಷೇಮಕರ, ನೀರನ್ನು ಅದರ ಸಹಜ ಸ್ಥಿತಿಗಿಂತ ತಂಪಾಗಿಸಿ ಕುಡಿಯುವುದು ಆರೋಗ್ಯದ ದೃಷ್ಟಿಯಿಂದ ಅಷ್ಟು ಒಳ್ಳೆಯದಲ್ಲ. ಬೇಸಗೆ ಕಾಲ ಬಂದಾಗ ಹೆಚ್ಚು ತಣ್ಣಗಿರುವ ನೀರನ್ನು ಕುಡಿಯಲು ತವಕಿಸುವವರು ಈ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು.
- ಹೊರಭಾಗದಲ್ಲೂ ಒಳಭಾಗದಲ್ಲೂ ಚೆನ್ನಾಗಿ ತೊಳೆದಿರುವ ತಾಮ್ರದ ಪಾತ್ರೆಯಲ್ಲಿ ರಾತ್ರಿ ನೀರನ್ನು ಸಂಗ್ರಹಿಸಿಟ್ಟುಕೊಂಡು, ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಅದನ್ನು ಕುಡಿಯುವುದರಿಂದ ದೇಹಕ್ಕೆ ಹೆಚ್ಚಿನ ಪ್ರಯೋಜನಗಳಿವೆ. ಮಳೆನೀರನ್ನು ಅದು ಭೂಮಿಯ ಮೇಲೆ ಬೀಳುವುದಕ್ಕೂ ಮೊದಲು ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಈ ನೀರು ಶುದ್ಧವೂ, ಲಘುವೂ, ಸ್ವಾದರಹಿತವೂ ಆಗಿದ್ದು ಸೇವಿಸಿದಾಗ ದೇಹಕ್ಕೂ ಮನಸಿಗೂ ಉಲ್ಲಾಸವನ್ನು ನೀಡುತ್ತದೆ, ಚೈತನ್ಯಕಾರಿಯಾಗಿರುತ್ತದೆ. ಬಟ್ಟೆಗಳನ್ನು ಒಗೆಯದ, ಜಾನುವಾರುಗಳನ್ನು ತೊಳೆಯದ, ದೇಹದ ಹೊಲಸು, ಕಾರ್ಖಾನೆಯ ಕಶ್ಮಲಗಳು, ಊರಿನ ಚರಂಡಿನೀರು ಇತ್ಯಾದಿಗಳು ಬಂದು ಸೇರದ ನದೀನೀರು ಕಫ ಮತ್ತು ಪಿತ್ತ ನಾಶಕವೂ, ವಾತಕಾರಕವೂ, ಅಗ್ನಿದೀಪಕವೂ ಆಗಿರುತ್ತದೆ. ಬಾವಿಯ ನೀರಿನ ವಿಷಯದಲ್ಲಾದರೆ, ಆಳವಾಗಿರುವ, ಸೇದುವ ಬಾವಿಯ ಸಿಹಿನೀರು ಆರೋಗ್ಯಕ್ಕೆ ಒಳ್ಳೆಯದು; ಆದರೆ ಅದರೊಳಗೆ ಹೊಕ್ಕು ತುಂಬುವಂಥ ನೀರು ಬಳಕೆಗೆ ಅಷ್ಟು ಸೂಕ್ತವಲ್ಲ.
- ಹೊಟ್ಟೆ ತೊಳೆಸುವಿಕೆ, ವಾಕರಿಕೆ ಇತ್ಯಾದಿ ಸಮಸ್ಯೆಗಳು ಉಂಟಾದಾಗ ಹೊಟ್ಟೆಯ ಮೇಲೆ ತಣ್ಣೀರುಬಟ್ಟೆ ಹಾಕಿಕೊಂಡರೆ ಶೀಘ್ರವಾಗಿ ಸಮಸ್ಯೆ ನಿವಾರಣೆಯಾಗುತ್ತದೆ. ಉಳುಕಿರುವ ಅಥವಾ ಪೆಟ್ಟು ಬಿದ್ದು ಊದಿಕೊಂಡಿರುವ ಭಾಗಕ್ಕೆ ಬಿಸಿನೀರಿನ ಶಾಖ ಕೊಡುವುದರಿಂದ ನೋವು ಶಮನವಾಗುವುದು. ಅಪಸ್ಮಾರ ರೋಗಿಯು ಪ್ರಜ್ಞಾಹೀನ ಸ್ಥಿತಿಯಲ್ಲಿರುವಾಗ ಅವರ ಬೆನ್ನುಮೂಳೆ, ಹಣೆ ಮತ್ತು ನೆತ್ತಿಗೆ ತಣ್ಣೀರನ್ನು ತಟ್ಟುವುದರಿಂದ ನರಮಂಡಲವು ಜಾಗೃತಗೊಳ್ಳುವುದು ಮತ್ತು ದೇಹಾರೋಗ್ಯ ವೃದ್ಧಿಯಾಗುವುದು.
- ತಲೆಗೆ ದಿನವೂ ತಣ್ಣೀರಿನಿಂದ ಸ್ನಾನವನ್ನು ಮಾಡುವುದರಿಂದ ತಲೆಯಲ್ಲಿ ಹೊಟ್ಟು ಏಳುವುದಿಲ್ಲ. ಅಗತ್ಯವೆನಿಸಿದಾಗ ಮಾತ್ರವೇ ಬಿಸಿನೀರಿನ ಸ್ನಾನ ಮಾಡಬೇಕು. ನೆಗಡಿಯು ವಾಸಿಯಾಗಲು ಬಿಸಿನೀರಿನ ಸ್ನಾನವು ಸಹಕಾರಿ. ಕಣ್ಣುರಿ ಇದ್ದಾಗ ತಲೆಗೆ ಬಿಸಿನೀರಿನ ಸ್ನಾನ ಮಾಡುವುದರಿಂದ ಸಮಸ್ಯೆ ತಹಬಂದಿಗೆ ಬರುತ್ತದೆ. ಆದರೆ ತಲೆಯ ಮೇಲೆ ಬಹಳ ಬಿಸಿನೀರನ್ನು ಸುರಿದುಕೊಳ್ಳಬಾರದು.

- ಬಾವು, ಪೆಟ್ಟು, ನೋವುಗಳಿಗೆ ಔಷಧ ಪ್ರಯೋಗ ಮಾಡುವುದಕ್ಕಿಂತ ತಣ್ಣೀರಿನ ಚಿಕಿತ್ಸೆಯ ಪ್ರಯೋಗವನ್ನೇ ಅನುಸರಿಸುವುದು ಸೂಕ್ತ. ಪೆಟ್ಟು, ಬಾವು, ನೋವುಗಳಾಗಿರುವ ಭಾಗವನ್ನು ಒಂದೆರಡು ನಿಮಿಷಗಳವರೆಗೆ ತಣ್ಣೀರಿನಲ್ಲಿ ಮುಳುಗಿಸಿ ಅಥವಾ ತಣ್ಣೀರನ್ನು ಸುರಿದು, ನಂತರ ಬೇಗ ಒರೆಸಿಕೊಂಡು, ಒಂದು ಒಣಬಟ್ಟೆಯಿಂದ ನೋವಿನ ಭಾಗಕ್ಕೆ ಒಂದೆರಡು ಸುತ್ತು ಕಟ್ಟಿಕೊಂಡು ಒಂದು ಗಂಟೆಯ ಬಳಿಕ ಬಿಚ್ಚಿಬಿಡಬೇಕು. ಈ ಚಿಕಿತ್ಸೆಯನ್ನು ದಿನಕ್ಕೆರಡು ಸಲ ಮಾಡಿದರೆ, ಎರಡೇ ದಿನದಲ್ಲಿ ನೋವು ಕಡಿಮೆಯಾಗಿ, ಕ್ರಮೇಣ ಬಾವೂ ಇಳಿಯುತ್ತದೆ.

## ಅತ್ಯಾಧುನಿಕ ಅಪಾರ್ಥಕೋಶ...


ಅಪಾರ್ಥಸಾರಥಿ
naadigru@gmail.com

- **ಉಚಿತ-ಖಚಿತ:** ಹಿಂದೆಲ್ಲಾ, 'ಹುಟ್ಟು ಉಚಿತ, ಸಾವು ಖಚಿತ' ಎಂಬ ಧ್ಯೇಯವಾಕ್ಯವನ್ನು ಹೇಳಲು ಈ ಜೋಡುನುಡಿಯನ್ನು ಬಳಸಲಾಗುತ್ತಿತ್ತು. ಈಗ ಬದಲಾದ ಕಾಲಘಟ್ಟದಲ್ಲಿ, 'ಕೊಟ್ಟರೆ ಉಚಿತ, ಅಧಿಕಾರ ಖಚಿತ' ಎಂಬ ಆಶಯದ ಈಡೇರಿಕೆಗೆ ಈ ಜೋಡುನುಡಿ ಬಳಕೆಯಾಗುತ್ತಿದೆಯಷ್ಟೇ!
- **ಬಾವಿ:** ಇದು ಎಲ್ಲಿ ನೆಲೆಗೊಂಡಿದೆ ಅಥವಾ ಯಾವ ಪೂರ್ವಪದದೊಂದಿಗೆ ಸೇರಿಕೊಂಡಿದೆ ಎಂಬುದರ ಮೇಲೆ ಇದರ ಅರ್ಥ ವ್ಯತ್ಯಯವಾಗುತ್ತಾ ಹೋಗುತ್ತದೆ. ಹೀಗಾಗಿ ಅರ್ಥವನ್ನು ಅವಲೋಕಿಸುವುದಕ್ಕಿಂತ ಉದಾಹರಣೆಗಳ ಮೂಲಕ ಇದನ್ನು ಅರಿಯೋಣ. ಮೊದಲ ಉದಾಹರಣೆ- 'ಹಾಳುಬಾವಿ'. "ರಾಮಕೃಷ್ಣ ಹೆಗಡೆ ಹೇಳಿದ್ರೆ ಹಾಳು ಬಾವಿಗೂ ಹಾರ್ತೀನಿ" ಅಂತ ಹಿಂದೆ ಚಿತ್ರನಟ - ಕಂ - ರಾಜಕಾರಣಿಯೊಬ್ಬರು ಬಹಿರಂಗವಾಗಿ ಹೇಳಿದ್ದುಂಟು. ಮತ್ತೊಂದು ಉದಾಹರಣೆ- 'ಸದನದ ಬಾವಿ'. ಇದರ ಆಸುಪಾಸಿನಲ್ಲಿ ಕೂತು ಧರಣಿ ಮಾಡಿದರೆ ಪಬ್ಲಿಸಿಟಿ ಚೆನ್ನಾಗಿ ಸಿಗುತ್ತೆ ಅನ್ನೋ ನಂಬಿಕೆಯಿದೆ ಕೆಲವರಲ್ಲಿ!
- **ಬೆಣ್ಣೆ:** ಯಾರಿಂದಾದರೂ ಕೆಲಸ ಮಾಡಿಸಿಕೊಳ್ಳಬೇಕಾದಾಗ ಸವರಬೇಕಾಗಿ ಬರುವ ಪದಾರ್ಥ.
- **ಕುರ್ಚಿ:** ವಾಸ್ತವವಾಗಿ ಇದಕ್ಕೆ ನಾಲ್ಕು ಕಾಲುಗಳು ಇರುತ್ತವೆಯಾದರೂ, ಇದನ್ನು ಏರಲು ಸಾವಿರಾರು ಕಾಲುಗಳು ಹಾತೊರೆಯುತ್ತಿರುತ್ತವೆ.
- **ಗ್ಯಾರಂಟಿ:** ಸೋಮಾರಿಗಳಿಗೆ ಮತ್ತು ತೂಕಡಿಸುವವರಿಗೆ ಹಾಸಿಕೊಟ್ಟ 'ಐದು ಬಗೆಯ' ಹಾಸಿಗೆ.

## ಹಲ್‌ಬಿಡಿ ಶಾಸನ



- **ಶಿಕ್ಷಕರು:** 20 ಹಣ್ಣುಗಳ ಹೆಸರನ್ನು ಯಾರು ಬೇಗ ಹೇಳ್ತೀರೋ ಅವರೇ ಜಾಣರು...
- **ಸೋಮು:** ಅಷ್ಟೇನಾ ಸರ್, ಅದ್ಯಾವ ಮಹಾ, ಹೇಳ್ತೀನಿ ನೋಡಿ. ಸೀಬೆಹಣ್ಣು, ಮಾವಿನ ಹಣ್ಣು, ಸಪೋಟ ಹಣ್ಣು, ಸೀತಾಫಲ ಹಣ್ಣು, ಕಲ್ಲಂಗಡಿ ಹಣ್ಣು, ಕರಬೂಜ ಹಣ್ಣು, ದ್ರಾಕ್ಷಿ ಹಣ್ಣು, ಮೂಸಂಬಿ ಹಣ್ಣು, ಸೇಬು ಹಣ್ಣು, ಅನಾನಸ್ ಹಣ್ಣು, ಪಪ್ಪಾಯಿ ಹಣ್ಣು, ದಾಳಿಂಬೆ ಹಣ್ಣು ಮತ್ತು ನಾಲ್ಕು ಡಜನ್ ಬಾಳೆಹಣ್ಣು...!
- **ಶಿಕ್ಷಕರು:** ತಪ್ಪಾಯ್ತು ಕಣಪ್ಪಾ, ಇನ್ ಮುಂದೆ ಇಂಥ ಪ್ರಶ್ನೆ ಕೇಳಲ್ಲ. ಅಂದ್ಹಾಗೆ ಮರೀ, ನೀನು ಶಾಲೆಯಿಂದ ಮನೇಗೆ ಹೋಗೋಕ್ಕೆ ಮುಂಚೆ ನಿನ್ನ ಪಾದದ ಕ್ಸೆರಾಕ್ಸ್ ಕೊಟ್ಟು ಹೋಗಪ್ಪಾ, ಕಟ್ಟು ಹಾಕಿಸಿ ಸ್ಟಾಫ್ ರೂಮ್‌ನಲ್ಲಿ ಇಟ್ಕೋತೀನಿ...

## ವಿಸ್ಮಯ ವಿಶ್ವ...

# ಕೊತ್ತಂಬರಿಯ ಗತ್ತು ಗೊತ್ತೇ?

ಉಪ್ಪಿಟ್ಟು, ಅವಲಕ್ಕಿ ಒಗ್ಗರಣೆ, ಚಟ್ನಿ, ಕೋಸಂಬರಿ ಇತ್ಯಾದಿ ಖಾದ್ಯ ಪದಾರ್ಥಗಳು ತಯಾರಾದ ನಂತರ ಅವುಗಳ ಮೇಲೆ ತಾಜಾ ಕೊತ್ತಂಬರಿ ಸೊಪ್ಪನ್ನು ಉದುರಿಸಿ, ಒಮ್ಮೆ ಗೊಟಾಯಿಸಿ ತಿಂದರೆ ಅದರ ಮಜವೇ ಬೇರೆ. ಕೊತ್ತಂಬರಿ ಸೊಪ್ಪಿಗಿರುವ ವಿಶಿಷ್ಟ ಪರಿಮಳವು ಯಾವುದೇ ಆಹಾರ ಪದಾರ್ಥಕ್ಕೆ ಇಂಥದೊಂದು ಆಹ್ಲಾದತೆಯನ್ನು ತಂದುಕೊಡುತ್ತದೆ.

ಆದರೆ ಕೊತ್ತಂಬರಿಯ ಗತ್ತು ಇಷ್ಟಕ್ಕೇ ನಿಲ್ಲುವುದಿಲ್ಲ, ಕಾರಣ ಅದು ಔಷಧೀಯ ಗುಣಗಳ ಆಗರವೇ ಆಗಿಬಿಟ್ಟಿದೆ. ಮಿದುಳಿನ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ ಈ ಕೊತ್ತಂಬರಿ. ಇದರಲ್ಲಿ 'ಆ್ಯಂಟಿ ಇನ್‌ಫ್ಲಮೇಟರಿ' ಮತ್ತು 'ಆ್ಯಂಟಿ ಆಕ್ಸಿಡೆಂಟ್' ಗುಣಲಕ್ಷಣಗಳು ಹೇರಳವಾಗಿರುವುದೇ ಇದಕ್ಕೆ ಕಾರಣ.

ಕೊತ್ತಂಬರಿ ಸೊಪ್ಪಿನಲ್ಲಿ ಕಂಡುಬರುವ ಕೆಲವೊಂದು ಜೀವಸತ್ವಗಳು ಹಾಗೂ ಫ್ಲೇವನಾಯ್ಡ್ ಅಂಶಗಳು ಮಿದುಳಿನ ಆಕ್ಸಿಡೇಟಿವ್ ಒತ್ತಡದ ನಿವಾರಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಮಿದುಳಿನ ನರಮಂಡಲಕ್ಕೆ ಹಾನಿಯುಂಟು ಮಾಡುವ ಕಾಯಿಲೆಗಳ ವಿರುದ್ಧ ಅವು ಹೋರಾಡುತ್ತವೆ. ಆದ್ದರಿಂದ, ನಿಮ್ಮ ಆಹಾರ ಶೈಲಿ ಯಾವುದೇ ಆಗಿರಲಿ, ಅಗತ್ಯಾನುಸಾರ ತಾಜಾ ಕೊತ್ತಂಬರಿ ಸೊಪ್ಪನ್ನು ಬಳಸಲು ಮರೆಯದಿರಿ. ಅದೂ ಸಾಧ್ಯವಾಗದಿದ್ದರೆ ಕಡೇಪಕ್ಷ, ಕೊತ್ತಂಬರಿ ಸೊಪ್ಪನ್ನು ಚೆನ್ನಾಗಿ ಕತ್ತರಿಸಿ ಮಜ್ಜಿಗೆಯಲ್ಲಿ ಹಾಕಿಕೊಂಡು ಚಿಟಿಕೆ ಉಪ್ಪು, ಸ್ವಲ್ಪ ಶುಂಠಿ ಸೇರಿಸಿಕೊಂಡು ಸಂಭ್ರಮಿಸಿಕೊಂಡು ಚಪ್ಪರಿಸಿಕೊಂಡು ಕುಡಿಯಿರಿ. ನಿಮ್ಮ ದೇಹ ಮತ್ತು ಮನಸ್ಸುಗಳಲ್ಲಿ ಆಹ್ಲಾದತೆ ಮೂಡದಿದ್ದರೆ ಕೇಳಿ!

**ಸ್ಕೋರ್:** ನ್ಯೂಜಿಲೆಂಡ್ 50 ಓವರ್‌ಗಳಲ್ಲಿ 251/7 ಡೇರಿಲ್ ಮಿಚೆಲ್ 63, ಬ್ರೇಸ್ ವೆಲ್ 53, ರಚಿನ್ ರವೀಂದ್ರ 37, ಗ್ಲೆನ್ ಫಿಲಿಫ್ಸ್ 34 (ವರುಣ್ 2-45, ಕುಲದೀಪ್ 2-40, ಜಡೇಜಾ 1-30, ಶಮಿ 1-74)
ಭಾರತ 48 ಓವರ್‌ಗಳಲ್ಲಿ 253/8 ರೋಹಿತ್-76 , ಶ್ರೇಯಸ್-48, ಗಿಲ್-31, ಅಕ್ಷರ್ ಪಟೇಲ್ 29, ಹಾರ್ದಿಕ್ ಪಾಂಡ್ಯ 18, ಜಡೇಜಾ 9, ಕೊಹ್ಲಿ 1,(ಬ್ರೇಸ್‌ವೆಲ್ 2-28, ಸ್ಯಾಂಟ್ನರ್ 2-46, ರವೀಂದ್ರ 1-47, ಜೆಮಿಶನ್ 1-24)

ಮಿಂಚಿದ ಸ್ಪಿನ್ನರ್ಸ್ | ರೋಹಿತ್ ಶರ್ಮಾ ಭರ್ಜರಿ ಆಟ | ನ್ಯೂಜಿಲೆಂಡ್ ಟ್ರೋಫಿಯ ಕನಸು ನುಚ್ಚುನೂರು

# ಕಿವಿ ಹಿಂಡಿ 3ನೇ ಬಾರಿ ಚಾಂಪಿಯನ್ಸ್

**ದುಬೈ:** ಸ್ವದೇಶದಲ್ಲೇ ನ್ಯೂಜಿಲೆಂಡ್ ವಿರುದ್ಧ ಟೆಸ್ಟ್ ಸರಣಿ ಸೋತು ಅವಮಾನಕ್ಕೀಡಾಗಿದ್ದಲ್ಲದೆ ಐಸಿಸಿ ಫೈನಲ್‌ಗೂ ಸ್ಥಾನ ಪಡೆಯದೆ ಮುಖಭಂಗ ಅನುಭವಿಸಿದ್ದ ಟೀಮ್ ಇಂಡಿಯಾ, ಇದೀಗ ಅರಬರ ನಾಡಿನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ ಪಂದ್ಯದಲ್ಲಿ ಕಿವೀಸ್ ಪಡೆಗೆ ಸೋಲುಣಿಸುವ ಮೂಲಕ ತನ್ನ ಪಾರಮ್ಯ ಮೆರೆದಿದೆ. ಸ್ವದೇಶದಲ್ಲೂ, ಆಸ್ಟ್ರೇಲಿಯಾದ ನೆಲದಲ್ಲೂ ಸೋತು ಟೀಕೆಗೆ ಗುರಿಯಾಗಿದ್ದ ತಂಡ ಇದೀಗ ಮತ್ತೊಮ್ಮೆ ಪುಟಿದೆದ್ದು ನಿಂತಿದೆ.

ಫಾರ್ಮ್ ಕಳೆದುಕೊಂಡು ನಿವೃತ್ತಿಯಾಗಿ ಎಂಬ ಅಭಿಮಾನಿಗಳಿಂದಲೇ ಕಟು ಟೀಕೆಗೆ ಗುರಿಯಾಗಿದ್ದ ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್, ರವೀಂದ್ರ ಜಡೇಜಾ ಚಾಂಪಿಯನ್ಸ್ ಟ್ರೋಫಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸುವ ಮೂಲಕ, ತಮ್ಮಲ್ಲಿ ಆಟದ ಕಸುವು ಇನ್ನೂ ಉಳಿದುಕೊಂಡಿದೆ ಎಂದು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ಪಾಕ್ ಆತಿಥ್ಯದಲ್ಲಿ ನಡೆದ ಟೂರ್ನಿಯಲ್ಲಿ ಟ್ರೋಫಿ ಎತ್ತಿ ಹಿಡಿಯುವ ಮೂಲಕ ಭಾರತದ ಬಗ್ಗೆ ಕುಹಕವಾಡಿದ್ದ ಪಾಕಿಸ್ತಾನಿಗಳಿಗೆ ತಕ್ಕ ತಿರುಗೇಟು ಕೊಟ್ಟಿದ್ದಾರೆ. ಭಾರತವನ್ನು ಸೋಲಿಸುವುದೇ ಪರಮ ಗುರಿ ಎಂದು ಹೇಳಿದ್ದ ಪಾಕ್ ಪ್ರಧಾನಿಯ ಬಾಯಿ ಮುಚ್ಚಿಸಿದ್ದಾರೆ.

ದುಬೈನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪ್ರಬಲ ನ್ಯೂಜಿಲೆಂಡ್ ಎದುರು ಬೌಲಿಂಗ್ ಹಾಗೂ ಬ್ಯಾಟಿಂಗ್ ಎರಡೂ ವಿಭಾಗಗಳಲ್ಲಿ ಸಂಘಟಿತ ಪ್ರದರ್ಶನ ತೋರಿದ ಭಾರತ ತಂಡ 4 ವಿಕೆಟ್‌ಗಳಿಂದ ರೋಚಕ ಗೆಲುವು ಪಡೆಯಿತು. ಇದರೊಂದಿಗೆ ರೋಹಿತ್ ಶರ್ಮಾ ನಾಯಕತ್ವದ ಟೀಮ್ ಇಂಡಿಯಾ 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಮುಡಿಗೇರಿಸಿಕೊಂಡಿತು. 2002 ಹಾಗೂ 2013ರ ಬಳಿಕ ಭಾರತಕ್ಕೆ ಇದು ಮೂರನೇ ಚಾಂಪಿಯನ್ಸ್ ಟ್ರೋಫಿ ಗರಿಯಾಗಿದೆ. ಮೂರು ಬಾರಿ ಟ್ರೋಫಿ ಗೆದ್ದ ಆಸೀಸ್ ದಾಖಲೆಯನ್ನು ಭಾರತ ಸರಿಗಟ್ಟಿದೆ.

ರೋಹಿತ್ ಅವರ ಅರ್ಧಶತಕದ ಬಲದಿಂದ 49 ಓವರ್‌ಗಳಿಗೆ 6 ವಿಕೆಟ್ ನಷ್ಟಕ್ಕೆ 254 ರನ್‌ಗಳನ್ನು ಗಳಿಸಿದ ಭಾರತ ನಾಲ್ಕು ವಿಕೆಟ್‌ಗಳ ರೋಚಕ ಗೆಲುವು ಸಾಧಿಸಿತು. ಟೀಮ್ ಇಂಡಿಯಾದ ಈ ಹೋರಾಟದಲ್ಲಿ ಶ್ರೇಯಸ್ ಅಯ್ಯರ್ (48, 62ಬಾಲ್), ಕೆಎಲ್ ರಾಹುಲ್ (34★ 33 ಬಾಲ್ ), ಶುಭ್‌ಮನ್ ಗಿಲ್ ( 31, 50 ಬಾಲ್ ), ಅಕ್ಷರ್ ಪಟೇಲ್ (29, 40 ಬಾಲ್ ) ಮಹತ್ತರ ಪಾತ್ರವನ್ನು ನಿಬಾಯಿಸಿದರು.

**ಮಿಂಚಿದ ಸ್ಪಿನ್ನರ್ಸ್ :** ನ್ಯೂಜಿಲೆಂಡ್ ತಂಡದ ಪರ ಪ್ರಮುಖ ಆಟಗಾರರು ವಿಫಲರಾದರೂ ಡ್ಯಾರಿಲ್ ಮಿಚೆಲ್ ಹಾಗೂ ಮೈಕಲ್ ಬ್ರೇಸ್‌ವೆಲ್ ಅರ್ಧಶತಕ ಬಾರಿಸಿ ತಂಡದ ಮೊತ್ತ 250ರ ಗಡಿ ದಾಟಲು ನೆರವಾದರು. ಸೆಮಿಫೈನಲ್ ಪಂದ್ಯದಂತೆ ಈ ಪಂದ್ಯದಲ್ಲೂ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ನ್ಯೂಜಿಲೆಂಡ್ ತಂಡದ ನಾಯಕ ಮಿಚೆಲ್ ಸ್ಯಾಂಟ್ನರ್ ಅವರ ಯೋಜನೆ 8ನೇ ಓವರ್‌ವರೆಗೂ ಚೆನ್ನಾಗಿಯೇ ಇತ್ತು. ಓಪನರ್ಸ್ ವಿಲ್ ಯಂಗ್ (15) ಹಾಗೂ ರಚಿನ್ ರವೀಂದ್ರ ಮುರಿಯದ ಮೊದಲನೇ ವಿಕೆಟ್‌ಗೆ 57 ರನ್‌ಗಳನ್ನು ಕಲೆ ಹಾಕಿದ್ದರು. ಮೊಹಮ್ಮದ್ ಶಮಿ ಮತ್ತು ಹಾರ್ದಿಕ್ ಪಾಂಡ್ಯ ಅವರ ವೇಗದ ಬೌಲಿಂಗ್ ದಾಳಿಯನ್ನು ಈ ಇಬ್ಬರು ಸಮರ್ಥವಾಗಿ ಎದುರಿಸಿ ಸಿಕ್ಸರ್ ಮತ್ತು ಬೌಂಡರಿಗಳ ಸುರಿಮಳೆ ಹರಿಸಿದರು. ಆ ಮೂಲಕ ಕಿವೀಸ್‌ಗೆ ಭರ್ಜರಿ ಆರಂಭವನ್ನು ತಂದುಕೊಟ್ಟರು.

**ತಿರುವು ಕೊಟ್ಟ ಕುಲ್‌ದೀಪ್:** ಚಾಂಪಿಯನ್ಸ್ ಟ್ರೋಫಿಯ ಈ ಹಿಂದಿನ ಪಂದ್ಯಗಳಲ್ಲಿ ನೀರಸ ಪ್ರದರ್ಶನ ನೀಡಿ ಅಂತಿಮ ಪಂದ್ಯಕ್ಕೆ ಆಯ್ಕೆಯಾಗುವುದೇ ಕಷ್ಟ ಎಂದು ಹೇಳಲಾಗಿದ್ದ ಕುಲ್ ದೀಪ್ ಯಾದವ್ ನಿರ್ಣಾಯಕ ಪಂದ್ಯದಲ್ಲಿ ತನ್ನ ಕರಾಮತ್ತು ಪ್ರದರ್ಶಿಸಿದರು. ಉತ್ತಮ ಆರಂಭ ಪಡೆದು ಕಿವೀಸ್ ಬೃಹತ್ ಮೊತ್ತದತ್ತ ಕಣ್ಣಿಟ್ಟಿತ್ತು. ಈ ಹಂತದಲ್ಲಿ ವರುಣ್ ಚಕ್ರವರ್ತಿ ಎಂಟನೇ ಓವರ್‌ನಲ್ಲಿ ವಿಲ್ ಯಂಗ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸಿದರು. ನಂತರ 11ನೇ ಓವರ್‌ನಲ್ಲಿ ಬಂದ ಕುಲ್‌ದೀಪ್ ಯಾದವ್ ತನ್ನ ಮೊದಲನೇ ಎಸೆತದಲ್ಲಿಯೇ 37 ರನ್ ಗಳಿಸಿ ಅಪಾಯಕಾರಿಯಾಗಿದ್ದ ರಚಿನ್ ರವೀಂದ್ರ ಅವರನ್ನು ತಮ್ಮ ಗೂಗ್ಲಿ ಮೂಲಕ ಬೌಲ್ಡ್ ಮಾಡಿದರು. ನಂತರ ತಮ್ಮ ಎರಡನೇ ಓವರ್‌ನಲ್ಲಿ ಅಪಾಯಕಾರಿ ಕೇನ್ ವಿಲಿಯಮ್ಸನ್ ಅವರಿಗೆ ಪೆವಿಲಿಯನ್ ಹಾದಿ ತೋರಿಸಿದರು. ಈ ಮೂಲಕ ಕಿವೀಸ್75 ರನ್‌ಗಳಿಗೆ 3 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಬಳಿಕ ವರುಣ್ ಚಕ್ರವರ್ತಿ 45 ರನ್ ನೀಡಿ 2 ವಿಕೆಟ್ ಕಿತ್ತರೆ, ರವೀಂದ್ರ ಜಡೇಜಾ 10 ಓವರ್‌ಗಳಿಗೆ ಕೇವಲ 30 ರನ್ ನೀಡಿ 3 ವಿಕೆಟ್ ಪಡೆದು ನ್ಯೂಜಿಲೆಂಡ್ ತಂಡವನ್ನು ಅಲ್ಪಮೊತ್ತಕ್ಕೆ ನಿಯಂತ್ರಿಸಿದರು.

**ಡ್ಯಾರಿಲ್ ಮಿಚೆಲ್-ಮೈಕಲ್ ಅರ್ಧಶತಕ:** 14 ರನ್ ಗಳಿಸಿ ಆಡುತ್ತಿದ್ದ ಟಾಮ್ ಲೇಥಮ್ ಅವರನ್ನು ರವೀಂದ್ರ ಜಡೇಜಾ ಔಟ್ ಮಾಡಿದರು. ನಂತರ ಐದನೇ ವಿಕೆಟ್‌ಗೆ ಜೊತೆಯಾದ ಮೈಕಲ್ ಬ್ರೇಸ್‌ವೆಲ್ ಮತ್ತು ಡ್ಯಾರಿಲ್ ಮಿಚೆಲ್ ಸನ್ನಿವೇಶವನ್ನು ಅರಿತುಕೊಂಡು ತಾಳ್ಮೆಯ ಆಟವನ್ನು ಪ್ರದರ್ಶಿಸಿದರು. ಅದರಲ್ಲಿಯೂ ವಿಶೇಷವಾಗಿ ಡ್ಯಾರಿಲ್ ಮಿಚೆಲ್ 101 ಎಸೆತಗಳಲ್ಲಿ ಮೂರು ಬೌಂಡರಿಗಳೊಂದಿಗೆ 63 ರನ್‌ಗಳನ್ನು ಗಳಿಸಿ ಮೊಹಮ್ಮದ್ ಶಮಿ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ಮಿಚೆಲ್ ವಿಕೆಟ್ ಒಪ್ಪಿಸಿದ ಬಳಿಕ ಕೊನೆಯವರೆಗೂ ಬ್ಯಾಟ್ ಮಾಡಿದ ಮೈಕಲ್ ಬ್ರೇಸ್‌ವೆಲ್, ಕೇವಲ 40 ಎಸೆತಗಳಲ್ಲಿ ಎರಡು ಸಿಕ್ಸರ್ ಹಾಗೂ ಮೂರು ಬೌಂಡರಿಗಳೊಂದಿಗೆ ಅಜೇಯ 53 ರನ್‌ಗಳನ್ನು ದಾಖಲಿಸಿದರು. ಈ ಮೂಲಕ ಕಿವೀಸ್ ಮೊತ್ತವನ್ನು 250ರ ಗಡಿ ದಾಟಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದರು. ಇದಕ್ಕೂ ಮುನ್ನ ಇವರು 34 ರನ್ ಗಳಿಸಿ ಗ್ಲೆನ್ ಫಿಲಿಪ್ಸ್ ಜೊತೆ 53 ರನ್‌ಗಳ ಜೊತೆಯಾಟವನ್ನು ಆಡಿದರು.

### 4 ಕ್ಯಾಚ್ ಕೈ ಚೆಲ್ಲಿದ ಟೀಂ ಇಂಡಿಯಾ

ನ್ಯೂಜಿಲೆಂಡ್ ಬ್ಯಾಟರ್‌ಗಳ ನಿಧಾನಗತಿಯ ಬ್ಯಾಟಿಂಗ್ ನಡುವೆಯೂ ಟೀಂ ಇಂಡಿಯಾ ಆಟಗಾರರ ಕಳಪೆ ಕ್ಷೇತ್ರ ರಕ್ಷಣೆ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಯಿತು. ಪಂದ್ಯದ ಆರಂಭದಲ್ಲೇ ರಚಿನ್ ರವೀಂದ್ರ ಔಟ್ ಮಾಡುವ ಅವಕಾಶ ಇತ್ತು. ಆದ್ರೆ, ಕಾಟ್ ಆ್ಯಂಡ್ ಬೌಲ್ಡ್ ಅವಕಾಶವನ್ನು ಶಮಿ ಕೈ ಚೆಲ್ಲಿದರು. ಇದಾದ ಬಳಿಕ ನಂತರ ರೋಹಿತ್ ಶರ್ಮಾ ಡೀಪ್ ಮಿಡ್ ವಿಕೆಟ್ ವಿಭಾಗದಲ್ಲಿ ಮಿಷೆಲ್ ಕ್ಯಾಚ್ ಕೈ ಚೆಲ್ಲಿದರು. ಇನ್ನೂ, ರವೀಂದ್ರ ಜಡೇಜಾ ಬ್ರೆಸ್ವೆಲ್ ರನೌಟ್ ಮಾಡಲು ವಿಕೆಟ್‌ಗೆ ಹಿಟ್ ಮಾಡುವಲ್ಲಿ ವಿಫಲವಾದರು.




### ಮಕ್ಕಳಂತೆ ಸಂಭ್ರಮಿಸಿದ ರೋಹಿತ್ - ಕೊಹ್ಲಿ

ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ದಾಖಲೆಯ ಜಯ ಗಳಿಸುತ್ತಿದ್ದಂತೆಯೇ ದೇಶ-ವಿದೇಶಗಳಲ್ಲಿ ಭಾರತೀಯರು ವಿಜಯೋತ್ಸವ ಆಚರಿಸುತ್ತಿದ್ದಾರೆ. ಭಾರತ ತಂಡದ ಹರ್ಷೋಲ್ಲಾಸ ಮೇರೆ ಮೀರಿತ್ತು. ನಾಯಕ ರೋಹಿತ್ ಶರ್ಮಾ ಮತ್ತು ಮಾಜಿ ನಾಯಕ ವಿರಾಟ್ ಕೊಹ್ಲಿ ಸಂತಸವಂತೂ ಹೇಳತೀರದು. ಇಡೀ ದೇಶವನ್ನು ಸಂತಸದ ಅಲೆಯಲ್ಲಿ ತೇಲಿಸಬೇಕು ಎಂಬ ತಂಡದ ಕನಸು ನನಸಾದಾಗ ಆಗುವ ಸಂತೋಷವೇ ಬೇರೆ. ಇಬ್ಬರೂ ದಿಗ್ಗಜ ಆಟಗಾರರು ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯ ಅದ್ಭುತ ಗೆಲುವನ್ನು ವಿಶಿಷ್ಟವಾಗಿ ಆಚರಿಸಿದರು. ಪಂದ್ಯದ ಸ್ಟಂಪ್‌ಗಳನ್ನು ಹಿಡಿದು ಇಬ್ಬರೂ ಮಕ್ಕಳಂತೆ ದಾಂಡಿಯಾ ನೃತ್ಯ ಮಾಡಿ ತಮ್ಮ ಸಂತಸ ಹಂಚಿಕೊಂಡರು. ಈ ದೃಶ್ಯವನ್ನು ಟೀವಿಯಲ್ಲಿ ವೀಕ್ಷಿಸಿ ಕೋಟ್ಯಂತರ ಭಾರತೀಯರು ಪುಳಕಗೊಂಡರು.

### ಕೊನೆಗೂ ನನಸಾದ ಕನಸು

ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ಭಾರತಕ್ಕೆ ಮತ್ತೊಂದು ಅಪೂರ್ವ ಟ್ರೋಫಿ ತಂದುಕೊಡಬೇಕೆಂಬ ಕನಸು ಕಂಡಿದ್ದವರು. ಆದರೆ ಬಹುತೇಕ ಕನಸುಗಳು ಭಗ್ನಗೊಂಡಿದ್ದವು, ಆದರೆ ಈಗ ನಿಧಾನವಾಗಿ ಆ ಕನಸುಗಳು ನನಸಾಗುತ್ತಿವೆ. 2024 ರ ಟಿ20 ವಿಶ್ವಕಪ್‌ನಲ್ಲಿ ಟೀಂ ಇಂಡಿಯಾವನ್ನು ಗೆಲುವಿನತ್ತ ಮುನ್ನಡೆಸಿದ್ದ ನಂತರ, ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಈಗ ಮತ್ತೆ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಂಡದ ಸ್ಮರಣೀಯ ಪ್ರದರ್ಶನಕ್ಕೆ ಇಡೀ ದೇಶವೇ ಹಾಡಿಹೊಗಳುತ್ತಿದೆ. ಪ್ರಧಾನಿ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ಗಣ್ಯಾತಿಗಣ್ಯರು ಪ್ರಶಂಸೆಗಳ ಸುರಿಮಳೆ ಸುರಿಸುತ್ತಿದ್ದಾರೆ.

## ಡಾಕ್ಯುಮೆಂಟರಿ ರೂಪದಲ್ಲಿ ಕ್ಯಾನ್ಸರ್ ಹೋರಾಟದ ಕಥೆ

ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು, ಬಳಿಕ ದೂರದ ಅಮೇರಿಕಾಗೆ ತೆರಳಿ ಚಿಕಿತ್ಸೆ ಪಡೆದು ಮರಳಿದ್ದಾರೆ. ಒಂದಷ್ಟು ದಿನ ಮನೆಯಲ್ಲಿಯೇ ವಿಶ್ರಾಂತಿ ಪಡೆದ ಶಿವಣ್ಣ ಈಗ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದಾರೆ. ಮೂತ್ರಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಶಿವರಾಜ್ ಕುಮಾರ್ ಆತ್ಮಸ್ಥೈರ್ಯದಿಂದ ಕ್ಯಾನ್ಸರ್ ವಿರುದ್ಧ ಹೋರಾಡಿದರು. ಅಮೇರಿಕಾದ ಮಿಯಾಮಿಯಲ್ಲಿ ಅವರಿಗೆ ಯಶಸ್ವಿ ಶಸ್ತ್ರಚಿಕಿತ್ಸೆ ನೆರವೇರಿಸಲಾಯಿತು.

ಈಗ ಶಿವರಾಜ್ ಕುಮಾರ್ ಅವರು ಕ್ಯಾನ್ಸರ್ ವಿರುದ್ಧ ಹೋರಾಡಿದ ರೀತಿಯನ್ನು ಆಧರಿಸಿ ಡಾಕ್ಯುಮೆಂಟರಿ ಮೂಡಿಬರಲಿದೆ. ಕ್ಯಾನ್ಸರ್ ಬಂದರೆ ಜೀವನವೇ ಮುಗಿಯಿತು ಎಂಬ ತಪ್ಪು ಅಭಿಪ್ರಾಯವಿದೆ. ಆದರೆ ಚಿಕಿತ್ಸೆ ಪಡೆದು ಗುಣಮುಖರಾಗಬಹುದು ಎಂದು ಹಲವರಿಗೆ ತಿಳಿದಿಲ್ಲ, ಹಾಗಾಗಿ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸಿ, ರೋಗಿಗಳಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ಡಾಕ್ಯುಮೆಂಟರಿ ನಿರ್ಮಿಸಲಾಗುತ್ತಿದೆ. ಸದ್ಯ ಶಿವರಾಜ್ ಕುಮಾರ್, ರಾಮ್ ಚರಣ್ ಅಭಿನಯದ ತೆಲುಗು ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಅದರ ಜತೆಗೆ ಸಾಲು ಸಾಲು ಕನ್ನಡ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ.

## ಕಾಲಿವುಡ್‌ಗೆ ಕಾಲಿಟ್ಟ ಸಲಗ

ಸ್ಯಾಂಡಲ್‌ವುಡ್ ಸಲಗ ದುನಿಯಾ ವಿಜಯ್ ಕನ್ನಡದ ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಸಿನಿಮಾದಲ್ಲಿ ಅಭಿನಯಿಸುವ ಜತೆಗೆ ನಿರ್ದೇಶನದಲ್ಲಿಯೂ ಬ್ಯುಸಿಯಾಗಿದ್ದಾರೆ. ಕನ್ನಡ ಮಾತ್ರವಲ್ಲ ವಿಜಯ್‌ಗೆ ಪರಭಾಷೆಯಲ್ಲಿಯೂ ಭರ್ಜರಿ ಡಿಮ್ಯಾಂಡ್ ಇದೆ. ಈಗಾಗಲೇ ತೆಲುಗಿನ ಸಿನಿಮಾದಲ್ಲಿ ನಟಿಸಿ ಮನಗೆದ್ದಿರುವ ವಿಜಯ್, ಈಗ ಕಾಲಿವುಡ್ ಅಂಗಳಕ್ಕೂ ಕಾಲಿಟ್ಟಿದ್ದಾರೆ. ನಯನತಾರ ಅಭಿನಯದ ಮೂಕುತಿ ಅಮ್ಮನ್ 2 ಚಿತ್ರದಲ್ಲಿ ವಿಜಯ್ ಖಳನಾಗಿ ಅಬ್ಬರಿಸಲಿದ್ದಾರೆ. ಮೂಕುತಿ ಅಮ್ಮನ್ ಆ್ಯಕ್ಷನ್, ಥ್ರಿಲ್ಲರ್ ಸಿನಿಮಾವಾಗಿದ್ದು ಸೆಟ್ಟೇರುವ ಮೊದಲೇ ನಿರೀಕ್ಷೆ ಹೆಚ್ಚಿಸಿದೆ. ಈ ಚಿತ್ರದಲ್ಲಿ ನಾಯಕನಷ್ಟೇ ಖಳನಾಯಕನ ಪಾತ್ರಕ್ಕೂ ಮಹತ್ವವಿದೆ. ಟಾಲಿವುಡ್ ಅಂಗಳದಲ್ಲಿ ಬಾಲಯ್ಯನ ಎದುರು ವಿಲನ್ ಆಗಿ ಅಬ್ಬರಿಸಿ ಸೈಮಾ ಮುಡಿಗೇರಿಸಿಕೊಂಡಿದ್ದ ವಿಜಯ್ ಕುಮಾರ್ ಈ ಚಿತ್ರದಲ್ಲಿ ಮತ್ತೊಮ್ಮೆ ಖದರ್ ತೋರಲಿದ್ದಾರೆ. ಸದ್ಯ ಕನ್ನಡದಲ್ಲಿ ಲ್ಯಾಂಡ್ ಲಾರ್ಡ್ ಚಿತ್ರದಲ್ಲಿ ವಿಜಯ್ ನಟಿಸುತ್ತಿದ್ದಾರೆ.

## ಶೂಟಿಂಗ್ ಆರಂಭಿಸಿದ ಡೆವಿಲ್

ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿರುವ ಡೆವಿಲ್ ಸಿನಿಮಾ ಎಲ್ಲವೂ ಅಂದಕೊಂಡಂತೆ ಆಗಿದ್ದರೆ ಇಷ್ಟೊತ್ತಿಗೆ ತೆರೆಗೆ ಬರಬೇಕಿತ್ತು. ಆದರೆ ಕೊಲೆಯ ಪ್ರಕರಣದ ಆರೋಪದಲ್ಲಿ ದರ್ಶನ್ ಜೈಲು ಸೇರಿದ್ದರು. ಹೀಗಾಗಿ ಸಿನಿಮಾದ ಚಿತ್ರೀಕರಣ ಸ್ಥಗಿತವಾಗಿತ್ತು. ಈಗ ಬಹು ದಿನಗಳ ಬಳಿಕ ಮತ್ತೆ ಚಿತ್ರೀಕರಣ ಆರಂಭವಾಗುತ್ತಿದೆ. ದಿ ಡೆವಿಲ್ ಚಿತ್ರದ ಎರಡನೇ ಹಂತದ ಚಿತ್ರೀಕರಣ ಬೆಂಗಳೂರಿನಲ್ಲಿ ಆರಂಭವಾಗಿದ್ದು, ಮುಂದಿನ ವಾರದಿಂದ ದರ್ಶನ್ ಶೂಟಿಂಗ್‌ನಲ್ಲಿ ಭಾಗಿಯಾಗಲಿದ್ದಾರೆ. ದರ್ಶನ್ ಅವರಿಗೆ ಬೆನ್ನು ನೋವಿನ ಸಮಸ್ಯೆ ಇರುವುದರಿಂದ ಈ ಹಂತದಲ್ಲಿ ಬರೀ ಮಾತಿನ ಭಾಗದ ಚಿತ್ರೀಕರಣ ಮಾತ್ರ ಮಾಡಲಾಗುವುದು. ಸಾಹಸ ಸನ್ನಿವೇಶಗಳ ಚಿತ್ರೀಕರಣವಾಗಲಿ ಅಥವಾ ಬೇರೆ ಯಾವುದೇ ರಿಸ್ಕ್ ಇರುವ ಸನ್ನಿವೇಶಗಳ ಚಿತ್ರೀಕರಣ ಮಾಡುವುದಿಲ್ಲ ಎಂದು ನಿರ್ದೇಶಕ ಪ್ರಕಾಶ್ ವೀರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಶೂಟಿಂಗ್ ಮುಗಿಸಿದ ಬಳಿಕ ಮೈಸೂರು, ಹೈದರಾಬಾದ್ ಹಾಗೂ ರಾಜಸ್ಥಾನದಲ್ಲಿಯೂ ಚಿತ್ರೀಕರಣ



ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ದರ್ಶನ್‌ಗೆ ಜತೆಯಾಗಿ ರಚನಾ ರೈ ಬಣ್ಣಹಚ್ಚುತ್ತಿದ್ದಾರೆ. ಉಳಿದಂತೆ ತುಳಸಿ, ಅಚ್ಯುತ ಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸಪ್ರಭು, ಶೋಭ್ ರಾಜ್ ಮುಂತಾದರು ತಾರಾಗಣದಲ್ಲಿದ್ದಾರೆ. ಸುಧಾಕರ್.ಎಸ್. ರಾಜ್ ಛಾಯಾಗ್ರಹಣವಿರುವ ದಿ ಡೆವಿಲ್ ಚಿತ್ರಕ್ಕೆ ಬಿ.ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸುತ್ತಿದಾರೆ. ಮೋಹನ್ ಬಿ ಕೆರೆ ಕಲಾ ನಿರ್ದೇಶನ ಹಾಗೂ ರಾಮ್ ಲಕ್ಷ್ಮಣ್ ಸಾಹಸ ನಿರ್ದೇಶನವಿದೆ. ಶ್ರೀ ಜೈಮಾತ ಕಂಬೈನ್ಸ್ ಲಾಂಛನದಲ್ಲಿ ಡೆವಿಲ್ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ.

## ಮರಳಿ ಮನಸಾಗಿದೆ ಹಾಡುಗಳ ದಿಬ್ಬಣ

ಯುವಕರನ್ನು ಸೆಳೆಯುವ ಕಥೆಯನ್ನು ಒಳಗೊಂಡ ಮರಳಿ ಮನಸಾಗಿದೆ ಚಿತ್ರದ ಹಾಡು ಬಿಡುಗಡೆಯಾಗಿದೆ. ಶಾಸಕ ಅಶ್ವಥ್ ನಾರಾಯಣ್ ಸಿನಿಮಾದ ಹಾಡು ಬಿಡುಗಡೆ ಮಾಡಿ ಚಿತ್ರ ತಂಡಕ್ಕೆ ಶುಭಕೋರಿದರು. ಎದುರಿಗೆ ಬಂದರೆ ಹೃದಯಕೆ ತೊಂದರೆ.. ಎಂಬ ಹಾಡು ಇದಾಗಿದ್ದು, ಆಶಿತ್ ಸುಬ್ರಹ್ಮಣ್ಯ ಹಾಗೂ ಶ್ರೀನಿಧಿ ಸಾಹಿತ್ಯ ಬರೆದಿದ್ದು, ಸಂತೋಷ್ ವೆಂಕಿ ದನಿಯಾಗಿದ್ದಾರೆ. ವಿನು ಮನಸು ಸಂಗೀತ ಸಂಯೋಜಿಸಿದ್ದಾರೆ.

ಈ ಹಿಂದೆ ಕಿರುಚಿತ್ರಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ನಾಗರಾಜ್ ಶಂಕರ್ ಈ ಸಿನಿಮಾಗೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಇದೊಂದು ಸಂಗೀತ ಪ್ರಧಾನ ಚಿತ್ರವಾಗಿದ್ದು ಜತೆಗೆ ಸಂಬಂಧಗಳ ಮೌಲ್ಯಗಳನ್ನು ತಿಳಿಸುವ ಸ್ಟೋರಿಯೂ ಬೆರೆತಿದೆ. ಅರ್ಜುನ್ ವೇದಾಂತ್ ನಾಯಕನಾಗಿ ನಟಿಸಿದ್ದಾರೆ. ನಿರೀಕ್ಷಾ ಶೆಟ್ಟಿ ಹಾಗೂ ಸ್ಮೃತಿ ವೆಂಕಟೇಶ್ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ.

ದಾವಣಗೆರೆಯಲ್ಲೇ ಈ ಚಿತ್ರದ ಚಿತ್ರೀಕರಣ ಆರಂಭವಾಗಿ ಕರ್ನಾಟಕದ ವಿವಿಧ ಸುಂದರ ತಾಣಗಳಲ್ಲಿ ಶೂಟಿಂಗ್

ನಡೆಸಲಾಗಿದೆ. ಇದೇ ತಿಂಗಳು ಕಲ್ಬುರ್ಗಿಯಲ್ಲಿ ಎರಡನೇ ಹಾಡು ಬಿಡುಗಡೆಯಾಗಲಿದ್ದು, ಉಳಿದ ಹಾಡುಗಳನ್ನು ಬೇರೆ ಬೇರೆ ಊರುಗಳಲ್ಲಿ ಬಿಡುಗಡೆ ಮಾಡುವ ಯೋಚನೆ ಚಿತ್ರತಂಡಕ್ಕಿದೆ. ಬೆನಕ ಟಾಕೀಸ್ ಲಾಂಛನದಲ್ಲಿ ಚಿತ್ರ ನಿರ್ಮಾಣವಾಗಿದ್ದು, ಹಾಲೇಶ್ ಛಾಯಾಗ್ರಹಣ, ಹರೀಶ್ ಕೊಮ್ಮೆ ಸಂಕಲನ ಈ ಚಿತ್ರಕ್ಕಿದೆ.

## ಶೂಟಿಂಗ್ ಮುಗಿಸಿದ ಅಭೇದ್ಯಂ

ಕರಾವಳಿಯ ಸಾಂಪ್ರದಾಯಿಕ ಕ್ರೀಡೆಯಾದ ವೀರ ಕಂಬಳ ಚಿತ್ರವನ್ನು ನಿರ್ಮಿಸಿರುವ ನಿರ್ಮಾಪಕ ಅರುಣ್ ರೈ ತೋಡಾರು ಮತ್ತೊಂದು ಚಿತ್ರವನ್ನು ನಿರ್ಮಿಸಿದ್ದಾರೆ. ವಿಜಯ ರಾಘವೇಂದ್ರ ನಾಯಕನಾಗಿ ನಟಿಸಿರುವ ಈ ಚಿತ್ರ ಅಭೇದ್ಯಂ

ಶೀರ್ಷಿಕೆಯಲ್ಲಿ ಮೂಡಿಬರುತ್ತಿದೆ. ಸಂದೀಪ್ ಬಾರಾಡಿ ಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರಕ್ಕೆ ಕಾಮಿಡಿ ಕಿಲಾಡಿಗಳು ಖ್ಯಾತಿಯ ಯುವ ಶೆಟ್ಟಿ ಚಿತ್ರಕಥೆ ಬರೆದಿದ್ದಾರೆ.

ಭೇದಿಸಲಾಗದ್ದನ್ನು ಅಭೇದ್ಯಂ ಎನ್ನುತ್ತಾರೆ. ನಿಗೂಢದವಾದ ರಹಸ್ಯವೊಂದನ್ನು ನಾಯಕ ಹೇಗೆ ಭೇಧಿಸುತ್ತಾನೆ ಎಂಬುದನ್ನು ಇಲ್ಲಿ ಥ್ರಿಲ್ಲಿಂಗ್ ಆಗಿ ಕಟ್ಟಿಕೊಡಲಾಗಿದೆ. ಕಾಮಿಡಿ ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನ ಈ ಚಿತ್ರದ ಚಿತ್ರೀಕರಣ ಈಗಾಗಲೇ ಮುಕ್ತಾಯವಾಗಿದೆ. ಬೆಂಗಳೂರು, ಮಂಗಳೂರು ಮುಂತಾದ ಕಡೆ ಚಿತ್ರೀಕರಣ ನಡೆಸಲಾಗಿದೆ. ಸದ್ಯ ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳು ಭರದಿಂದ ಸಾಗಿವೆ.

ರೋಶನ್ ವೇಗಸ್, ಸಿಂಚನಾ ಪಿ ರಾವ್, ಸುಂದರ್ ವೀಣಾ, ಪ್ರಕಾಶ್ ತುಮ್ಮಿನಾಡು, ದೀಪಕ್ ರೈ ಪಾಣಾಜೆ, ಮೋಹನ್ ಶೇಣಿ, ಯುವಾ ಶೆಟ್ಟಿ ಹಾಗೂ ಕಾಮಿಡಿ ಕಿಲಾಡಿಗಳು ಖ್ಯಾತಿಯ ರಾಕೇಶ್ ಪೂಜಾರಿ, ಪ್ರವೀಣ್ ಜೈನ್, ಸೂರಜ್ ಪಾಂಡೇಶ್ವರ್, ಸೂರ್ಯ ಕುಂದಾಪುರ, ರಾದೇಶ್ ಶೆಣೈ ಮುಂತಾದವರು ತಾರಾಗಣದಲ್ಲಿದ್ದಾರೆ.

ವರುಣ್ ಉನ್ನಿ ಕೊಚ್ಚಿನ್, ಕಿಶೋರ್, ಕುಮಾರ್ ಶೆಟ್ಟಿ ಸಂಗೀತ ಸಂಯೋಜಿಸಿರುವ ಈ ಚಿತ್ರಕ್ಕೆ ಮಯೂರ್ ಆರ್ ಶೆಟ್ಟಿ ಛಾಯಾಗ್ರಹಣ, ಗಣೇಶ್ ನೀರ್ಚಲ್ ಸಂಕಲನ, ಮಾಸ ಮಾದ ಸಾಹಸ ನಿರ್ದೇಶನ, ಮಹೇಶ್ ಎಣ್ಮೂರ್ ಅವರ ಕಲಾ ನಿರ್ದೇಶನವಿದೆ.